much, have to retire at the age of 55 years. This is another area where Government should take a look at.

Sir, there are three modes of Transportation. Air, Sea and Surface.

As far as Air Transport is concerned, there is no question of any bureaucrat coming in as a very high degree of professionalism is required, otherwise accidents will be frequent.

Sea or Water Transportation is also handled exclusively by Professionals in view of the high degree of sophistication required and the rather risky nature of the operations.

Surface transport could be divided into two categories, RAIL and ROAD. We all know that railways are handled by professionals, so why should there be such a dominance of bureaucrats in the management of ROAD Transport? I honestly believe that tangible results can be achieved if road transport is also handed over to the professionals.

Lastly, Sir, the Motor Vehicle Tax was increased recently, *i.e.*, 1st April 1983, but till the 31st of August. no Post-Office was prepared to accept the tax as they have not received any instructions from the R.T.Os. When any such legislation is passed, it is incumbent on the Department concerned to ensure that all possible facilities are provided to enable such legislation implemented. I have spoken about this to one of the officials in the Transport Department and hope the situation has been corrected, as so many lakhs of people cannot possibly go to the R.T.O. when the new tax structure was introduced.

I also believe that the R.T.O. offices in the City are inadequate considering the increasing number of vehicles on the road. At least three more offices are definitely required to reduce (*a*) the pressure on the Officials, (*b*) the possibility of corruption and (*c*) the inconvenience to the people.

Thank you very much, Sir.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಸನ್ಮಾನ್ಯ ಅಧ್ಯಕ್ಷರೇ, ಇವೊತ್ತು ವಿಶೇಷವಾಗಿ ಈ ಸದನದ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ವಿರೋಧಿಸಿ, ಈಗ ಬೇರೆ ವಿಷಯಗಳನ್ನು ಪ್ರಸ್ತಾಪ ಮಾಡಲಿಕ್ಕೆ ವೇಳೆ ಸಿಕ್ಕದೇ ಇರುವುದರಿಂದ ನಾನು ಮುಖ್ಯವಾಗಿ ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟ್ ಮೇಲೆ, ಕೆ.ಎಸ್.ಆರ್.ಟಿಸಿ. ಮೇಲೆ ವೇಳೆಯನ್ನು ಸೀಮಿತಗೊಳಿಸಬೇಕೆಂದು ನಾನು ನಿಂತಿದ್ದೇನೆ. ಇವೊತ್ತು ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಈಗಾಗಲೇ ತಾವೇ, ಹೇಳಿದ್ದೀರಿ. ರಾಜ್ಯಕ್ಕೆ ಹೆಚ್ಚು ಆದಾಯ ಬರತಕ್ ಇಲಾಖೆ ಇದು ಒಂದೇ ಇಲಾಖೆ ಎಂದು. ಕಡಿಮೆ ಖರ್ಚಿನಲ್ಲಿ ಹೆಚ್ಚು ಆದಾಯ ಕೊಡತಕ್ಕದ್ದು ಅಂದರೆ ತಪ್ಪಾಗಲಿಕ್ಕಿಲ್ಲ. ಮೋಟಾರ್ ವೆಹಿಕಲ್ಸ್‌ನಿಂದ, ಈ ವರ್ಷ 62 ಕೋಟಿ ರೂಪಾಯಿಗಳು ಆದಾಯ ಬಂದಿದೆ ಎಂದು ಹೇಳಿದ್ದೀರಿ. 62 ಕೋಟಿ ರೂಪಾಯಿಗಳನ್ನು ಹೆಚ್ಚಿಸುವುದಕ್ಕೆ ಪ್ರಯತ್ನವನ್ನೂ ಮಾಡಿದ್ದೀರಿ. ಆದರೆ, ಇದರಲ್ಲಿ ಸೋರಿಹೋಗತಕ್ಕ ಹಣದ ಬಗ್ಗೆ ಅನೇಕ ಉದಾಹರಣೆಗಳು ಕಂಡುಬರುತ್ತವೆ. ದಕ್ಷತೆ ಹೆಚ್ಚಾದರೆ ಎಲ್ಲಾ ಸರಿಹೋಗುತ್ತದೆ. ಸುಮಾರು 11 ಕೋಟಿ ರೂಪಾಯಿಗಳು ವಾಹನ ಮಾಲೀಕರಿಂದ ಬರತಕ್ಕ ತೆರಿಗೆ ಬಾಕಿ ಇದೆ ಎಂದು ತಿಳಿಸಿದ್ದೀರಿ. ಇದನ್ನು ವಸೂಲು ಮಾಡಲಿಕ್ಕೆ ಸರ್ಕಾರಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎ. ಲಕ್ಷ್ಮೀಸಾಗರ್.—ಇವೊತ್ತು ಇಲ್ಲಿ ಇರತಕ್ಕದ್ದು, ರೋಡ್ ಟ್ರಾನ್ಸ್‌ಪೋರ್ಟ್ ಮತ್ತು ಕಾರ್ಪೋರೇಷನ್ ಬಗೆ. ಮಾನ್ಯ ಸದಸ್ಯರು ಮೋಟಾರ್ ವೆಹಿಕಲ್ಸ್ ಟ್ಯಾಕ್ಸೇಷನ್‌ಗೆ ಸಂಬಂದಪಟ್ಟ ವಿಚಾರ ಮಾತನಾಡಲಿಕ್ಕೆ ಪ್ರಾರಂಭ ಮಾಡಿದ್ದಾರೆ. ಈ ಮಿತಿಯಲ್ಲಿ ಅದು ಬರುವುದಿಲ್ಲ ಎಂದು ಹೇಳಲಿಕ್ಕೆ ಇಷ್ಟ ಪಡುತ್ತೇನೆ. ಮೋಟಾರ್ ವೆಹಿಕಲ್ಸ್ ಟ್ಯಾಕ್ಸೇಷನ್ ವಿಚಾರ ಇದರಲ್ಲಿ ಬರುವುದಾದರೆ ಮಾತನಾಡಬಹುದು

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಅಧ್ಯಕ್ಷರೇ, ಈ ಇಲಾಖೆಗೆ ಬರತಕ್ಕ ಆದಾಯವನ್ನು ವರದಿಯಲ್ಲಿ ಹೇಳಿದ್ದಾರೆ. ನಾನು ಟ್ಯಾಕ್ಸೇಷನ್ ಬಗ್ಗೆ ಡಿಸ್‌ಕಷನ್ ಮಾಡಲಿಕ್ಕೆ ಹೋಗುವುದಿಲ್ಲ. ಇವೊತ್ತು ಕೆ.ಎಸ್.ಆರ್.ಟಿ.ಸಿ. ಮತ್ತು ಟ್ರಾನ್ಸ್‌ಪೋರ್ಟ್ ಅಥಾರಿಟಿಯ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಇಲ್ಲ ಎಂದರೆ ಕೆ.ಎಸ್.ಆರ್.ಟಿ.ಸಿ. ಮೇಲೆ ಮಾತನಾಡಲಿಕ್ಕೆ ಬರುವುದಿಲ್ಲ. ರಾಜ್ಯದ ಒಂದು ಇಡೀ ಜನಸ್ತೋಮದ ಪ್ರಶ್ನೆ ಇಲ್ಲಿ ಇರುತ್ತದೆ. ಆ ಇಲಾಖೆಯ ಜನರಿಗೆ ಇದು ನೇರವಾಗಿ ಸಂಬಂಧವಿರುವುದರಿಂದ, ಇದನ್ನು ಪ್ರಸ್ತಾಪ ಮಾಡುವುದು ಸೂಕ್ತ ಎಂದು ಹೇಳಿದ್ದೇನೆ. ಆ ಬಗ್ಗೆ ಮಾತನಾಡಿದರೆ ಏನೂ ತಪ್ಪಾಗುವುದಿಲ್ಲ.

SRI M. VEERAPPA MOILY.—The subject regarding Motor Vehicle Taxation also comes under the Transport Minister. So, the Hon'ble Member is well within his powers to raise this.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ನಾವು ಮಾತನಾಡದೇ ಇದ್ದ ಕೆಲವು ವಿಷಯಗಳಲ್ಲಿ ಅನೇಕ ಅನಾಹುತಗಳಾಗಿವೆ. ಯಾವುದೂ ಮುಚ್ಚುವಂಥಾದ್ದು ಆಗಬಾರದು. ಈಗ 11 ಕೋಟಿ ರೂಪಾಯಿಗಳು ವಾಹನ ಚಾಲಕರಿಂದ ವಸೂಲು ಮಾಡಬೇಕಾದ್ದು ಮಾಡಿಲ್ಲ. ಇನ್ನು 6 ಕೋಟಿ ರೂಪಾಯಿ ತೆರಿಗೆ ಬಾಕಿ ಉಳಿದಿದೆ. ತಾವು ಇದರ ಬಗ್ಗೆ ದಕ್ಷತೆಯಿಂದ ಆ ಇಲಾಖೆಯ ಅಧಿಕಾರಿಗಳನ್ನು ಕರೆದು, ಚರ್ಚೆ ಮಾಡಿ ಬಾಕಿ ಇರತಕ್ಕ ಹಣವನ್ನು ವಸೂಲು ಮಾಡಲಿಕ್ಕೆ ಹೆಜ್ಜೆಯನ್ನು ಮುಂದಿಡಬೇಕೆಂದು ಹೇಳುತ್ತೇನೆ. ಇವೊತ್ತು ಜನರ ಪ್ರಾಣ ಹಾನಿಯಾಗುವುದಕ್ಕೆ, ಅನೇಕ ಆಕ್ಸಿಡೆಂಟ್‌ಗಳು ಆಗುವುದಕ್ಕೆ ಲೈಸೆನ್ಸ್ ಕೊಡತಕ್ಕದ್ದೇ ಮುಖ್ಯ ಕಾರಣ ಎಂದು ನಾನು ಹೇಳಬೇಕಾಗಿದೆ. ಲೈಸೆನ್ಸ್ ಕೊಡುವ ವಿಚಾರದಲ್ಲಿ ಹಿಂದೆ ಟ್ರಾನ್ಸ್‌ಪೋರ್ಟ್ ಕಮಿಷನರ್ ಆಗಿದ್ದವರು ಒಬ್ಬರು 16-4-1980 ರಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದರು. ಅದು ಈ ರೀತಿ ಇದೆ: "This is the one Institution where I saw no tradition, no convention and no system. The only art and craft they knew was how to exploit the people and how to harass the people." ಟ್ರಾನ್ಸ್‌ಪೋರ್ಟ್ ಕಮಿಷನರ್ ಅವರು ನಿಜಾಂಶವನ್ನು ಕೊಟ್ಟಿದ್ದಾರೆ.

SRI M. S. KRISHNAN.—How to exploit and how to harass is the function of the department.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಲೈಸೆನ್ಸ್ ಕೊಡುವ ಮುಖೇನ ಹೆಚ್ಚು ಅನಾಹುತಗಳು [illegible]ವೆ ಪರ್ಮಿಟ್ಸ್, ಲೈಸೆನ್ಸ್ ಕೊಡುವುದರಲ್ಲಿ ಇವು ಆಗುತ್ತವೆ.

SRI K. G. MAHESWARAPPA.—K.S.R.T.C. is a quasi judicial body governed by the provisions of Motor Vehicles Act.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮೋಟಾರ್ ವೆಹಿಕಲ್ಸ್ ಟ್ಯಾಕ್ಸೇಷನ್ ಕೆಳಗಡೆ ಬರುವುದನ್ನು ಹೇಳುತ್ತಿದ್ದೇನೆ. ಮೋಟಾರ್ ವೆಹಿಕಲ್ಸ್ ಟ್ಯಾಕ್ಸನ್ನು ತಾವು ಇಗ್ನೋನರ್ ಮಾಡತಕ್ಕದ್ದು ಆಗಿದೆ. ಇದರ ಬಗ್ಗೆ ತಾವು ಹೆಚ್ಚಿನ ಜವಾಬ್ದಾರಿ ಹೊತ್ತಿರತಕ್ಕವರು, ಇದರ ಬಗ್ಗೆ ಹೆಚ್ಚಿಗೆ ಕಾಳಜಿ ತೆಗೆದುಕೊಂಡು, ಈ ಇಲಾಖೆಯಿಂದ ಬರತಕ್ಕ ಆದಾಯವನ್ನು ಹೆಚ್ಚಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮುಖ್ಯವಾಗಿ ಈ ಕೆ.ಎಸ್.ಆರ್.ಟಿಸಿ. ಬಗ್ಗೆ ಕೆಲವು ವಿಚಾರಗಳನ್ನು ಹೇಳಲಿಕ್ಕೆ ನಾನು ಇಷ್ಟಪಡುತ್ತೇನೆ. ಕೆ.ಎಸ್.ಆರ್.ಟಿಸಿ, ಸುಮಾರು ಎರಡು ವರ್ಷಗಳಿಂದ ಈಚೆಗೆ ಸ್ವಲ್ಪಮಟ್ಟಿಗೆ ಸಮಾಧಾನ ತರುವ ರೀತಿಯಲ್ಲಿದೆ. ಅದಕ್ಕೆ ಕಾರಣರು ಅನೇಕ ಅಧಿಕಾರಿಗಳು ಇದ್ದಾರೆ. ಇಲ್ಲಿ ಒಳ್ಳೆಯ ಕೆಲಸ ಮಾಡತಕ್ಕವರು ಇದ್ದಾರೆ, ಅದೇ ರೀತಿಯಲ್ಲಿ ಹಾನಿ ಮಾಡತಕ್ಕವರು ಇದ್ದಾರೆ. ಅದರಲ್ಲಿ ವಿಶೇಷವಾಗಿ ಹಿಂದಿನ ಲಿನ್ ಅವರು, ಈಗಿರುವ ಕೋದಂಡರಾವ್, ಜಗನ್ನಾಥ್ ಅವರು ಈ ರೀತಿ ಒಳ್ಳೆಯವರು ಇದ್ದಾರೆ. ಇವರೆಲ್ಲರೂ ಒಳ್ಳೆಯ ಕೆಲಸವನ್ನು ಮಾಡಿ ಕೆ.ಎಸ್.ಆರ್.ಟಿಸಿ.ಗೆ ಕೆಟ್ಟ ಹೆಸರು ಇರತಕ್ಕದ್ದು ಕಡಿಮೆ ಮಾಡಲಿಕ್ಕೆ ಪ್ರಯತ್ನ ಮಾಡಿದ್ದಾರೆ. 1976 ನೇ ಇಸವಿಯಲ್ಲಿ ಬಸ್ ನ್ಯಾಷನಲೈಸ್ ಮಾಡಿದಿರಿ. ಅದರ ಬಗ್ಗೆ ಕಾಂಟ್ರ್ಯಾಕ್ಟ್ ಕ್ಯಾರೇಜಸ್ ಬಿಲ್ಲು ತಂದು ಅದು ಈ ಸದನದಲ್ಲಿಯೇ ಆಗಿದೆ. ಸರ್ಕಾರದವರು ಇದರ ಬಗ್ಗೆ ಈಗಾಗಲೇ ಒಪ್ಪಿಕೊಂಡುಬಿಟ್ಟಿದ್ದಾರೆ. ಈ ದೇಶದಲ್ಲಿ ಬಸ್ಸುಗಳ ರಾಷ್ಟ್ರೀಕರಣ ಆಗದೇ ಹೋದರೆ ಕಷ್ಟ. ಶ್ರೀಮಂತರು ಏನು ಕೆಲವು ಬಸ್ಸುಗಳನ್ನು ಮಾಡಿಕೊಂಡಿದ್ದಾರೆ., ಅವರಿಂದ ಸಾರ್ವಜನಿಕರಿಗೆ ಸರಿಯಾದ ಸೌಲಭ್ಯ ಕೊಡಲಿಕ್ಕೆ ಆಗುವುದಿಲ್ಲ, ಅತ್ಯಂತ ಹೆಚ್ಚಿನ ಜನರಿಗೆ ಬಸ್ಸುಗಳ ಅನುಕೂಲ ಒದಗಿಸಬೇಕೆಂದು ಸರ್ಕಾರ ಮಾಡಿದೆ. ಈ ದಿಟ್ಟ ಹೆಜ್ಜೆಯನ್ನು ಮುಂದಿಡಬೇಕೇ ಹೊರತು ಹಿಂದಕ್ಕೆ ಇಡಲಿಕ್ಕೆ ಆಗುವುದಿಲ್ಲ. ಇವೊತ್ತು ನ್ಯಾಷನಲೈಸ್ಡ್ ಡಿಸ್ಟ್ರಿಕ್ಟ್ ರೋಡ್ಸ್ ಏನು ಮಾಡಿದ್ದೀರಿ, ಅವು ಬಹಳ ಪ್ರಾಫಿಟ್ ಇರತಕ್ಕದ್ದು ನೋಡಿದ್ದೇವೆ, ಹಾನಿಯಾಗಿರತಕ್ಕದ್ದು ನೋಡಿದ್ದೇವೆ. ಇದರ ಬಗ್ಗೆ ಕೂಲಂಕುಷವಾಗಿ ವಿಚಾರ ಮಾಡಬೇಕಾಗುತ್ತದೆ. ಆದರೆ ಈ ಸಂದರ್ಭದಲ್ಲಿ ನಾವು ಒಂದು ಹೆಜ್ಜೆ ಮುಂದೆ ಹೋಗಬೇಕು. ಕೆ.ಎಸ್.ಆರ್.ಟಿಸಿ. ಬಗ್ಗೆ ಹಿಂದಿನ ಅಂಕಿಸಂಖ್ಯೆ ನೋಡಿದರೆ, ಸುಮಾರು ಈಗಾಗಲೇ 11,609·47 ಲಕ್ಷ ರೂಪಾಯಿಗಳನ್ನು ಸಾಲದ ರೂಪದಲ್ಲಿ ಇನ್‌ವೆಸ್ಟ್‌ಮೆಂಟ್ ಮಾಡಿದ್ದೇವೆ. 1981-82 ನೇ ಸಾಲಿನ ಅಂಕಿಸಂಖ್ಯೆ ಕೊಡುವುದಾದರೆ

ಕೇಂದ್ರ ಸರ್ಕಾರದಿಂದ, ರಾಜ್ಯ ಸರ್ಕಾರದಿಂದ ಬಂದದ್ದು, ಆಂತರಿಕ ಸಂಪನ್ಮೂಲ ಬಂದದ್ದು, ಬ್ಯಾಂಕುಗಳ ಮುಖಾಂತರ, ಜೀವವಿಮೆ ಸಂಸ್ಥೆಗಳಿಂದ ಬಂದದ್ದು ಎಲ್ಲಾ ಸಂಸ್ಥೆಗಳು ಇನ್‌ವೆಸ್ಟ್ ಮಾಡಿರತಕ್ಕದ್ದು, ಇದೆ. ಈಗಾಗಲೇ ಆಸ್ತಿ ಇದಕ್ಕೆ ಕೂಡ ಮಾಡಿದ್ದೇವೆ. ಅನೇಕ ಬಸ್‌ಸ್ಟ್ಯಾಂಡ್ ಕಟ್ಟಡ ಮಾಡಿದ್ದೇವೆ. ಇಲಾಖಾ ವಾಹನಗಳ ಚಿರಯಂತ್ರಗಳು, ಒಟ್ಟು 11,566·86 ಲಕ್ಷ ರೂಪಾಯಿಗಳು ಆಸ್ತಿಯನ್ನು ಮಾಡಿದ್ದೇವೆ. ಒಟ್ಟು ಆದಾಯ 13,616·94 ಲಕ್ಷ ರೂಪಾಯಿಗಳು. ಖರ್ಚು ನೋಡಿದರೆ, 14,664.41 ಲಕ್ಷ ರೂಪಾಯಿಗಳ, ಇದರಲ್ಲಿ ಸಿಬ್ಬಂದಿ, ಸಾರಿಗೆ ವೆಚ್ಚ, ಬಂಡವಾಳದ ಮೇಲಿನ ಬಡ್ಡಿ, ಎಲ್ಲಾ ನೋಡಿದರೆ ಇಷ್ಟೆಲ್ಲಾ ಆಸ್ತಿ ಮಾಡಿದರೂ ಹಾನಿಯಾಗಿರುವುದು ಕಾಣುತ್ತದೆ. ಹಾನಿಯಾದರೂ ಕೂಡ 37 ಸಾವಿರ ನೌಕರ ವರ್ಗದವರು ಇದರಲ್ಲಿ ಇದ್ದಾರೆ. ಅನೇಕ ಇನ್‌ಫ್ರಾಸ್ಟ್ರಕ್‌ಚರ್ ಮಾಡಿರುವುದನ್ನು ಬಿಡಲಿಕ್ಕೆ ಆಗುವುದಿಲ್ಲ. ತಾವು ನ್ಯಾಷನಲೈಸ್ ಮಾಡಲಿಕ್ಕೆ ಪ್ರಯತ್ನಪಟ್ಟು ಪೂರ್ತಿ ಸಮಗ್ರವಾಗಿ ಮಾಡುವುದಾದರೆ ಇನ್ನೂ ಹೆಚ್ಚಿನ ಲಾಭವಾಗುತ್ತದೆ ಎಂದು ಹೇಳುತ್ತೇನೆ. ಹಿಂದಿನ 20 ವರ್ಷದ ಅಂಕಿಸಂಖ್ಯೆ ತೆಗೆದುಕೊಂಡರೆ, ಎರಡು ವರ್ಷದಲ್ಲಿ ಮಾತ್ರ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಅನೇಕ ಬದಲಾವಣೆಗಳಾಗಿವೆ. ಇದಕ್ಕೆ ದಕ್ಷ ಆಡಳಿತಗಾರರೇ ಕಾರಣರು. ಒಬ್ಬ ಅಧಿಕಾರಿ ದಕ್ಷ ಇದ್ದರೆ ಆ ಇಲಾಖೆಗೆ ಎಷ್ಟು ಒಳ್ಳೆಯ ಹೆಸರು ಬರುತ್ತದೆ ಅದನ್ನು ಹೇಳುತ್ತೇನೆ. ಹಿಂದೆ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಛೇರ್‌ಮನ್ ಆಗಿರತಕ್ಕವರು ನಡೆಸಿರತಕ್ಕದ್ದರ ಬಗ್ಗೆ ತುಲನೆ ಮಾಡಿ ನೋಡಬೇಕು. 7 ವರ್ಷಗಳ ಹಿಂದಿನ ಅಂಕಿಸಂಖ್ಯೆಗಳ ಜೊತೆಗೆ ಈಗಿನ ಅಂಕಿಸಂಖ್ಯೆಗಳನ್ನು ನೋಡಿದರೆ ಅಜಗಜಾಂತರ ಬದಲಾವಣೆಯನ್ನು ನಾವು ಕಾಣುತ್ತೇವೆ. It is nine per cent as against 7 per cent fixed by the Planning Commission. ಮೇಲಾಗಿ ಈ ಅಚೀವ್‌ಮೆಂಟ್‌ಗೆ ಪ್ಲಾನಿಂಗ್ ಕಮಿಷನ್‌ನವರೂ ಕೂಡ ಒಂದು ಸರ್ಟಿಫಿಕೇಟನ್ನು ಕೊಟ್ಟಿದ್ದಾರೆ. ಅದು ಏನೆಂದರೆ, ಇಡೀ ದೇಶದಲ್ಲೇ ಈ ಸಂಸ್ಥೆ ಚೆನ್ನಾಗಿ ಕೆಲಸ ಮಾಡಿದೆ ಎಂಬುದಾಗಿ. ಇದೂ ಅಲ್ಲದೆ ಅಲ್ಲಿರತಕ್ಕ ಚೀಫ್ ಪರ್ಸನಲ್ ಮ್ಯಾನೇಜರ್‌ರವರು ಅಲ್ಲಿ ಕೆಲಸ ಮಾಡತಕ್ಕ ಹರಿಜನ ಗಿರಿಜನರ ಸೀನಿಯಾರಿಟಿ ಲಿಸ್ಟ್ ಮಾಡಿಲ್ಲ. ಸಮಾಜದಲ್ಲಿ ಹಿಂದುಳಿದಿರತಕ್ಕ ಅಧಿಕಾರಿಗಳ ಸೀನಿಯಾರಿಟಿ ಲಿಸ್ಟ್ ಮಾಡಿಲ್ಲ. ಇಂಥ ಸಂದರ್ಭದಲ್ಲಿ ಒಂದು ದಿಟ್ಟ ಹೆಜ್ಜೆಯನ್ನು ತೆಗೆದುಕೊಂಡು ಬಹಳ ಒಳ್ಳೆಯ ಕೆಲಸವನ್ನು ಅವರು ಮಾಡಿದ್ದಾರೆ. ಮೀಸಲಾತಿ ಆಧಾರದ ಮೇಲೆ ನೇಮಕಾತಿ ಕಾನೂನುಗಳನ್ನು ಬದಲಾವಣೆ ಮಾಡಿದ್ದಾರೆ. ಇಲ್ಲಿರತಕ್ಕ ಇನ್‌ಕಂ ರಿಸಲ್ಟನ್ನು ನೋಡಿದರೆ ತಮಗೇ ಗೊತ್ತಾಗುತ್ತದೆ. ಆದ್ದರಿಂದ ನಾನು ಹೇಳುವುದು ಇಷ್ಟೆ: ಅಲ್ಲಿ ಲಾಭ ಮಾಡುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆಂಬ ಬಗ್ಗೆ ತಾವು ಅಂಕಿ ಅಂಶಗಳನ್ನು ಕೊಟ್ಟಿದ್ದೀರಿ. ಇದನ್ನು ಆದಷ್ಟೂ ಹೆಚ್ಚಿಗೆ ಮಾಡಬೇಕೆಂಬ ಉದ್ದೇಶ ತಮಗೆ ಇರಬಹುದು. ತಮ್ಮ ಬಗ್ಗೆ ನನಗೆ ಬಹಳ ಗೌರವ ಇದೆ. ಇಲಾಖೆಯ ವಿಚಾರದಲ್ಲಿ ಹೆಚ್ಚು ವಿಷಯಗಳನ್ನು ತಿಳಿದುಕೊಂಡಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ನಿಮ್ಮ ಈ ಉದ್ದೇಶ ಸಫಲವಾಗಬೇಕಾದರೆ ನಿಮ್ಮ ಅಧಿಕಾರಿಗಳೂ ಕೂಡ ಅಷ್ಟೇ ಚೆನ್ನಾಗಿ ದಕ್ಷತೆ ಮತ್ತು ನಿಷ್ಠೆಯಿಂದ ಕೆಲಸ ಮಾಡಿದರೆ ಮಾತ್ರ ನಿಮಗೆ ಒಳ್ಳೆಯ ಹೆಸರು ಬರುತ್ತದೆ. ಒಂದು ವೇಳೆ ಕೆಟ್ಟ ಅಧಿಕಾರಿಗಳು ಏನಾದರೂ .ನಿಮ್ಮಲ್ಲಿದ್ದರೆ ನೀವು ಏನೂ ಮಾಡುವುದಕ್ಕಾಗುವುದಿಲ್ಲ. ನಾನು ಒಬ್ಬ ಅಧಿಕಾರಿಯ ಬಗ್ಗೆ ಒಂದು ಉದಾಹರಣೆ ಹೇಳುತ್ತೇನೆ. ಹಿಂದೆ ಮಾನ್ಯ ದೇವರಾಜ ಅರಸರು ವಿರೋಧ ಪಕ್ಷದ ನಾಯಕರಾಗಿದ್ದಾಗ ಇದೇ ಸದನದಲ್ಲಿ ಇವರ ಬಗ್ಗೆ ರೆಫರ್ ಮಾಡಿದಾಗ ಮಾನ್ಯ ಸಚಿವರಾದ ಲಕ್ಷ್ಮೀಸಾಗರ್‌ರವರು ಭಾಷಣ ಮಾಡಿದ್ದಾರೆ. ಅವರ ಹೇಳಿರತಕ್ಕ ಮಾತನ್ನು ನಾನು ಇಲ್ಲಿ ಓದುತ್ತೇನೆ. ಅದು ಈ ರೀತಿ ಇದೆ:

> " He is mostly, if not solely, responsible for so many atrocities that have taken place so far as this K.S.R.T.C. is concerned. Any-way, he is there and they cannot avoid him. What I suggest is, and I make a proposal to have two Chief Engineers."

ಇದಾದ ಮೇಲೆ ಇದೇ ಅಧಿಕಾರಿಯ ಮೇಲೆ ಮೇಲ್ಮನೆಯಲ್ಲೂ ಕೂಡ ಚರ್ಚೆಯಾಗಿದೆ. ಈ ವಿಷಯ ಮೇ 12 ನೇ ತಾರೀಖಿನ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ವರದಿಯಾಯಿತು " Formidable Lobby of K.S.R.T.C. Official."

ಅವರು ತಮ್ಮ ಹತ್ತಿರ ಬಂದು ರಾಜಕೀಯ ಪ್ರಭಾವವನ್ನು ಬಳಸಿಕೊಂಡು ಈ ಕಾರ್ಪೊರೇಷನ್ ಆಕ್ಟನ್ನೇ ತಿದ್ದುಪಡಿ ಮಾಡಿ ತಾನು ಮೇಲಧಿಕಾರಿಯಾಗಿ ಆಗುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆನ್ನುವ ವಿಷಯ ಪತ್ರಿಕೆಯಲ್ಲಿ ಬಂತು. ಅವರ ಮೇಲೆ ಸುಮಾರು 24 ಕೇಸುಗಳಿದ್ದು ಸಸ್ಪೆಂಡ್ ಆಗಿದ್ದಾರೆ. ಅವರ ಮೇಲೆ ಅನೇಕ ಆಪಾದನೆಗಳಿದ್ದರೂ ಕೂಡ ಕರ್ನಾಟಕ ಸಾರಿಗೆ ಸಂಸ್ಥೆಗೆ ವಾಹನಗಳ ಬಿಡಿಭಾಗಗಳನ್ನು ಸರಬರಾಜು ಮಾಡತಕ್ಕ ಟಾಟಾ, ಬಿರ್ಲಾ ಕಂಪೆನಿಯವರ ಜೊತೆ ಸೇರಿಕೊಂಡು ಏನೇನು ಅವ್ಯವಹಾರಗಳನ್ನು ಮಾಡಿದ್ದಾರೆಂದು ನೋಡಿದರೆ ಗೊತ್ತಾಗುತ್ತದೆ. ಅವರು ಈ ಇಲಾಖೆಗೆ ಎಷ್ಟು ಆರ್ಥಿಕ ಹಾನಿಯನ್ನುಂಟುಮಾಡಿದ್ದಾರೆಂಬುದನ್ನು ತಿಳಿದುಕೊಳ್ಳಬೇಕಾದರೆ ಅವರ ಬಗ್ಗೆ ಬಿಲ್ಡಪ್ ಆಗಿರುವ ರೆಕಾರ್ಡ್ಸ್‌ನ್ನು ತಾವು ತರಿಸಿಕೊಂಡು

ನೋಡಿದರೆ ಅವರ ದಕ್ಷತೆ, ಪ್ರಾಮಾಣಿಕತೆ ಎಲ್ಲಾ ಹೊರಬೀಳುತ್ತದೆ. ತಾವು ಇದನ್ನೆಲ್ಲಾ ತರಿಸಿ ನೋಡುವುದಾದರೆ ನಾನೂ ಕೂಡ ಹಲವಾರು ಅಂಕಿ ಅಂಶಗಳ;ನ್ನು ಈ ಸದನದ ಮುಂದಿಡುತ್ತೇನೆ. ಇಂಥ ಅಧಿಕಾರಿಗೆ ನೀವು ದೊಡ್ಡ ಹುದ್ದೆಯನ್ನು ಕೊಟ್ಟರೆ ಅದರಿಂದ ತಮಗೆ ಕೆಟ್ಟ ಹೆಸರು ಖಂಡಿತವಾಗಿ ಬರುತ್ತದೆ. ಸರ್ಕಾರಕ್ಕೂ ಕೂಡ ಕೆಟ್ಟ ಹೆಸರು ಬರುತ್ತದೆ. ಆದ್ದರಿಂದ ತಮಗೆ ನಾನು ಹೇಳಬಯಸುವುದು ಇಷ್ಟೆ: ಯಾರು ಒಳ್ಳೆಯ ದಕ್ಷ, ಪ್ರಾಮಾಣಿಕ ಅಧಿಕಾರಿ ಎಂಬುದನ್ನು ಗುರುತುಹಚ್ಚಿ ಅವರನ್ನು ಆ ಹುದ್ದೆಗೆ ನೇಮಕ ಮಾಡಿದರೆ ನಿಮಗೂ ನಿಮ್ಮ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ. ಇವರ ಬಗ್ಗೆ ಹೊರಗಡೆ ಬಹಳ ಲಾಬಿ ನಡೆಯುತ್ತಿದೆ. ಬಹುಶಃ ಇದು ತಮಗೂ ಗೊತ್ತಿರಬಹುದು. ಈ ಸಮಾಜದ ಬಗ್ಗೆ ಮಾನ್ಯ ಸಚಿವರಾದ ಲಕ್ಷ್ಮೀಸಾಗರ್‌ರವರು ಬಹಳ ಚೆನ್ನಾಗಿ ಹೇಳಿದ್ದಾರೆ. ಈ ಸಾರಿಗೆ ಸಂಸ್ಥೆಯು ಭೂಮಿಗೆ ಸೀಮಿತವಾದ ಸಂಸ್ಥೆ ಎಂದು ಹೇಳಿದ್ದಾರೆ. ಆ ದಿವಸ ಸಾರಿಗೆ ಸಂಸ್ಥೆ ಬಗ್ಗೆ ಬೇಡಿಕೆ ಸಭೆಯ ಮುಂದೆ ಬಂದಾಗ ತಾವು ಈ ರೀತಿ ಹೇಳಿದ್ದೀರಿ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಲಕ್ಷ್ಮೀಸಾಗರ್‌ರವರು ಇವತ್ತೂ ಅದೇ ಅಭಿಪ್ರಾಯವನ್ನೇ ಇಟ್ಟುಕೊಂಡಿದ್ದಾರೆಯೇ ?

ಶ್ರೀ ಎಂ. ರಘುಪತಿ.—ಮಾನ್ಯ ಸದಸ್ಯರು ಲಕ್ಷ್ಮೀಸಾಗರ್‌ರವರು ಹೇಳಿರುವ ಮಾತನ್ನು ಓದಿದ ಮೇಲೆ ಅದಕ್ಕೆ ಮಂತ್ರಿಗಳ ಉತ್ತರ ಏನು ಎಂಬುದನ್ನೂ ಓದಿ ಹೇಳಬೇಕು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ರಘುಪತಿಯವರು ಇದರ ಬಗ್ಗೆ ಕಾಳಜಿಯನ್ನು ವಹಿಸಲಿ ಎಂದು ನಾನು ಹೇಳುತ್ತಿದ್ದೇನೆ. ಮಾನ್ಯ ಲಕ್ಷ್ಮೀಸಾಗರ್‌ರವರು ಹೇಳಿರುವುದು ಈ ರೀತಿ ಇದೆ :

> "LAKSHMISAGAR .—If the Hon. Member can advance that argument, 40% of the total employees of the K.S.R.T.C. are in the hands of one community alone which is supposed to be Minority Community."

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಇದು ಯಾವ ದಿವಸದ್ದು ಎಂಬುದನ್ನು ಹೇಳಿದರೆ ಮಾನ್ಯ ಮಂತ್ರಿಗಳು ಅದನ್ನು ಸರಿಪಡಿಸುವುದಾದರೆ ಸರಿಪಡಿಸುತ್ತಾರೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಸರ್ಕಾರ ಇರುವುದು, ಹೋಗುವುದು ಮುಖ್ಯವಲ್ಲ. ಆದರೆ, ಅಲ್ಲಿರತಕ್ಕ ಅಧಿಕಾರಿಗಳು ನಮ್ಮನ್ನೂ ಉಪಯೋಗಿಸಿಕೊಳ್ಳುತ್ತಾರೆ, ನಿಮ್ಮನ್ನೂ ಉಪಯೋಗಿಸಿಕೊಳ್ಳುತ್ತಾರೆ. ಅಲ್ಲಿರತಕ್ಕ ಅಧಿಕಾರಿಗಳು ಸುಮಾರು 10–15 ವರ್ಷದಿಂದ ಅಲ್ಲೇ ಇದ್ದಾರೆ. ಅವರು ನಿಮ್ಮನ್ನು ಉಪಯೋಗಿಸಿಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಅದಕ್ಕೆ ನೀವು ಬಲಿಯಾಗಬೇಡಿ. ಈಗ ಬಹಳ ವರ್ಷಗಳಿಂದಲೂ ಅಲ್ಲೇ ಬೇರು ಬಿಟ್ಟುಕೊಂಡು ಕುಳಿತಿರುವ ಅಧಿಕಾರಿಗಳನ್ನು ಬೇರೆ ಬೇರೆ ಜಿಲ್ಲೆಗಳಿಗೆ ವರ್ಗ ಮಾಡಿ. ಇಲ್ಲದೇ ಹೋದರೆ ಅವರು ಬೇರೆ ಬೇರೆ ಸಂಸ್ಥೆಗಳವರ ಜೊತೆ ಬೇರೆ ಬೇರೆ ಕೆಲಸ ಮಾಡುವವರ ಜೊತೆ ಶಾಮೀಲಾಗಿ ಯಾರು ಒಳ್ಳೆಯ ಕೆಲಸವನ್ನು ಮಾಡುತ್ತಾರೆ ಅಂಥವರ ಮೇಲೆ ಇಲ್ಲಸಲ್ಲದ ಆಪಾದನೆಗಳನ್ನು ಮಾಡುವುದು, ಕಾರ್ಮಿಕರನ್ನು ಎತ್ತಿಕಟ್ಟುವುದು ಇಂಥಾದ್ದನ್ನು ಮಾಡುತ್ತಾರೆ. ಆದ್ದರಿಂದ ಅವರನ್ನು ರಾಜಕೀಯ ಮಾಡಲು ಬಿಡಬೇಡಿ. ಅವರನ್ನು ನಿಮ್ಮ ಹಿಡಿತದಲ್ಲಿ ಇಟ್ಟುಕೊಳ್ಳದೇ ಹೋದರೆ ಅವರಿಂದ ನಿಮಗೆ ಖಂಡಿತವಾಗಿ ಕೆಟ್ಟ ಹೆಸರು ಬರುತ್ತದೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಈಗಾಗಲೇ ಕೆಲವರು ನಿಮ್ಮ ಹೆಸರನ್ನು ಹೇಳಿಕೊಂಡು ಎಂ. ಪಿ. ಪ್ರಕಾಶ್‌ರವರು ನಮ್ಮ ಮನುಷ್ಯ, ಅವರು ನಮ್ಮ ಕೈಯಲ್ಲಿದ್ದಾರೆ, ಯಾವ ಕೆಲಸವನ್ನು ಬೇಕಾದರೂ ನಾನು ಮಾಡಿಸಿಕೊಡುತ್ತೇನೆಂದು ಹೇಳಿಕೊಂಡು ಎಲ್ಲಾ ಕಡೆ ಓಡಾಡುತ್ತಿದ್ದಾರೆ. ಇದು ಇಲ್ಲಿ ತಮಗೆ ಗೊತ್ತಿಲ್ಲದಿರಬಹುದು. ಆದರೆ ಶಾಸಕರ ಭವನದ ಸುತ್ತಮುತ್ತ ಈ ಮಾತು ಕೇಳಿಬರುತ್ತಿದೆ. ಆದರೆ ನಾನು ತಮ್ಮನ್ನು ಆಪಾದನೆ ಮಾಡುತ್ತಿದ್ದೇನೆಂದು ತಿಳಿಯಬಾರದು.

SRI M. S. KRISHNAN.—Are you in anybody's command or in anybody's pocket ?

ಶ್ರೀ ಎಂ. ಪಿ. ಪ್ರಕಾಶ್.—ನಾನು ಯಾರ ಕೈಕೂಸಾದರೂ ಆಗಿದ್ದಿದ್ದರೆ ಈರೀತಿ ಮೇಲಕ್ಕೆ ಬರುತ್ತಿರಲಿಲ್ಲ. ಮತ್ತು ಯಾರಿಂದಲೂ ಮೇಲಕ್ಕೆ ಬಂದಿರುವವನಲ್ಲ. ನಾನು ಹೋರಾಟ ಮಾಡಿ ಮೇಲಕ್ಕೆ ಬಂದಿರುವವನು. ಯಾರಿಂದಲಾದರೂ ನಾನು ಮೇಲಕ್ಕೆ ಬಂದಿರುವೆನೆಂದು ಒಬ್ಬ ವ್ಯಕ್ತಿಯ ಅಭಿಪ್ರಾಯ ಇದು ಆಗಿದ್ದರೆ ಅದು ನನಗೆ ಗೊತ್ತಿಲ್ಲ.

ವೈಸ್-ಛೇರ್ಮನ್.—ಅವರು ಆಪಾದನೆ ಮಾಡುತ್ತಿಲ್ಲ. ಆದರೆ ಜನರು ಈ ರೀತಿ ಮಾತನಾಡಿಕೊಂಡು ಓಡಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ನೀವು ಹೆಚ್ಚು ಪ್ರಯತ್ನಪಟ್ಟರೆ ಇನ್ನೂ ಹೆಚ್ಚು ವಿಷಯಗಳು ತಿಳಿಯುತ್ತವೆ. ಈ ಸಂಸ್ಥೆಯಲ್ಲಿ ಹಾನಿಯಾಗುವುದಕ್ಕೆ ಹಲವಾರು ಕಾರಣಗಳಿವೆ. ಇಂಥ ಪ್ರಸಂಗ ಬಂದೇ ಬರುತ್ತದೆಂದು ಅಧಿಕಾರಿಗಳು ಮೊದಲೇ ಏನಾದರೂ ಒಂದು ಉತ್ತರವನ್ನು ಬರೆದು ಇಟ್ಟಿರುತ್ತಾರೆ. ಅದಕ್ಕೆ ತಾವು

ಸಮಾಧಾನವಾಗಬಾರದು. ನಿಮ್ಮ ಮನಸ್ಸಿಗೆ ಖಾತ್ರಿ ಮಾಡಿಕೊಂಡ ನಂತರ ಉತ್ತರ ಕೊಡಿ. ಹಿಂದೆ ನಾನು ಮಂತ್ರಿಯಾಗಿದ್ದಾಗ ಇಂಥ ಅನುಭವಗಳು ಆಗಿವೆ. ಅಧಿಕಾರಿಗಳ ಬೇಜವಾಬ್ದಾರಿತನದಿಂದ ಇಂಥ ಹಾನಿಯಾಗಿದೆ. ಉದಾಹರಣೆಗೆ ಹೇಳುವುದಾದರೆ, ನಿಮ್ಮ ಸಂಸ್ಥೆಯ ವಾಹನಗಳನ್ನು ರೀಕಂಡೀಷನಿಂಗ್ ಮಾಡಿಸಬೇಕಾದರೆ ಮೊದಲನೇ ಸಾರಿಗೆ 2·4 ಲಕ್ಷ ಕಿ.ಮೀ. ಓಡಿರಬೇಕು, ಎರಡನೆಯ ಸಾರಿಗೆ ಮಾಡಿಸಬೇಕಾದರೆ 1·6 ಲಕ್ಷ ಕಿ.ಮೀ. ಓಡಿರಬೇಕು ಎಂದು ಇದೆ. ಇವತ್ತು ನಿಮ್ಮ ರೀಜನಲ್ ವರ್ಕ್‌ಶಾಪಿಗೆ ಇಂಜಿನ್ ರಿಪೇರಿಗಾಗಿ, ಗೇರ್‌ಬಾಕ್ಸ್ ರಿಪೇರಿಗಾಗಿ ಅಥವಾ ಬೇರೆ ಇನ್ನಾವುದಾದರೂ ರಿಪೇರಿಗಾಗಿ ಬರುತ್ತವೆ. ಅದರಲ್ಲಿ ಎಷ್ಟು ಬ್ಯಾಕ್‌ಲಾಗ್ ಆಗಿದೆ ಎಂಬುದನ್ನು ಹೇಳುತ್ತೇನೆ. 1979–80 ರಲ್ಲಿ ಬೆಂಗಳೂರು ವರ್ಕ್‌ಷಾಪಿನಲ್ಲಿ Received 315, scrap 67 and return awaiting for despatch 265. ಅದೇ ರೀತಿ 1979 ರಿಂದ 1982 ರವರೆಗೆ ಅಂಕಿ ಅಂಶಗಳನ್ನು ತೆಗೆದುಕೊಂಡರೆ ಈ ಬೆಂಗಳೂರು ವರ್ಕ್‌ಷಾಪಿನಲ್ಲಿ ಬ್ಯಾಕ್‌ಲಾಗ್ ಏನಾಗಿದೆ ಎಂಬುದನ್ನು ಹೇಳುತ್ತೇನೆ. 1979–80 ರಲ್ಲಿ 191, 1980–81 ರಲ್ಲಿ 123, 1981–82 ರಲ್ಲಿ 166, ಹುಬ್ಬಳ್ಳಿ ವರ್ಕ್‌ಷಾಪಿನಲ್ಲಿ 1979–80 ರಲ್ಲಿ 184, 1980–81 ರಲ್ಲಿ 164, 1981–82 ರಲ್ಲಿ 147.

ನಾನು ಹೇಳುವುದಾದರೆ 1980 ರಲ್ಲಿ 522 ವೆಹಿಕಲ್ಸ್ ರೀಜನಲ್ ವರ್ಕ್‌ಷಾಪಿನಲ್ಲಿ ಬಿದ್ದಿದ್ದವು. ಇಲ್ಲಿಯ ವರೆಗೂ ಆಫೀಸರ್‌ಗಳು ಇವುಗಳ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸಲಿಲ್ಲ. 1666 ವೆಹಿಕಲ್ಸ್‌ಗಳಲ್ಲಿ ಸುಮಾರು 147 ವೆಹಿಕಲ್ಸ್ ರೀಜನಲ್ ವರ್ಕ್‌ಷಾಪ್ ಹುಬ್ಬಳ್ಳಿಯಲ್ಲಿ ಬಿದ್ದಿದ್ದವು. 1982 ನೇ ಇಸವಿ ಯಿಂದ ಸರಾಸರಿ 63 ವೆಹಿಕಲ್ಸ್ ರಿಪೇರಿ ಮಾಡಲಿಕ್ಕೆ ಹೋಗಲೇ ಇಲ್ಲ, ರೀಕಂಡೀಷನಿಂಗ್ ಮಾಡಲಿಕ್ಕೆ ಹೋಗಲಿಲ್ಲ. 1966 ರಿಂದ ಹಿಡಿದು 1977–78–79–80–81–82 ರವರೆಗೆ ಹುಬ್ಬಳ್ಳಿ, ಬೆಂಗಳೂರು ವರ್ಕ್‌ಷಾಪ್‌ಗಳಲ್ಲಿ 63 ಗಾಡಿಗಳನ್ನು ರೀಕಂಡೀಷನ್ ಮಾಡಲಿಲ್ಲವೆಂದರೆ ಎಷ್ಟು ನಷ್ಟ ಉಂಟಾಗುತ್ತ ದೆಂಬುದನ್ನು ತಾವೇ ಊಹಿಸಬೇಕು. ಅದರ ಬಗ್ಗೆ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಈ ಬಸ್ ಗಳನ್ನು ರೀಕಂಡೀಷನ್ ಮಾಡುವುದಕ್ಕೆ ಹಿಂದೆ ಒಂದು ಸಮಿತಿಯನ್ನು ಮಾಡಿದ್ದರು. ಡೈರೆಕ್ಟರ್ ಆಫ್ ಡಿಫೆನ್ಸ್ ಇನ್‌ಸ್ಟಿಟ್ಯೂಟ್‌ರವರು ಅವರು ಡಿವಿಜನ್‌ಗಳಿಗೆ ಹೋಗಿ ಎಷ್ಟು ಬಸ್‌ಗಳನ್ನು ರೀಕಂಡೀಷನ್ ಮಾಡಬೇಕು, ಅದರ ದಕ್ಷತೆ ಎಷ್ಟು ಮಾಡಬೇಕು ಎನ್ನುವುದರ ಬಗ್ಗೆ ಸೂಚನೆಯನ್ನು ಕೊಟ್ಟಿದ್ದರು. ಆ ಸೂಚನೆಯನ್ನು ಅಕ್ಸೆಪ್ಟ್ ಮಾಡಿಕೊಂಡ ಮೇಲೆ ಅದಕ್ಕೆ ಬೇಕಾದಂಥ ಸಿಬ್ಬಂದಿಗಳನ್ನೂ ಕೂಡ ಒದಗಿಸ ಬೇಕೆಂದು ಒಂದು ಸೂಚನೆಯನ್ನು ಕೊಟ್ಟಿದ್ದರೂ ಕೂಡ ಅವರು ಕೊಟ್ಟಂತಹ ಶಿಫಾರಸ್ಸುಗಳನ್ನು ಅಲ್ಲಿರತಕ್ಕಂಥ ಅಧಿಕಾರಿಗಳಿಂದ ಕಾರ್ಯಗತ ಮಾಡಲಿಕ್ಕೆ ಆಗಲಿಲ್ಲ. ಅವರು ಹೇಳಿರುವ ಪ್ರಕಾರ 2·4 ಲಕ್ಷದಿಂದ 4·5 ಲಕ್ಷ ಕಿಲೋಮೀಟರ್‌ಗಳವರೆಗೆ ಬಸ್ಸುಗಳು ಓಡಿದಮೇಲೆ ಅದನ್ನು ರೀಕಂಡೀಷನ್ ಮಾಡಬೇಕೆಂದು ಸಜೆಸ್ಟ್ ಮಾಡಿರುತ್ತಾರೆ. ಕೆಲವು ಕೋಸ್ಟಲ್ ಏರಿಯಾ, ನಾನ್‌ಕೋಸ್ಟಲ್ ಏರಿಯಾ ಎಂದು ಬೇರೆ ಬೇರೆ ಅವರು ವಿಂಗಡಿಸಿರುತ್ತಾರೆ. ಅವರು ಈ ರೀತಿ ಕಂಪ್ಲೈಂಟ್ ಮಾಡಿದ ತಕ್ಷಣ ರೀಕಂಡೀಷನ್ ಮಾಡಿದ್ದರೆ ಬಹುಶಃ ನನಗನ್ನಿಸುತ್ತದೆ 17·6 ಲಕ್ಷ ರೂಪಾಯಿಗಳು ಕರ್ನಾಟಕ ರೋಡ್ ಟ್ರಾನ್ಸ್‌ಪೋರ್ಟ್ ಸಂಸ್ಥೆಗೆ ಉಳಿತಾಯ ವಾಗುತ್ತಿತ್ತು. ಸರ್ಕಾರದಲ್ಲಿ ಅಧಿಕಾರಿಗಳು ಇದರ ಬಗ್ಗೆ ಯಾರೂ ಪ್ರಾಮಾಣಿಕವಾದ ಪ್ರಯತ್ನ ಮಾಡಲಿಲ್ಲ ವೆಂದು ಹೇಳಬೇಕಾಗುತ್ತದೆ. ಡಿಲೇ ಆಫ್ ರೀಕಂಡೀಷನ್ ಆಫ್ ವೆಹಿಕಲ್ಸ್ ಎಂದು ಹೇಳುವುದು 1979–80 ರಿಂದ 62 ಟೋಟಲ್ No. of days taken 10·647, no. of days taken—mininum 34 days, maximum 1292 days. ಆವರೇಜ್ ಡಿಲೇ ಇನ್ ಎಕ್ಸೆಸ್ ಆಫ್ 22 ಡೇಸ್ ಮತ್ತು 150 ದಿವಸ. 1980–81 ರಲ್ಲಿ ಪೂರ್ತಿ, ವಿವರ ಹೇಳುವುದಕ್ಕೆ ಹೋಗುವುದಿಲ್ಲ. 66 ದಿವಸ. 1981–82 ರಲ್ಲಿ 50 ದಿವಸ—ಇದು ಬೆಂಗಳೂರು. ಇನ್ನು ಹುಬ್ಬಳ್ಳಿಯದು 1979–80 ರಲ್ಲಿ 55 ದಿವಸಗಳು, 1980–81 ರಲ್ಲಿ 70 ದಿವಸಗಳು, 1981–82 ರಲ್ಲಿ 37 ದಿವಸಗಳು. ಇಷ್ಟು ಡಿಲೇ ಆಗುವುದಕ್ಕೆ ಏನು ಕಾರಣ ಎನ್ನುವುದನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಾಗಲಿಲ್ಲ. ಹಣ ಎಷ್ಟು ಅಪವ್ಯಯವಾಗುತ್ತದೆ ಎನ್ನುವುದಕ್ಕೆ, ಅಧಿಕಾರಿಗಳು ಎಷ್ಟು ಬೇಜವಾಬ್ದಾರಿಯಿಂದ ವರ್ತಿಸುತ್ತಾರೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಲೈಸೆನ್ಸ್ ಫಾರ್ ರೆಫ್ರೆಷ್‌ಮೆಂಟ್ ರೂಮ್, ಸೆಂಟ್ರಲ್ ಬಸ್‌ಸ್ಟ್ಯಾಂಡ್, ಬಿಜಾಪುರದಲ್ಲಿ ಅದು ಟೆಂಡರ್ ಹೋಗಿರತಕ್ಕಂಥದ್ದು 1·30 ಲಕ್ಷ ರೂಪಾಯಿಗಳಿಗೆ. ಕಾರ್ಪೊರೇಷನ್‌ರವರು 10 ನೇ ತಾರೀಖು. ಜುಲೈ 1979 ರಲ್ಲಿ ಮೂರು ವರ್ಷಕ್ಕೆ ಟೆಂಡರನ್ನು ಇನ್‌ವೈಟ್ ಮಾಡಿದರು. ನಾಲ್ಕು ಜನ ಕಂಟ್ರಾಕ್ಟರ್ಸ್ ಎ. ಬಿ. ಸಿ. ಡಿ ಎಂದು ಟೆಂಡರನ್ನು ಹಾಕಿದರು. (ಎ) ಕಂಟ್ರಾಕ್ಟರ್ 3,333·51 ಒಂದು ತಿಂಗಳಿಗೆ ಹಾಕಿದರು. ಹೊಸದಾಗಿ ಯಾರು ಹಾಕಿದರು ಎಂದರೆ ಬಿ. ಸಿ. ಹಾಕಲಿಲ್ಲ. (ಡಿ) 5,212·12 ಒಂದು ತಿಂಗಳಿಗೆ ಎಂದು ಹಾಕಿದರು. ಆಮೇಲೆ ಏನಾಯಿತು ಎಂದರೆ ಡಿಸೆಂಬರ್ 1979 ರಲ್ಲಿ ಹೊಸ ಟೆಂಡರನ್ನು ಹಾಕಿದರು. (ಡಿ) ಅದನ್ನು ಅಕ್ಸೆಪ್ಟ್ ಮಾಡಿದರು ಡಿಪಾರ್ಟ್‌ಮೆಂಟ್‌ನವರು. ಅಕ್ಸೆಪ್ಟ್ ಮಾಡಿದ ಮೇಲೆ ಮೊದಲು ನಡೆಸುತ್ತಿದ್ದವನು. ಕೋರ್ಟಿಗೆ ಹೋದ. ಸ್ಟೇ ಆರ್ಡರ್ ಕೊಟ್ಟರು. 1981–83 ನೇ ಇಸವಿಯವರೆಗೆ ಸ್ಟೇ ವೆಕೇಟ್ ಮಾಡುವುದಕ್ಕೆ ಸರ್ಕಾರ ಯಾವುದೇ ರೀತಿಯಲ್ಲಿ ಪ್ರಯತ್ನ ಮಾಡಲಿಲ್ಲ. ಇದರಿಂದ ಏನಾಗುತ್ತದೆ ಎಂದರೆ 3,891 ರೂಪಾಯಿಗಳ ರೆವೆನ್ಯೂ ಬಿಲ್ ಒಂದು ತಿಂಗಳಿಗೆ ಬರತಕ್ಕಂಥದ್ದೂ ಸುಮಾರು 1980–83 ರವರೆಗೆ ಲೆಕ್ಕ ಹಾಕಿದರೆ ಸುಮಾರು 1·50 ಲಕ್ಷ ರೂಪಾಯಿಗಳಾಗುತ್ತದೆ. ಆದ್ದರಿಂದ

ಅಲ್ಲಿರತಕ್ಕಂಥ ಅಧಿಕಾರಿಗಳು ಹೊಣೆ ಅರಿತು ವೆಕೇಟ್ ಮಾಡಿಸಲಿಲ್ಲ ಎಂದರೆ ಎಷ್ಟರಮಟ್ಟಿಗೆ ಕೆಲಸ ಮಾಡು ತ್ತಿದ್ದಾರೆಂದು ನಾನು ಹೇಳಬೇಕಾಗುತ್ತದೆ. ಮತ್ತೆ ಡಿಲೇ ಇನ್ ಡೆಲಿವರಿ ಆಫ್ ಬಾಡೀಸ್ ಬಗ್ಗೆ ಕಾರ್ಪೊರೇಷನ್ ನವರು ಆರ್ಡರನ್ನು ನವಂಬರ್ ತಿಂಗಳು ಮಾಡಿದರು. ಬೆಂಗಳೂರು ಕನ್‌ಸ್ಟ್ರಕ್ಷನ್ ಬಾಡಿ ಬಿಲ್ಡರ್ಸ್‌ಗೆ ಈ ಕೆಲಸ ಕೊಟ್ಟರು. ಬೆಂಗಳೂರಿಗೆ 30 ಬಸ್‌ಗಳನ್ನು, ಮಫ್ಯೂಸಲ್‌ಗೆ 10 ಬಸ್‌ಗಳೆಂದು ಕೊಟ್ಟರು. 1972 ರಲ್ಲಿ ಅಗ್ರಿಮೆಂಟ್ ಮಾಡಿಕೊಂಡು 18 ನೇ ಜನವರಿ 1978 ಕ್ಕೆ ಕೊಡುವಂತೆ ಟೈಮ್ ಕೊಟ್ಟು ಕೊಟ್ಟಿದ್ದರು. ಅವರು 35 ಬಸ್‌ಗಳಿಗೆ 10 ಬಸ್‌ಗಳನ್ನು ಮಾತ್ರ ಮಾಡಿಕೊಟ್ಟರು. ಬಸ್‌ಗಳನ್ನು ಟೈಮ್‌ಗೆ ಸರಿಯಾಗಿ ಕೊಡಲಿಲ್ಲವೆಂದು ಅದನ್ನು ಕ್ಯಾನ್ಸಲ್ ಮಾಡಬೇಕೆಂದು ಆ ಕಂಟ್ರಾಕ್ಟರನ್ನು ಕ್ಯಾನ್ಸಲ್ ಮಾಡಿದರು. ಮಾರ್ಚ್‌ನಲ್ಲಿ ಕ್ಯಾನ್ಸಲ್ ಮಾಡಿದಮೇಲೆ 1979 ಜುಲೈನಲ್ಲಿ ಅವರಿಗೇ ಮತ್ತೆ ಕೊಟ್ಟಿರುತ್ತಾರೆ. ಸರ್ಕಾರಕ್ಕೆ ಹಿಂದೆ ನಡೆದದ್ದು ಗೊತ್ತಿದ್ದರೂ ಸಹ 1979 ಜುಲೈನಲ್ಲಿ ಮತ್ತೆ 36 ಬಸ್‌ಗಳನ್ನು ಬಾಡಿ ಕಟ್ಟುವುದಕ್ಕೆ ಕೊಟ್ಟರು. ಮತ್ತೆ ಅವನು ಆ ಕೆಲಸವನ್ನು ಮಾಡಲು ಒಪ್ಪಿಕೊಳ್ಳಲಿಲ್ಲ. 1980 ರಲ್ಲಿ ಮತ್ತೆ ಕ್ಯಾನ್ಸಲ್ ಮಾಡಿದ್ದರಿಂದ ಸರ್ಕಾರಕ್ಕೆ ಎಷ್ಟು ಹಣ ನಷ್ಟವಾಯಿತು ? ಸುಮಾರು 5·32 ಲಕ್ಷ ರೂಪಾಯಿಗಳು. ಇಷ್ಟೊಂದು ದುಡ್ಡು ಕೊಡುವವರು ಯಾರು ? ಈವತ್ತು ಈ ಪರಿಸ್ಥಿತಿಗೆ ಹೊಣೆಗಾರರು ಯಾರು ? ಇದೇ ರೀತಿ ಅನೇಕ ಉದಾಹರಣೆಗಳು ಇವೆ. ಇನ್ನು ಕಾಸ್ಟ್ ಆಫ್ ಬಾಡಿ ಬಿಲ್ಡಿಂಗ್ ಬಗ್ಗೆ ಹೇಳುವುದಾದರೆ, 1980–81 ರಲ್ಲಿ ಒಂದು ಬಸ್‌ಗೆ ಬೆಂಗಳೂರಿನ ವರ್ಕ್‌ಷಾಪಿನಲ್ಲಿ 0·66 ಲಕ್ಷ ರೂಪಾಯಿಗಳ ಖರ್ಚು ಬಂದಿದ್ದರೆ ಅದೇ ಹುಬ್ಬಳ್ಳಿ ವರ್ಕ್‌ಷಾಪಿನಲ್ಲಿ 0·52 ಲಕ್ಷ ರೂಪಾಯಿಗಳ ಖರ್ಚು ಬಂದಿದೆ. 1981–82 ರಲ್ಲಿ ಬೆಂಗಳೂರಿನ ವರ್ಕ್‌ಷಾಪಿನಲ್ಲಿ ಒಂದು ಬಸ್‌ಗೆ 0·78 ಲಕ್ಷ ರೂಪಾಯಿಗಳ ಖರ್ಚು ಬಂದಿದ್ದರೆ ಹುಬ್ಬಳ್ಳಿ ವರ್ಕ್‌ಷಾಪಿನಲ್ಲಿ 0·73 ಲಕ್ಷ ರೂಪಾಯಿಗಳ ಖರ್ಚು ಬಂದಿದೆ. ಇಷ್ಟೊಂದು ವ್ಯತ್ಯಾಸ ಬರಲು ಕಾರಣವೇನು ? ಇಂತಹ ಅನೇಕ ಉದಾಹರಣೆಗಳಿವೆ. ಮಾನ್ಯ ಮಂತ್ರಿಗಳು ಇದು ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಆಗಿದ್ದು ಎಂದು ಹೇಳುವುದಕ್ಕೆ ಬದಲು, ಇಂತಹ ತಪ್ಪುಗಳನ್ನು ಯಾವ ಅಧಿಕಾರಿಗಳು ಮಾಡಿದ್ದಾರೋ ಅವರ ಮೇಲೆ ತಾವು ಯೋಗ್ಯವಾದಂಥ ಕ್ರಮ ಕೈಗೊಳ್ಳಬೇಕು ಮತ್ತು ಅವರುಗಳಿಗೆ ತಕ್ಕ ಶಿಕ್ಷೆ ಕೊಡತಕ್ಕ ಕೆಲಸ ಮಾಡಬೇಕು.

ಇನ್ನು ಈ ಕಾರ್ಪೊರೇಷನ್ ಇನ್ನೂ ಹೆಚ್ಚಿನ ದಕ್ಷತೆಯಿಂದ ಮತ್ತು ಲಾಭದಾಯಕವಾಗಿ ಕೆಲಸ ಮಾಡಬೇಕಾದರೆ ತಾವು ರೀಜನಲ್ ಕಾರ್ಪೊರೇಷನ್‌ಗಳನ್ನು ಸ್ಥಾಪನೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ತಾವು ಅಧಿಕಾರಕ್ಕೆ ಬಂದ ಹೊಸದರಲ್ಲಿ ಅಧಿಕಾರ ವಿಕೇಂದ್ರೀಕರಣ ಮಾಡುವುದಾಗಿ ಮತ್ತು ಎಲ್ಲಾ ಅಧಿಕಾರವನ್ನು ಅಧಿಕಾರಿಗಳಿಗೆ ಬಿಟ್ಟುಕೊಡುವುದಾಗಿ ಹೇಳಿದ್ದಿರಿ. ಆದರೆ ಈ ಒಂದು ಕೆಲಸ ಈ ಸಂಸ್ಥೆ ಯಲ್ಲಿ ಇನ್ನೂ ಆಗಿಲ್ಲ. ಈಗಲಾದರೂ ಒಂದೊಂದು ಜಿಲ್ಲೆಯಲ್ಲಿಯೂ ಸಹ ಒಂದೊಂದು ರೀಜನಲ್ ಕಾರ್ಪೊ ರೇಷನ್‌ಗಳನ್ನು ಮಾಡುವುದು ಒಳ್ಳೆಯದು. ಈ ಬಗ್ಗೆ ತಮಿಳುನಾಡಿನಲ್ಲಿ, ಗುಜರಾತ್‌ನಲ್ಲಿ, ಮಹಾರಾಷ್ಟ್ರದಲ್ಲಿ ಯಾವ ರೀತಿ ಮಾಡಿದ್ದಾರೆಂಬ ಬಗ್ಗೆ ತಾವು ಅಲ್ಲಿಂದ ಮಾಹಿತಿಗಳನ್ನು ತರಿಸಿ ಓದಬೇಕು. ಅಲ್ಲಿ ಉತ್ತಮ ವಾದಂಥ ಮತ್ತು ದಕ್ಷವಾದಂಥ ಕೆಲಸವನ್ನು ಮಾಡಿದ್ದಾರೆ. ಇದರ ಜೊತೆಗೆ ಇದಕ್ಕೆ ಸಂಬಂಧಪಟ್ಟಂತೆ ಅನೇಕ ವರದಿಗಳೂ ಸಹ ಇವೆ. ತಮಿಳುನಾಡಿನಲ್ಲಿ ಶ್ರೀ ಪಟ್ಟಾಭಿರಾಮನ್ ಅವರು ಬಸ್‌ಗಳನ್ನು ಲಾಭ ದಾಯಕವಾಗಿ ಯಾವ ರೀತಿ ಓಡಿಸಬಹುದೆಂಬ ಬಗ್ಗೆ ಒಂದು ವರದಿ ಕೊಟ್ಟಿದ್ದಾರೆ. ಈ ವರದಿ ಆಧಾರದ ಮೇಲೆ ಅಲ್ಲಿ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಅದನ್ನು ತಾವು ತರಿಸಿ ನೋಡಬೇಕು. ಮುಖ್ಯವಾಗಿ ತಾವು ಪ್ರತಿ ಜಿಲ್ಲೆಯಲ್ಲಿಯೂ ಕಾರ್ಪೊರೇಷನ್‌ಗಳನ್ನು ಮಾಡುವುದಾದರೆ ತಾವು ಹೆಚ್ಚು ಲಾಭ ಪಡೆಯಬಹುದು, ಇಲ್ಲದಿದ್ದರೆ ಇದು ಸಾಧ್ಯವಾಗುವುದಿಲ್ಲವೆಂಬುದು ನನ್ನ ಅನಿಸಿಕೆ.

ಇನ್ನು ಕಾಂಟ್ರಾಕ್ಟ್ ಕ್ಯಾರೇಜ್‌ಗಳಿಂದಲೂ ಸಹ ನಿಮ್ಮ ಸಂಸ್ಥೆಗೆ ಹಾನಿಯಾಗುತ್ತಿದೆ. ನಾನು ಒಂದು ದಿವಸ ಬೆಂಗಳೂರಿನ ಬಸ್‌ಸ್ಟ್ಯಾಂಡ್‌ಗೆ ಹೋದಾಗ ನೋಡಿದ್ದೇನೆಂದರೆ, ಅಲ್ಲಿರುವಂತಹ ಪೋಲೀಸ್ ಅಧಿಕಾರಿಗಳು ಖಾಸಗಿಯವರು ಓಡಿಸುವಂತಹ ಕಾಂಟ್ರಾಕ್ಟ್ ಕ್ಯಾರೇಜ್ ಬಸ್‌ಗಳಲ್ಲಿ ಪ್ರಯಾಣಿಕರನ್ನು ಕರೆದುಕೊಂಡು ಹೋಗಿ ಕೂರಿಸುತ್ತಿರುವುದನ್ನು ನೋಡಿದೆ. ಇದನ್ನು ನೋಡಿದರೆ ಈ ಪೋಲೀಸ್ ಅಧಿಕಾರಿಗಳು ಈ ಬಸ್‌ನವರ ಜೊತೆ ಶಾಮೀಲಾಗಿರುವಂತೆ ಕಾಣುತ್ತದೆ. ಪೋಲೀಸ್ ಅಧಿಕಾರಿಗಳ ಒಂದು ದಕ್ಷತೆ ಯನ್ನು ಇಲ್ಲಿ ನೋಡಬಹುದಾಗಿದೆ. ಬಹಳ ದಕ್ಷತೆಯಿಂದ ಕೆಲಸ ಮಾಡುವುದನ್ನು ನಾವು ನೋಡಬಹುದು. ಇದಕ್ಕೆ ಖಾಸಗಿ ಬಸ್‌ನವರು ಮಾಮೂಲಿ ಕೊಡಬಹುದೆಂದು ಕಾಣುತ್ತದೆ. ತಾವು ಬೇಕಾದರೆ ಒಂದು ಸಲ ವೇಷ ಬದಲಾಯಿಸಿಕೊಂಡು ಹೋಗಿ ನೋಡಿದರೆ ತಿಳಿಯುತ್ತದೆ.

ಶ್ರೀ ಎಂ. ಪಿ. ಪ್ರಕಾಶ್.—ಫೆಬ್ರವರಿ ತಿಂಗಳವರೆಗೂ ನಾನು ಬಸ್‌ಗಳಲ್ಲಿಯೇ ಓಡಾಡಿದ್ದೇನೆ, ಆದ್ದರಿಂದ ನನಗೂ ಹೆಚ್ಚು ಅನುಭವವಿದೆ.

ಛೇರ್‌ಮನ್.—ಹಳೆಯ ಚಾಡಿನಲ್ಲಿಯೇ ಇದೆ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಮಂತ್ರಿಗಳು ತಮ್ಮ ಒಂದು ಅವಧಿಯಲ್ಲಿ ಇದನ್ನೆಲ್ಲಾ ತಪ್ಪಿಸು ವುದರ ಮೂಲಕ ಒಳ್ಳೆಯ ಕೆಲಸವನ್ನು ಮಾಡಿದರೆ ಜನರು ಸಾವಿರ ವರ್ಷಗಳಾದರೂ ನಮ್ಮನ್ನು ನೆನಪಿನಲ್ಲಿಡು ತ್ತಾರೆ. ಆದ್ದರಿಂದ ತಾವು ಕಾಲಹರಣ ಮಾಡದೆ ತಪ್ಪು ಮಾಡಿದ ಅಧಿಕಾರಿಗಳ ಮೇಲೆ ಕ್ರಮ ತೆಗೆದು

ಕೊಳ್ಳಬೇಕು. ಈಗ ಈ ಖಾಸಗಿ ಬಸ್ ಮಾಲೀಕರುಗಳು ಜಾತ್ರೆ ಇಲ್ಲವೇ ಮದುವೆಗೆ ಎಂದು ಒಂದು ಟ್ರಿಪ್ ಓಡಿಸಲು ಪರ್ಮಿಟ್ ತೆಗೆದುಕೊಂಡು 5–6 ಸಲ ಓಡಿಸುತ್ತಾರೆ. ಇದನ್ನೆಲ್ಲಾ ತಡೆಗಟ್ಟದಿದ್ದರೆ ನಿಮ್ಮ ಸಂಸ್ಥೆಗೆ ಲಾಭ ಬರುವುದಿಲ್ಲ. ಇದಕ್ಕೆ ಮತ್ತೊಂದು ಉದಾಹರಣೆ ಕೊಡಬೇಕೆಂದರೆ, ಬೆಳಗಾಂಗೆ ಹೋಗಬೇಕಾದ ನಿಮ್ಮ ಬಸ್, ಬಸ್‌ಸ್ಟ್ಯಾಂಡಿಗೆ ಬಂದು ನಿಂತರೆ, ಅದಕ್ಕೆ 15 ನಿಮಿಷ ಮುಂಚಿತವಾಗಿ ಬಸ್‌ಸ್ಟಾಂಡ್‌ಗೆ ಹತ್ತಿರದಲ್ಲಿಯೇ ಒಂದು ಖಾಸಗಿ ಬಸ್ ಬಂದು ನಿಲ್ಲುತ್ತದೆ. ಬೆಳಗಾಂಗೆ ಹೋಗಲು ಬರುವ ಪ್ರಯಾಣಿಕರಿಗೆ ನಿಮ್ಮ ಬಸ್‌ನ ಕಂಡಕ್ಟರ್ ಹೇಳುವುದೇನೆಂದರೆ, ನಮ್ಮ ಬಸ್ ಹೋಗಲು ಇನ್ನೂ ಅರ್ಧ ಗಂಟೆ ತಡವಾಗುತ್ತದೆ ಮತ್ತು ಕಾಲಕ್ಕೆ ಸರಿಯಾಗಿ ಹೋಗುತ್ತದೋ ಅಥವಾ ಇಲ್ಲವೋ ಎಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ನೀವು ಅಲ್ಲಿ ನಿಂತಿರುವ ಖಾಸಗಿ ಬಸ್‌ನಲ್ಲಿ ಹೋಗಿ ಎಂದು ಹೇಳುತ್ತಾರೆ. ಇದರ ಜೊತೆಗೆ ಖಾಸಗಿ ಬಸ್‌ನಲ್ಲಿ ರೇಡಿಯೋ ಇದೆ, ಟಿ.ವಿ. ಇದೆ ಮತ್ತು ಅದು ಸುರಕ್ಷಿತವಾಗಿ ಹೋಗಿ ಮುಟ್ಟುತ್ತದೆ ಎಂದೂ ಸಹ ಹೇಳುತ್ತಾರೆ. ಅಂದರೆ ನಿಮ್ಮ ಬಸ್ ಮೇಲೆ ನಿಮ್ಮ ಸಿಬ್ಬಂದಿಗೇ ನಂಬಿಕೆ ಇಲ್ಲವೇ? ರಾಷ್ಟ್ರೀಕರಣವಾಗಿರುವಂತಹ ಮಾರ್ಗಗಳಲ್ಲಿ ಖಾಸಗಿಯವರು ಬಸ್‌ಗಳನ್ನು ಓಡಿಸುವುದನ್ನು ತಾವು ಕೂಡಲೇ ನಿಲ್ಲಿಸಬೇಕು ಮತ್ತು ಈಗಿನ ಒಂದು ಅವ್ಯವಹಾರವನ್ನು ತಡೆಗಟ್ಟಬೇಕು. ತಾವು ಸೂಕ್ತ ಕ್ರಮ ತೆಗೆದುಕೊಳ್ಳದ ಕಾರಣದಿಂದ ಇವರು ಕೋಟಿಗಟ್ಟಲೆ ಹಣ ಸಂಪಾದನೆ ಮಾಡುತ್ತಿದ್ದಾರೆ. ಆಲ್ ಇಂಡಿಯಾ ಪರ್ಮಿಟ್ ತೆಗೆದುಕೊಂಡು ಎಲ್ಲಾ ಕಡೆ ಓಡಿಸುತ್ತಾರೆ. ಇದನ್ನು ತಾವು ಪೂರ್ತಿಯಾಗಿ ನಿಲ್ಲಿಸಬೇಕು.

ಇನ್ನು ಪ್ರತಿವರ್ಷವೂ ತಾವು ಸರ್ಕಾರಕ್ಕೆ 25–30 ಕೋಟಿ ರೂಪಾಯಿಗಳನ್ನು ತೆರಿಗೆ ರೂಪದಲ್ಲಿ ಕೊಡುತ್ತಿದ್ದೀರಿ. ಜನತೆಗೆ ಹೆಚ್ಚು ಸವಲತ್ತುಗಳನ್ನು ಒದಗಿಸುವುದರ ಸಲುವಾಗಿ ತಾವು ಈ ತೆರಿಗೆ ಕೊಡುವುದನ್ನು ನಿಲ್ಲಿಸಬೇಕು. ಸರ್ಕಾರ ಇದನ್ನು ಸಬ್ಸಿಡಿ ಎಂದು ಪರಿಗಣಿಸಲಿ. ಈಗ ಮಹಾರಾಷ್ಟ್ರ, ತಮಿಳುನಾಡು, ಗುಜರಾತ್ ಇಲ್ಲೆಲ್ಲಾ ಈ ರೀತಿ ತೆರಿಗೆ ಕೊಡುತ್ತಿಲ್ಲ. ಆದರೆ ನಮ್ಮ ರಾಜ್ಯದಲ್ಲಿಯೇ ಇಷ್ಟೊಂದು ದೊಡ್ಡ ರೀತಿಯಲ್ಲಿ ಟ್ಯಾಕ್ಸ್ ಕೊಡುತ್ತಿರುವುದು. ಈಗ ತಾವು ತಾಲ್ಲೂಕ್ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ಪ್ರಯಾಣಿಕರಿಗೆ ಹೆಚ್ಚಿನ ಸವಲತ್ತುಗಳನ್ನು ಈ ನಿಗಮದ ಮೂಲಕ ಕೊಡುತ್ತಿರುವುದರಿಂದ ತಾವು ಸರ್ಕಾರದವರಿಗೆ ಕೊಡುತ್ತಿರುವ ತೆರಿಗೆಯನ್ನು ನಿಲ್ಲಿಸಿ ಈಗ ಆಗುತ್ತಿರುವ ಹಾನಿಯನ್ನು ಹೋಗಲಾಡಿಸಬೇಕೆಂದು ಹೇಳುತ್ತೇನೆ. ಇಲ್ಲಿ ಹೆಚ್ಚು ಹೆಚ್ಚು ಉತ್ಪಾದನೆ ಮಾಡಲು ಅವಕಾಶ ಕಲ್ಪಿಸಬೇಕು. ಇದಕ್ಕಾಗಿ ಈಗಿರುವ ವರ್ಕ್‌ಷಾಪ್‌ಗಳ ಒಂದು ಕೆಪಾಸಿಟಿಯನ್ನು ಹೆಚ್ಚು ಮಾಡಬೇಕು. ಈ ವರ್ಕ್‌ಷಾಪಿನಲ್ಲಿ ಕೆಲವು ಪಾರ್ಟ್ಸ್‌ಗಳನ್ನು ತಯಾರು ಮಾಡುತ್ತಾರೆಂದು ನಾನು ಈ ವರದಿಯನ್ನು ನೋಡಿ ತಿಳಿದುಕೊಂಡಿದ್ದೆ. ಆದರೆ ಅಲ್ಲಿ ಏನನ್ನೂ ತಯಾರು ಮಾಡುತ್ತಿಲ್ಲ, ಹೊರಗಿನಿಂದ ತರಿಸುವಂತಹ ಪಾರ್ಟ್‌ಗಳನ್ನು ಇಲ್ಲಿ ಜೋಡಿಸುತ್ತಾರೆ. ನಮ್ಮ ಕೆಲಸಗಾರರಲ್ಲಿ ಮತ್ತು ಇಂಜಿನಿಯರ್‌ಗಳಲ್ಲಿ ಕೆಲಸ ಮಾಡಬೇಕೆಂಬ ಬಗ್ಗೆ ಹೆಚ್ಚಿನ ಒಂದು ಹುಮ್ಮಸ್ಸು ಇದೆ. ಆದ್ದರಿಂದ ಇವರುಗಳಿಗೆ ಹೆಚ್ಚಿನ ಒಂದು ಸವಲತ್ತುಗಳನ್ನು ಒದಗಿಸಿಕೊಡಬೇಕು. ಈ ಬಿಡಿಭಾಗಗಳನ್ನು ಖರೀದಿ ಮಾಡುವುದರಲ್ಲಿಯೂ ಸಹ ಅಧಿಕಾರಿಗಳ ಕೈವಾಡವಿದೆ. ತಮ್ಮ ಒಂದು ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವುದರ ಮೂಲಕ ಬಿಡಿಭಾಗಗಳನ್ನು ಖರೀದಿ ಮಾಡುವಾಗ ಇಷ್ಟು ಪರ್ಸೆಂಟ್ ಎಂದು ಪಡೆಯುತ್ತಿದ್ದಾರೆ. ಇದರ ಬಗ್ಗೆ ನನ್ನ ಹತ್ತಿರ ಎಲ್ಲಾ ವಿವರಗಳೂ ಇವೆ. ಎಲ್ಲವನ್ನೂ ಹೇಳಲು ಸಮಯವಿಲ್ಲ. ಯಾವ ಯಾವ ಫರ್ಮ್‌ಗಳಿಂದ ಎಷ್ಟೆಷ್ಟು ಪರ್ಸೆಂಟೇಜ್ ಪಡೆಯುತ್ತಿದ್ದಾರೆಂಬ ವಿವರಗಳು ನನ್ನಲ್ಲಿವೆ. ಕಂಟ್ರಾಕ್ಟ್ ಕೊಡುವುದರಲ್ಲಿ ಮತ್ತು ಟೆಂಡರ್ ಕರೆಯುವುದರಲ್ಲಿ ಈ ರೀತಿ ಅವ್ಯವಹಾರಗಳು ಕಳೆದ 20 ವರ್ಷಗಳಿಂದಲೂ ನಡೆದುಕೊಂಡು ಬಂದಿವೆ. ಅಲ್ಲಿ ಛೇರ್‌ಮನ್ ಯಾರೇ ಇರಲಿ, ಅಧಿಕಾರಿಗಳು ಮಾತ್ರ ಮೊದಲಿನಂತೆಯೇ ನಡೆದುಕೊಳ್ಳುತ್ತಿದ್ದಾರೆ. ಇದನ್ನು ಹೋಗಲಾಡಿಸಲು ತಮಿಳುನಾಡಿನ ಪದ್ಧತಿಯನ್ನು ಇಲ್ಲಿ ಅನುಸರಿಸುವುದು ಒಳ್ಳೆಯದು. ಈಗ ಯಾವುದೇ ಒಂದು ಬಸ್ ರಿಪೇರಿ ಮಾಡಬೇಕಾದರೆ ಅದಕ್ಕೆ ಬೇಕಾದ ಸಾಮಾನುಗಳಿರುವುದಿಲ್ಲ. ಅದನ್ನು ಖರೀದಿ ಮಾಡಲು ಡಿಪೋ ಮೇನೇಜರಿಗೆ ಅಧಿಕಾರವಿರುವುದಿಲ್ಲ. ಮೇಲಿನ ಅಧಿಕಾರಿಗಳಿಗೆ ಬರೆದು ತರಿಸಿಕೊಳ್ಳಬೇಕಾಗಿದೆ. ಇದಕ್ಕೆ ಬದಲು ತಾವು ಅಧಿಕಾರ ವಿಕೇಂದ್ರೀಕರಣ ಮಾಡುವುದು ಒಳ್ಳೆಯದು. ಮುಖ್ಯವಾಗಿ ಬಿಡಿಭಾಗಗಳನ್ನು ಇಲ್ಲಿಯೇ ತಯಾರಿಸಲು ವ್ಯವಸ್ಥೆ ಮಾಡಬೇಕು. ಮತ್ತು ಹೆಚ್ಚಿನ ಸವಲತ್ತುಗಳನ್ನು ಕೊಡಲು ವ್ಯವಸ್ಥೆ ಮಾಡಿದರೆ ಇದು ಲಾಭದಾಯಕವಾಗಿ ನಡೆಯುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಕಡೆಗೆ ಲಕ್ಷ್ಯವಹಿಸಬೇಕು. ಕಳೆದ ಇಪ್ಪತ್ತು ವರ್ಷಗಳಿಂದ ಜನರಿಗೆ ಒದಗಿಸಿರುವ ಅನುಕೂಲಗಳ ಬಗ್ಗೆ ಅಂಕಿ ಅಂಶಗಳನ್ನು ನೋಡಿದ್ದೇ ಆದರೆ ಅದು ನಮಗೆ ಅಷ್ಟು ತೃಪ್ತಿಕರವಾಗಿ ಕಾಣುತ್ತಿಲ್ಲ. ಹಳ್ಳಿಗಳ ಕಡೆ ಬಸ್‌ಗಾಗಿ ನಿಲ್ಲುವ ಕಡೆಗಳಲ್ಲಿ ಬಸ್ ಷೆಲ್ಟರ್‌ಗಳನ್ನು ನಿರ್ಮಿಸಬೇಕು. ಬಸ್ಸಿಗಾಗಿ ಕಾಯುವ ಸಣ್ಣ ಸಣ್ಣ ಮಕ್ಕಳು ಗಂಡಸರು, ಗಂಡಸರು ಇರಲಿ, ಹೆಣ್ಣುಮಕ್ಕಳು ರಸ್ತೆ ಬದಿಯಲ್ಲಿ ಮಳೆ ಗಾಳಿ ಬಿಸಿಲು ಚಳಿಗೆ ನಿಂತಿರುತ್ತಾರೆ. ಆದ್ದರಿಂದ ರಸ್ತೆಯ ಬದಿಯಲ್ಲಿ ಬಸ್‌ಷೆಲ್ಟರ್‌ಗಳನ್ನು ನಿರ್ಮಿಸಬೇಕು. ಎಲ್ಲಿ ಬಸ್ ಷೆಲ್ಟರ್‌ಗಳು ಇಲ್ಲ ಅಂತಹ ಕಡೆಗಳಲ್ಲಿ ಷೆಲ್ಟರ್‌ಗಳನ್ನು ಕಟ್ಟಿಸಲು ಕ್ರಮ ತೆಗೆದುಕೊಳ್ಳಬೇಕು. ಹಳ್ಳಿಗಳ ಕಡೆ ಹೆಚ್ಚು ಹೆಚ್ಚು ಅನುಕೂಲತೆಗಳನ್ನು ಒದಗಿಸಬೇಕು. ಇದರ ಬಗ್ಗೆ ತಾವು ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನೂ ಅನೇಕ ವಿಚಾರಗಳನ್ನು ಹೇಳಬೇಕಾಗಿದೆ, ಆದರೆ ಸಮಯದ

ಅಭಾವವಿರುವುದರಿಂದ ಹೆಚ್ಚಿಗೆ ಹೇಳಲಿಕ್ಕೆ ಹೋಗುವುದಿಲ್ಲ. ಸಾರಿಗೆ ಇಲಾಖೆ ಏನೊಂದು ಕೆಟ್ಟ ಆಪಾದನೆಗೆ ಗುರಿಯಾಗಿದೆ, ಆ ಒಂದು ಕೆಟ್ಟ ಆಪಾದನೆಯನ್ನು ಹೋಗಲಾಡಿಸಿ ದಕ್ಷತೆಯಿಂದ ಕೆಲಸ ಮಾಡತಕ್ಕ ಅಧಿಕಾರಿಗಳನ್ನು ಗುರುತು ಹಚ್ಚಿ ಎಕ್ಸಿಕ್ಯುಟೀವ್ ಪೋಸ್ಟ್‌ಗಳಲ್ಲಿ ಹಾಕಿದರೆ ಹೆಚ್ಚಿನ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಯಾರು ಒಂದೇ ಕಡೆ ಇದ್ದಾರೆ ಅಂತಹವರನ್ನು ನಾನ್ ಎಕ್ಸಿಕ್ಯುಟೀವ್ ಪೋಸ್ಟ್‌ಗಳಲ್ಲಿ ಹಾಕಿ ಒಂದು ಪೆನ್ ಕೊಟ್ಟು ಕೂಡಿಸಿ, ಒಳ್ಳೆಯ ದಕ್ಷತೆಯಿಂದ ಕೆಲಸ ಮಾಡತಕ್ಕವರನ್ನು ಎಕ್ಸಿಕ್ಯುಟೀವ್ ಪೋಸ್ಟ್‌ಗಳನ್ನು ಕೊಟ್ಟು ಅವರಿಂದ ಕೆಲಸ ತೆಗೆದುಕೊಳ್ಳಿ. ಆ ರೀತಿ ಮಾಡಿದರೆ ನಿಮ್ಮ ಸರ್ಕಾರಕ್ಕೂ ಮತ್ತು ನಿಮ್ಮ ಪಕ್ಷಕ್ಕೂ ಒಳ್ಳೆಯ ಕೀರ್ತಿ ಬರುತ್ತದೆಂದು ನಾನು ಘಂಟಾಘೋಷವಾಗಿ ಹೇಳುತ್ತಿದ್ದೇನೆ. ನನಗೆ ಈ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನು ಆಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ಧನಂಜಯಕುಮಾರ್ (ಮಂಗಳೂರು).—ಸನ್ಮಾನ್ಯ ಛೇರ್ಮನ್‌ರವರೇ, ಈ ದಿವಸ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳ ಮೇಲೆ ನಾನು ಸೂಕ್ಷ್ಮವಾಗಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿದೆ. ಕಾರ್ಮಿಕ ಇಲಾಖೆಗೆ ಸುಮಾರು 20 ಕೋಟಿ 60 ಲಕ್ಷದ 14 ಸಾವಿರ ರೂಪಾಯಿಗಳ ಬೇಡಿಕೆ ಇವತ್ತು ಸದನದ ಮುಂದಿದೆ. ಈ ಒಂದು ಕಾರ್ಮಿಕ ಇಲಾಖೆಯಲ್ಲಿ ನಾವು ಎಲ್ಲರೂ ತಿಳಿದುಕೊಂಡ ಹಾಗೆ, ಕಾರ್ಮಿಕರ ಕಲ್ಯಾಣಕ್ಕಾಗಿ ಇಟ್ಟಿರುವ ಈ ಅಗಾಧವಾದ ಬೇಡಿಕೆಯನ್ನು ನಾನು ಅನುಮೋದಿಸುತ್ತೇನೆ. ಇವತ್ತು ತಾವು ತಿಳಿದುಕೊಂಡ ಹಾಗೆ ನಮ್ಮ ರಾಜ್ಯದಲ್ಲಿ ಇಡೀ ರಾಷ್ಟ್ರದಲ್ಲಿಯೇ ಹಲವಾರು ಕಾಯಿದೆಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದಿದ್ದು ಹಗಲು ರಾತ್ರಿ ಕೈಗಾರಿಕೆಗಳಲ್ಲಿ ಉತ್ಪನ್ನ ಹೆಚ್ಚಿಸುವುದಕ್ಕೋಸ್ಕರ ದುಡಿಯತಕ್ಕಂತಹ ಕಾರ್ಮಿಕರಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಜೊತೆಗೆ ಅವರಿಗೆ ಸರಿಯಾದ ವೇತನ ಸೌಲಭ್ಯಗಳನ್ನು ಒದಗಿಸುವಂತಹ ಕೆಲಸವನ್ನು ಈ ಕಾರ್ಮಿಕ ಇಲಾಖೆಗೆ ಮಾಡಬೇಕಾಗಿದೆ. ನಮಗೆ ಒದಗಿಸಿರುವ ವಾರ್ಷಿಕ ವರದಿಯಲ್ಲಿ ಹಲವಾರು ವಿಷಯಗಳನ್ನು ಉಲ್ಲೇಖ ಮಾಡಿದ್ದಾರೆ. ಕಾನೂನುಗಳನ್ನು ಜಾರಿಗೆ ತರುವಲ್ಲಿ. ಯಾವ ರೀತಿಯಲ್ಲಿ ಕೆಲಸ ಮಾಡಬೇಕಾಗಿದೆ ಆ ಬಗ್ಗೆ ಕೂಡ ವಿವರವಾಗಿ ಪ್ರಸ್ತಾಪ ಮಾಡಿರುವುದು ಈ ವರದಿಯಲ್ಲಿದೆ. ಇವತ್ತು ಕರ್ನಾಟಕದಲ್ಲಿ ಜನತಾ ಸರ್ಕಾರ ಪ್ರಪ್ರಥಮವಾಗಿ ಅಧಿಕಾರಕ್ಕೆ ಬಂದ ಮೇಲೆ ಕಾರ್ಮಿಕರಿಗೆ ಒಳಿತನ್ನು ಮಾಡುತ್ತಾರೆಂದು ತಿಳಿದುಕೊಂಡಿದ್ದ ನಮಗೆ, ಇವತ್ತು ಬಹಳ ದೊಡ್ಡ ಪ್ರಮಾಣದಲ್ಲಿ ನಿರಾಶೆಯಾಗಿದೆಯೆಂದು ನಾನು ಒತ್ತಿ ಹೇಳಬೇಕಾಗಿದೆ. ನನ್ನ ಮಿತ್ರರಾದ ಕೃಷ್ಣನ್‌ರವರು ಈ ಬೇಡಿಕೆಗಳ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡುತ್ತಾ ಹೇಳಿದರು, ಮಿನಿಮಮ್ ಅಡ್ವೈಸರಿ ಬೋರ್ಡ್‌ನ್ನು ಬಹಳ ಸಮಯದ ನಂತರ. ಕಾನ್‌ಸ್ಟಿಟ್ಯೂಟ್ ಮಾಡಿದ್ದಾರೆ. ಅದರ ರೀತಿ ಮತ್ತು ಪ್ರತಿನಿಧಿಗಳ ಬಗ್ಗೆ ಅವರು ಈಗಾಗಲೇ ತಿಳಿಸಿದ್ದಾರೆ. ನಾನು ಅದರ ಬಗ್ಗೆ ವಿಶೇಷವಾಗಿ ಏನನ್ನೂ ಪ್ರಸ್ತಾಪ ಮಾಡುವುದಿಲ್ಲ. ಆದರೆ ಹಿಂದೆ ಕೆಲವು ಕೈಗಾರಿಕೆಗಳ ವಿಷಯದಲ್ಲಿ ಟ್ರೈಪಾರ್ಟೇಟ್ ಕಮಿಟಿ ಯಾವುದು ಇದೆ, ಕಾರ್ಮಿಕರು ಮಾಲೀಕರು ಹಾಗೂ ಸರ್ಕಾರದ ಪ್ರತಿನಿಧಿಗಳು ಒಟ್ಟಿಗೆ ಸೇರಿ ಒಮ್ಮತದಿಂದ ಒಪ್ಪಿಕೊಂಡಂತಹ ಕನಿಷ್ಠ ವೇತನ ಕಾಯಿದೆಯನ್ನು ಜಾರಿಗೆ ತರುವಲ್ಲಿ ಸರ್ಕಾರ ಕ್ರಮ ಕೈಗೊಂಡಿಲ್ಲ ಎನ್ನುವ ಬೇಸರದ ವಿಚಾರವನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ಉದಾಹರಣೆಗೆ ಕ್ಯಾಷ್ಯು ಇಂಡಸ್ಟ್ರಿ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಈ ಒಂದು ಕೈಗಾರಿಕೆಯಲ್ಲಿ ಸಾವಿರಾರು ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಒಪ್ಪಿಕೊಂಡಂತಹ ಕನಿಷ್ಠ ವೇತನವನ್ನು ಜಾರಿಗೆ ತರುವಲ್ಲಿ ಸರ್ಕಾರ ಕಾನೂನು ಮಾಡಿಲ್ಲ. ಅದಕ್ಕೆ ಬೇಕಾದಂತಹ ನೋಟಿಫಿಕೇಷನ್ ಇನ್ನೂ ಹೊರಡಿಸಿಲ್ಲ ಎನ್ನುವ ಮಾತನ್ನು ನಾನು ಇಲ್ಲಿ ಹೇಳಬೇಕಾಗಿದೆ. ಮೊನ್ನೆತಾನೇ ನಡೆದಂತಹ ಸಭೆಯಲ್ಲಿ ಬೀಡಿ ಕಾರ್ಮಿಕರ ವೇತನದ ಬಗ್ಗೆ ಸರ್ಕಾರದ ಪ್ರತಿನಿಧಿಗಳು, ಮಾಲೀಕರು, ಕಾರ್ಮಿಕರು, ಎಲ್ಲಾ ಒಟ್ಟಿಗೆ ಸೇರಿ ಒಂದು ಪರಿಹಾರ ಕಂಡುಕೊಂಡಿದ್ದಾರೆ. ಈ ರೀತಿ ಒಪ್ಪಿಕೊಂಡಂತಹ ಕಾನೂನು ಫಲಕಾರಿಯಾಗಬೇಕಾದರೆ, ಕನಿಷ್ಠ ವೇತನ ಕಾಯಿದೆ ಜಾರಿಗೆ ತರತಕ್ಕಂತಹ ನೋಟಿಫಿಕೇಷನ್ ಅನ್ನು ಇನ್ನೂ ಹೊರಡಿಸಿಲ್ಲ. ಆ ಕೆಲಸವನ್ನು ದಯಮಾಡಿ ಬೇಗ ಮಾಡಬೇಕೆಂದು ನಾನು ಕಾರ್ಮಿಕ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಇನ್ನು ಇತರೆ ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಸಹಾಯ ಮಾಡಬೇಕೆನ್ನುವ ಮನಸ್ಸು ಸರ್ಕಾರಕ್ಕೆ ಇದ್ದರೆ, ಆದಷ್ಟು ಶೀಘ್ರವಾಗಿ ಕನಿಷ್ಟ ವೇತನ ಕಾಯಿದೆಯನ್ನು ಜಾರಿಗೆ ತರಬೇಕು. ಹಿಂದಿನ ಅಡ್ವೈಸರಿ ಬೋರ್ಡ್‌ನವರು ಯಾವ ರೀತಿಯ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕೆಂದು ತೀರ್ಮಾನ ಮಾಡಿದ್ದಾರೆ ಅದು ಸರ್ಕಾರದ ಮುಂದೆ ಇದೆ; ಅದರ ಆಧಾರದ ಮೇಲೆ ಆದಷ್ಟು ಶೀಘ್ರವಾಗಿ ಕನಿಷ್ಠ ವೇತನ ಕಾಯಿದೆಯನ್ನು ಜಾರಿಗೆ ತರಲಿಕ್ಕೆ ಯೋಗ್ಯ ಪರಿಹಾರ ಕಂಡುಹಿಡಿಯಬೇಕಾಗಿದೆ. ತಮಗೆ ಗೊತ್ತಿರುವ ಹಾಗೆ ರಾಜ್ಯದ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ವಿಚಾರಣೆಗೆ ಬಂದಾಗ, ಸ್ಪಷ್ಟವಾಗಿ ಉಚ್ಚನ್ಯಾಯಾಲಯದ ಆದೇಶ ಬಂದಿದೆ. 31 ನೇ ಡಿಸೆಂಬರ್ 1982 ರೊಳಗೆ ಮಾಡಬೇಕಾಗಿತ್ತು. ದುರಾದೃಷ್ಟವಶಾತ್ ಅಂದಿನ ಸರ್ಕಾರ ಮಾಡಲಿಲ್ಲ. ಇದರ ಬಗ್ಗೆ ಪದೇ ಪದೇ ಉಲ್ಲೇಖ ಮಾಡಿದ್ದಾರೆ, ಈ ಸರ್ಕಾರ ಬಂದು ಈಗಾಗಲೇ 8 ತಿಂಗಳುಗಳು ಕಳೆದುಹೋಗಿವೆ, ಹೊಸ ಸರ್ಕಾರ ಇದರ ಬಗ್ಗೆ ಹೆಚ್ಚು ಕಾಳಜಿ ವಹಿಸಿ ಕೆಲಸ ಮಾಡುತ್ತಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಈಗ ಒಂದು ಕಮಿಟಿಯನ್ನು ಮಾಡಿದ್ದಾರೆ. ರಾಜ್ಯದಲ್ಲಿ ಖಾಲಿಯಿರತಕ್ಕ 35 ಸಾವಿರ ಹುದ್ದೆಗಳನ್ನು ತುಂಬಲಿಕ್ಕೆ

ನೇಮಕಾತಿ ಸಮಿತಿಗಳನ್ನು ಮಾಡಿದ್ದೇವೆಂದು ಶಹಭಾಷ್‌ಗಿರಿ ಹೇಳಿಕೊಳ್ಳಲಿಕ್ಕೆ 33 ನೇಮಕಾತಿ ಸಮಿತಿಗಳನ್ನು ಮಾಡಿದ್ದೇವೆಂದು ಹೇಳಿಕೊಳ್ಳುತ್ತಾರೆ. ಅದೇ ರೀತಿ ಮಿನಿಮಮ್ ವೇಜಸ್ ಅಡ್ವೈಸರಿ ಬೋರ್ಡ್ ನೇಮಕ ಮಾಡಿದ್ದಾರೆ. ಆದರೆ ಆ ಬೋರ್ಡ್ ಸಭೆಗಳನ್ನು ಶೀಘ್ರವಾಗಿ ನಡೆಸಿ ಮಿನಿಮಮ್ ವೇಜಸ್ ಕಾಯಿದೆಯನ್ನು ಜಾರಿಗೆ ತರುವಲ್ಲಿ ಯಾವುದೇ ತೀರ್ಮಾನ ಕೈಗೊಂಡ ಹಾಗೆ ಇವತ್ತು ಕಾಣುತ್ತಿಲ್ಲ. ಅದೇರೀತಿ ಯಾವುದೇ ಇಲಾಖೆಯಲ್ಲಿ ದುಡಿಯುತಕ್ಕಂತಹ ಕಾರ್ಮಿಕರ ಕಲ್ಯಾಣದ ಬಗ್ಗೆ ಕೆಲಸ ಮಾಡುವಂತಹ, ಅವರ ವೇತನದ ಬಗ್ಗೆ ಇರುವಂತಹ ಯಾವುದೇ ತೊಂದರೆಗಳನ್ನು ಪರಿಹಾರ ಮಾಡಿದ ಹಾಗೆ ಕಂಡುಬರುತ್ತಿಲ್ಲ. ದುಡಿಯುತಕ್ಕಂತಹ ಕಾರ್ಮಿಕರಿಗೆ ಬರುವಂತಹ ಅಡ್ಡಿಯನ್ನು ದೂರ ಮಾಡಿ, ಅವರಿಗೆ ಸಿಗಬೇಕಾದ ಸವಲತ್ತುಗಳನ್ನು ಸಿಗುವಂತಹ ವ್ಯವಸ್ಥೆಯನ್ನು ಮಾಡಬೇಕು. ಕಾರ್ಮಿಕರಿಗೆ ಇರತಕ್ಕ ಎಲ್ಲಾ ತೊಂದರೆಗಳನ್ನು ಪರಿಹಾರ ಮಾಡಬೇಕು. ಕಾರ್ಮಿಕರಿಗೆ ಮಾಲೀಕರು ಸರಿಯಾದ ಸವಲತ್ತುಗಳನ್ನು ಒದಗಿಸುತ್ತಿದ್ದಾರೆಯೋ, ಅವರಿಗೆ ಕಾನೂನು ಪ್ರಕಾರ ಸಿಗಬೇಕಾದ ಸೌಕರ್ಯಗಳನ್ನು ಕೊಡುತ್ತಿದ್ದಾರೆಯೋ, ಅವರು ಕಾನೂನು ಪ್ರಕಾರ ಕಾರ್ಖಾನೆಗಳನ್ನು ನಡೆಸುತ್ತಿದ್ದಾರೆಯೋ—ಇವುಗಳನ್ನೆಲ್ಲಾ ನೋಡಿಕೊಳ್ಳುವಂತಹ ಇಲಾಖೆ ಕಾರ್ಮಿಕ ಇಲಾಖೆ. ಕೈಗಾರಿಕೆಗಳ ವಾದವಿವಾದಗಳು ಏನಿವೆ ಅವುಗಳನ್ನು ಪರಿಹಾರ ಮಾಡಲಿಕ್ಕೆ ಇರುವಂತಹ ಕನ್ಸಿಲಿಯೇಷನ್ ಆಫೀಸರ್ ಆಗಬಹುದು, ಲೇಬರ್ ಕಮಿಷನರ್ ಆಗಬಹುದು, ಅಸಿಸ್ಟೆಂಟ್ ಲೇಬರ್ ಕಮಿಷನರ್ ಆಗಬಹುದು. ರಾಜ್ಯ ಮಟ್ಟದಲ್ಲಿರುವ ಯಾರೇ ಆಗಲಿ ಅವರು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ ಎನ್ನುವ ವಿಚಾರವನ್ನು ನಾನು ಹೇಳಬೇಕಾಗಿದೆ.

ಮಾನ್ಯ ಅಧ್ಯಕ್ಷರೆ, ನಾನು ವಿಶೇಷವಾಗಿ ಮಂಗಳೂರು ವಿಚಾರವಾಗಿ ಪ್ರಸ್ತಾಪ ಮಾಡುತ್ತಿದ್ದೇನೆ. ಸ್ವಾಮಿ, ತಾವು ಮಂಗಳೂರಿನಲ್ಲಿರುವ ಕಾರ್ಮಿಕ ಇಲಾಖೆಗೆ ಭೇಟಿ ಕೊಡಿ. ಆಗ ಅಲ್ಲಿನ ಪರಿಸ್ಥಿತಿ ತಮಗೆ ಗೊತ್ತಾಗುತ್ತದೆ. ಮಳೆಗಾಲದಲ್ಲಿ ಸುಮಾರು ಒಂದೂವರೆ ಅಡಿಯಷ್ಟು ನೀರು ನೆಲದಲ್ಲಿ ನಿಂತಿರುತ್ತದೆ ಮತ್ತು ಮೇಲಿಂದ ಕೂಡ ನೀರು ಅಲ್ಲಿ ಬರುತ್ತದೆ. ಇದರಿಂದ ಮಳೆಗಾಲದಲ್ಲಿ ಅಲ್ಲಿರತಕ್ಕಂತಹ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ಅಲ್ಲಿ ಸರಿಯಾದ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತು ಆ ಕಛೇರಿಯವರಿಗೆ ಬೇಕಾದಂತಹ ಸಿಬ್ಬಂದಿ ವರ್ಗವನ್ನೂ ಕೂಡ ಒದಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸ್ವಾಮಿ, ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು 75 ಸಾವಿರ ಹುದ್ದೆಗಳು ಖಾಲಿ ಇವೆಯೆಂದು ನಾನು ಕೇಳಿದ್ದೇನೆ. ಆ ಹುದ್ದೆಗಳನ್ನು ಕಾಲ್ಫಾರ್ ಮಾಡಿ ಏತಕ್ಕೆ ತುಂಬಿಕೊಳ್ಳಬಾರದು ? ಮತ್ತೆ ಇವತ್ತು ಮಂಗಳೂರು ನಗರದಲ್ಲಿ ವಾಸ ಮಾಡುವುದಕ್ಕೆ ಮನೆಗಳು ಸಿಗುತ್ತಿಲ್ಲ. ಅಧಿಕಾರಿಗಳು ಅಲ್ಲಿ ಯಾವುದಾದರೊಂದು ಕೆಲಸಕ್ಕೆ ಹೋದಾಗ ಅಲ್ಲಿ ವಾಸ ಮಾಡುವುದಕ್ಕೆ ಸರ್ಕಾರಿ ಗೃಹ ಇಲ್ಲ. ಇದರಿಂದ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಮತ್ತೆ ಅಲ್ಲಿ ಒಂದು ಲೇಬರ್ ಕೋರ್ಟ್ ಇದೆ. ಅಲ್ಲಿ ಸರಿಯಾದ ಸಿಬ್ಬಂದಿ ವರ್ಗ ಇಲ್ಲ. ಇದರಿಂದ ಕಾರ್ಮಿಕರ ಕುಂದುಕೊರತೆಗಳು ಕಾಲಕ್ಕೆ ಸರಿಯಾಗಿ ನಿವಾರಣೆಯಾಗುವುದಿಲ್ಲ. ನಾನು ಈ ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೂ ಕೂಡ ಅನೇಕ ಬಾರಿ ತಂದಿದ್ದೇನೆ. ಇವತ್ತು ಕೋರ್ಟಿನಲ್ಲಿ ಬೇಗ ಬೇಗನೆ ಕಟ್ಲೆಗಳನ್ನು ತೀರ್ಮಾನ ಮಾಡುವುದಕ್ಕೆ ಆಗುತ್ತಿಲ್ಲ. ಮತ್ತು ಅಲ್ಲಿನ ಕಾರ್ಮಿಕರು ಅನೇಕ ಸಾರಿ ಮೆರವಣಿಗೆಯನ್ನೂ ಸಹ ಮಾಡಿ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಆದರೂ ಕೂಡ ಸರ್ಕಾರದವರು ಇದುವರೆಗೆ ಯಾವ ಕ್ರಮವನ್ನೂ ಸಹ ತೆಗೆದುಕೊಂಡಿಲ್ಲ. ಇದಕ್ಕೆ ನಾನು ಬಹಳ ವಿಷಾದವನ್ನು ವ್ಯಕ್ತಪಡಿಸಬೇಕಾಗುತ್ತದೆ. ಕಾರ್ಮಿಕ ಮಂತ್ರಿಗಳು ಅವರ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ವಿಫಲರಾಗಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅವರು ಒಂದು ವಿಚಿತ್ರ ರೀತಿಯಲ್ಲಿ ವರ್ತನೆಯನ್ನು ಮಾಡುತ್ತಿದ್ದಾರೆಂದು ಹೇಳಿದರೂ ಕೂಡ ಯಾರೂ ತಪ್ಪು ತಿಳಿದುಕೊಳ್ಳಬಾರದು. ಮತ್ತೊಂದು ವಿಷಯವನ್ನು ನಾನು ಮಾನ್ಯ ಸದನದ ಗಮನಕ್ಕೆ ತರಬಯಸುವುದೇನೆಂದರೆ ಕಾರ್ಮಿಕ ಇಲಾಖೆಯಲ್ಲಿರುವಂತಹ ಫ್ಯಾಕ್ಟರೀಸ್ ಮತ್ತು ಬಾಯಿಲರ್ ಡಿಪಾರ್ಟ್‌ಮೆಂಟನ್ನು ಪ್ರತ್ಯೇಕಗೊಳಿಸುವ ಯೋಜನೆಯನ್ನು ಮಾಡಿದ್ದಾರೆ. ಇದು ಸರಿಯಾದುದಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅವರು ಈ ವಿಷಯವನ್ನು ತಮ್ಮ ವರದಿಯಲ್ಲಿ ಕೂಡ ತಿಳಿಸಿದ್ದಾರೆ. ಆದ್ದರಿಂದ ನಾನು ಇಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಮತ್ತೆ ಮಾನ್ಯ ಮಂತ್ರಿಗಳ ಮೇಲೆ ಟೈಮ್ಸ್ ಆಫ್ ಡೆಕ್ಕನ್ ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದಿದ್ದಾರೆ. ಅದು ಈ ರೀತಿ ಇದೆ. ಅದನ್ನು ನಾನು ಮಾನ್ಯ ಅಧ್ಯಕ್ಷರ ಅನುಮತಿಯನ್ನು ಪಡೆದು ಇಲ್ಲಿ ಸ್ವಲ್ಪ ಉಲ್ಲೇಖ ಮಾಡಬಯಸುತ್ತೇನೆ.

In *Times of Deccan*, 1st September 1983, it has been stated thus :

"Favouritism charged against Sait :

Labour Minister Azeez Sait allegedly flouted recruitment rules and Constitutional provisions to further the interests of a female officials according to the Writ Petition filed before the Karnataka High Court. The Petition filed by Gowd Rangappa, Inspector of Factories, Belgaum, challenges the Govt. Order transferring

the post of Addl. Director of Women and Children's Welfare from the Department of Women and Children Welfare to the Department of Factories and Boilers saying that it was done to further the prospects of the incumbent Rabia Begum..."

ಛೇರ್ಮನ್.—ಅವರು ಏನು ಹೇಳಿದ್ದಾರೆ? ಅದನ್ನು ತಾವು ಇಲ್ಲಿ ಪ್ರಸ್ತಾಪ ಮಾಡುವುದು ಸರಿಯಲ್ಲ. ಕಾರಣವೇನೆಂದರೆ ಈ ವಿಷಯ ಈಗಾಗಲೇ ಕೋರ್ಟಿನಲ್ಲಿ ಇದೆ. ಆದ್ದರಿಂದ ನಾವು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ.

SRI V. DHANANJAYA KUMAR.—"Naming the Minister as a respondent, the petitioner said that Azeez Sait had taken a personal interest not only.

SRI A. LAKSHMISAGAR.—The matter is before the court. It is sub-judice.

MR. CHAIRMAN.—It is before the court now. The matter has gone to the court. ಕೋರ್ಟಿನಲ್ಲಿ ಈ ವಿಷಯವಿದ್ದಾಗ ಅದರ ಬಗ್ಗೆ ನಾವು ಚರ್ಚೆ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ವಿ. ಧನಂಜಯಕುಮಾರ್.—ಸ್ವಾಮಿ, ಮಾನ್ಯ ಮಂತ್ರಿಗಳು ಯಾವ ರೀತಿಯಲ್ಲಿ ವರ್ತನೆ ಮಾಡುತ್ತಿದ್ದಾರೆ ಎಂಬುದರ ಬಗ್ಗೆ ನಾನು ಸ್ವಲ್ಪ ಪ್ರಸ್ತಾಪ ಮಾಡುತ್ತಿದ್ದೇನೆ. ಇವತ್ತು ಲಕ್ಷಾಂತರ ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ಅವರು ಕಷ್ಟದಲ್ಲಿದ್ದಾರೆ. ಅವರ ಬಗ್ಗೆ ಇವರು ಯಾವ ಕ್ರಮವನ್ನೂ ಸಹ ತೆಗೆದುಕೊಂಡಿಲ್ಲ. ಅವರಿಗೆ ಯಾವುದೇ ರೀತಿಯ ಪರಿಹಾರವನ್ನೂ ಕೊಟ್ಟಿಲ್ಲ. ಆದರೆ ಈ ಲೇಬರ್ ಇಲಾಖೆಯಲ್ಲಿರುವಂತಹ ಫ್ಯಾಕ್ಟರೀಸ್ ಮತ್ತು ಬಾಯಿಲರ್ಸ್ ಡಿಪಾರ್ಟ್‌ಮೆಂಟನ್ನು ವರ್ಗಾವಣೆ ಮಾಡುವುದಕ್ಕೆ ಹೊರಟಿದ್ದಾರೆ. ಇದು ಯಾವ ನ್ಯಾಯ? ಮತ್ತು ತಮ್ಮ ಸ್ವಜಾತಿಯವರಿಗೆ ಇವರು ಸಹಾಯ ಮಾಡುತ್ತಾರೆ. ಇವರಲ್ಲಿ ಸ್ವಜನ ಪಕ್ಷಪಾತವಿದೆ. ಇವರು ಸ್ವಜನ ಪಕ್ಷಪಾತಿಗಳು. ಆದ್ದರಿಂದ ನಾನು ಇವರ ಮೇಲೆ ನೇರ ಆಪಾದನೆಯನ್ನು ಮಾಡಬೇಕಾಗುತ್ತದೆ. ಇದರಲ್ಲಿ ಇವರಿಗೆ ಇಷ್ಟೊಂದು ಹಿತಾಸಕ್ತಿಯೇನು?

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ಗಂಭೀರವಾದ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಆದರೆ ಮಾನ್ಯ ಕಾರ್ಮಿಕ ಇಲಾಖೆಯ ಮಂತ್ರಿಗಳು ಸದನದಲ್ಲಿ ಇಲ್ಲ. ಅವರ ಪರವಾಗಿ ಶ್ರೀಮಾನ್ ರಘುಪತಿಯವರು ಇದ್ದಾರೆ. ಆದ್ದರಿಂದ ಅವರು ಈಗ ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ?

ಛೇರ್ಮನ್.—ಮಾನ್ಯ ಸದಸ್ಯರಿಗೆ ಸರ್ಕಾರದ ಪರವಾಗಿ ಮಾನ್ಯ ರಘುಪತಿಯವರೇ ಉತ್ತರ ಕೊಡುತ್ತಾರೆ.

ಶ್ರೀ ವಿ. ಧನಂಜಯಕುಮಾರ್.—ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ರಘುಪತಿಯವರ ಬಗ್ಗೆ ಏನೂ ಪ್ರಸ್ತಾಪ ಮಾಡುತ್ತಿಲ್ಲ. ಆದರೆ ಕಾರ್ಮಿಕ ಮಂತ್ರಿಗಳು ಯಾವ ಯಾವ ಹಂತದಲ್ಲಿ ಯಾವ ಯಾವ ಕೆಲಸವನ್ನು ಮಾಡಿದ್ದಾರೆಂದು ನಾನು ಈ ಸಂದರ್ಭದಲ್ಲಿ ಸ್ವಲ್ಪ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇವರು 1972 ನೇ ಇಸವಿಯಲ್ಲಿ ಮಂತ್ರಿಗಳಾಗಿದ್ದಾಗ ಇವರು ಇದೇ ಖಾತೆಯನ್ನು ವಹಿಸಿಕೊಂಡಿದ್ದರು. ಆಗ ಇವರು ರೂಲ್ಸನ್ನೂ ಸಹ ವೈಲೇಟ್ ಮಾಡಿ ಕೆಲವು ಜನರಿಗೆ ಬಡ್ತಿಯನ್ನು ಕೊಟ್ಟಿದ್ದಾರೆ. ಅದೂ ತಮ್ಮ ಜಾತಿಯವರಿಗೆ. ಅದರ ಪರವಾಗಿ ಈಗಾಗಲೇ ಹೈಕೋರ್ಟಿನಲ್ಲಿ ರಿಟ್ ಅಪ್ಲಿಕೇಷನ್ ಫೈಲ್ ಮಾಡಿದ್ದಾರೆ. ಆದ್ದರಿಂದ ನಾನು ಅವರನ್ನು ಸ್ವಜನ ಪಕ್ಷಪಾತಿ ಎಂದು ಕರೆಯಬೇಕಾಗುತ್ತದೆ. ಆ ರೀತಿ ಅವರು ರೂಲ್ಸನ್ನು Violate ಮಾಡಿ ಬಡ್ತಿ ಕೊಡುವಂತಹ ಹಿತಾಸಕ್ತಿಯಾದರೂ ಏನು?

SRI A. LAKSHMISAGAR.—Where there is a wrong, there is a remedy. This is a well-known principle of jurisprudence. Either the wronged party tries to get remedy in the court of law or in any other forum. What the Minister is supposed to have been done or supposed to have been not done is certainly a matter about which he can make comments. My submission is, that he cannot refer to the matter which is pending adjudication before a court of law.

ಡಾ॥ ವಿ. ಎಸ್. ಆಚಾರ್.—ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ ನಾನ್-ಟೆಕ್ನಿಕಲ್ ಪರ್ಸನ್‌ನನ್ನು ಈ ಟೆಕ್ನಿಕಲ್ ಡಿಪಾರ್ಟ್‌ಮೆಂಟಿಗೆ ತೆಗೆದುಕೊಳ್ಳುತ್ತಿದ್ದಾರೆ. ಈ ರೀತಿ ಮಾಡುವುದಕ್ಕೆ ಸರ್ಕಾರಕ್ಕೆ ಏನಾದರೂ ಮಾನ ಮರ್ಯಾದೆ ಇದೆಯೇ?

SRI M. RAGHUPATHY.—That is why I request you not go to its merits. It is before the court.

ಕೋರ್ಟ್ ಮುಂದೆ ಇರುವುದನ್ನು ಹೇಳಬೇಡಿ, ಮಿಕ್ಕಿದ್ದು ಯಾವುದು ಬೇಕಾದರೂ ಹೇಳಿ, ಅದರ ಮೆರಿಟ್ಸ್ ಮತ್ತು ಡಿಮೆರಿಟ್ಸ್ ಬಗ್ಗೆ ಮಾತನಾಡಬೇಡಿ.

ಶ್ರೀ ವಿ. ಧನಂಜಯಕುಮಾರ್.—ಈ ರೀತಿ ಮಂತ್ರಿಗಳಾಗಿದ್ದವರು ತಮ್ಮ ಅಧಿಕಾರ ಸ್ಥಾನದಲ್ಲಿ ಸ್ವಜನ ಪಕ್ಷಪಾತ ಮಾಡಬಹುದೇ ?

ಶ್ರೀ ಮೈಕೇಲ್ ಫರ್ನಾಂಡಿಸ್.—ರಿಟ್ ಪಿಟೀಷನ್ ಏನು ಫೈಲ್ ಮಾಡಿದ್ದಾರೆ ಅದನ್ನು ಕೋರ್ಟ್‌ನಲ್ಲಿ ತೀರ್ಮಾನ ಮಾಡಬೇಕಾಗುತ್ತದೆ. ಕೋರ್ಟ್‌ನಲ್ಲಿ ತೀರ್ಮಾನ ಮಾಡುವ ಮೊದಲು ನಾವು ಈ ಸದನದಲ್ಲಿ ಅದರ ತೀರ್ಮಾನ ಮಾಡುವುದಕ್ಕೆ ಹೇಗೆ ಆಗುತ್ತದೆ? ಇದರ ವಿಷಯವಾಗಿ ಬುದ್ಧಿವಂತಿಕೆ ಬೇಕಾಗಿಲ್ಲ. I think it is a very elementary thing.

ಛೇರ್‌ಮನ್.—ಅವರು ಸ್ವಜನ ಪಕ್ಷಪಾತ ಮಾಡಿದ್ದಾರೆಂದು ಹೇಳಿದ್ದಾರೆ; ಅದನ್ನು ಕೋರ್ಟಿನಲ್ಲಿ ಡಿಸೈಡ್ ಮಾಡುತ್ತಾರೆ. ಅದು ಬಿಟ್ಟು ತಾವು ಬೇರೆ ವಿಚಾರವನ್ನು ಮಾತನಾಡಿ.

ಶ್ರೀ ಎಂ. ರಘುಪತಿ.—ಇದರಲ್ಲಿ ಮಂತ್ರಿಗಳನ್ನು ಪಾರ್ಟಿ ಮಾಡಿದ್ದಾರೆ. ಆದ್ದರಿಂದ ಅಲ್ಲಿ ನಿರ್ಧಾರ ಆಗುತ್ತದೆ. ಅಲ್ಲಿ ಏನು ನಿರ್ಧಾರವಾಗುತ್ತದೆಯೋ ನಾವು ಕಾದು ನೋಡೋಣ.

ಡಾ॥ ವಿ. ಎಸ್. ಆಚಾರ್ಯ.—ಇದು ಒಂದು ಡಿಪಾರ್ಟ್‌ಮೆಂಟನ್ನು ಬೇರೆ ಬೇರೆ ಮಾಡುವ ಪಾಲಿಸಿ ಪ್ರಶ್ನೆ ಬಂದಾಗ ಆ ಪಾಲಿಸಿ ಬಗ್ಗೆ ಯಾವ ದುರುದ್ದೇಶದಿಂದ ಮಾಡುತ್ತಿದ್ದಾರೆ ಎನ್ನುವುದನ್ನು ಹೇಳುವುದಕ್ಕೆ ಈ ಸದನದಲ್ಲಿ ಸದಸ್ಯರಿಗೆ ಹಕ್ಕು ಇದೆ.

ಶ್ರೀ ಮೈಕೇಲ್ ಫರ್ನಾಂಡಿಸ್.—ಈ ವಿಚಾರ ಕೋರ್ಟಿನಲ್ಲಿದೆ. ಇದನ್ನು ತೀರ್ಮಾನ ಮಾಡುವುದಕ್ಕೆ ನಾವು ಜಡ್ಜ್‌ಸ್‌ಗಳಲ್ಲ.

ಡಾ॥ ವಿ. ಎಸ್. ಆಚಾರ್ಯ.—ಅದಕ್ಕೆ ಸಂಬಂಧಪಟ್ಟಂತೆ ಬೇರೆ ಬೇರೆ ವಿಚಾರಗಳನ್ನು ಮಾನ್ಯ ಸದಸ್ಯರು ಹೇಳಬೇಕಾಗುತ್ತದೆ, ಅದು ಸದಸ್ಯರ ಹಕ್ಕು.

ಶ್ರೀ ಎಸ್. ಸೂರ್ಯನಾರಾಯಣರಾವ್.—ಫ್ಯಾಕ್ಟರಿ ಇನ್ಸ್‌ಪೆಕ್ಟೋರೇಟ್ ಒಂದು ಇಂಜಿನಿಯರಿಂಗ್ ಇಲಾಖೆ. ಅದಕ್ಕೆ ಸಂಬಂಧಪಟ್ಟ ವಿಚಾರ ಇಲ್ಲಿ ಪ್ರಸ್ತಾಪ ಮಾಡಿ; ವ್ಯಕ್ತಿಗೆ ಸಂಬಂಧ ಇರುವುದು ಕೋರ್ಟಿನಲ್ಲಿದೆ.

ಶ್ರೀ ವಿ. ಧನಂಜಯಕುಮಾರ್.—ಮಾನ್ಯ ಸದಸ್ಯರಾದಂಥ ಮೈಕೇಲ್ ಫರ್ನಾಂಡಿಸ್‌ರವರಿಗೆ ನಾನು ಈ ವಿಷಯ ಮಾತನಾಡುವಾಗ ಏಕೆ ಇಷ್ಟು ಇಂಟರೆಸ್ಟ್ ಎಂದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಮೈಕೇಲ್ ಫರ್ನಾಂಡಿಸ್.—ಇದು ಸದನದ ಪ್ರಶ್ನೆ, ನಾಳೆ ನಿಮ್ಮ ವಿರುದ್ಧವೂ ಏನಾದರೂ ಕೋರ್ಟ್‌ಗೆ ಹೋದರೆ ಅದಕ್ಕೂ ಈ ರೀತಿಯ ಸನ್ನಿವೇಶ ಅನ್ವಯಿಸುತ್ತದೆ.

ಶ್ರೀ ಬಿ. ಬೈರಪ್ಪಾಜಿ.—ಈ ಸದನದಲ್ಲಿ ಒಬ್ಬ ಸದಸ್ಯರು ಇನ್ನೊಬ್ಬ ಸದಸ್ಯರನ್ನು ಕುರಿತು ಹೀಗೆ ಮಾತನಾಡಿ, ಹಾಗೆ ಮಾತನಾಡಿ ಎಂದು ಹೇಳುವುದಕ್ಕೆ ಅವಕಾಶವಿದೆಯೇ ?

ಛೇರ್‌ಮನ್.—ಬೈರಪ್ಪಾಜಿಯವರೇ ಕೋರ್ಟ್‌ನಲ್ಲಿರತಕ್ಕಂಥ ವಿಚಾರಗಳ ಬಗ್ಗೆ ಈ ಸದನದಲ್ಲಿ ಯಾರೂ ಮಾತನಾಡುವುದು ಬೇಡ.

ಡಾ॥ ಕರ್ಕಿ.—ಕೋರ್ಟ್‌ನಲ್ಲಿರತಕ್ಕಂಥ ವಿಷಯದ ಬಗ್ಗೆ ಚರ್ಚೆ ಬಂದಾಗ ಆ ವಿಷಯ ಬರುತ್ತದೆ. ಈಗ ಅವರು ಫ್ಯಾಕ್ಟ್ಸ್ ಹೇಳುತ್ತಿದ್ದಾರೆ.

ಛೇರ್‌ಮನ್.—ಅವರು ಆ ನೀತಿಯ ಬಗ್ಗೆ ಮಾತನಾಡುತ್ತಿದ್ದಾರೆ.

ಶ್ರೀ ವಿ. ಧನಂಜಯಕುಮಾರ್.—ಇಷ್ಟೆಲ್ಲಾ ಸುಮಾರು 20 ಕೋಟಿ 60 ಲಕ್ಷದಷ್ಟು ಹಣದ ನಿರ್ವಹಣೆ ಮಾಡುವುದಕ್ಕೆ ಈ ಸದನದ ಮೂಲಕ ಸಂಬಂಧಪಟ್ಟ ಮಂತ್ರಿಯವರಿಗೆ ಕೊಡುತ್ತಿದ್ದಾಗ ಸಹಜವಾಗಿ ಈ ಇಲಾಖೆಯಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಸದನದ ಸದಸ್ಯರಿಗೆ ಹಕ್ಕು ಇಲ್ಲವೇ? ಅದನ್ನು ಪ್ರಶ್ನೆ ಮಾಡುವ ಹಕ್ಕು ಇಲ್ಲವೆಂದರೆ ಕರ್ನಾಟಕ ರಾಜ್ಯದ ಜನತೆಯನ್ನು ಇನ್ನೂ ನಾವು ಗಾಢಾಂಧ ಕಾರದಲ್ಲಿ ಇಟ್ಟಹಾಗಾಗುತ್ತದೆ. ನಾವು ಸರ್ಕಾರದ ಆಡಳಿತ ಯಾವ ರೀತಿ ನಡೆಯುತ್ತಿದೆ, ಮಂತ್ರಿಯವರು ಯಾವ ರೀತಿ ನಡೆಯುತ್ತಿದ್ದಾರೆ ಎಂಬುದನ್ನು ತಿಳಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ.

ಸ್ವಾಮಿ, ಇನ್ನೂ ಒಬ್ಬ ಅಧಿಕಾರಿ ಈ ಡಿಪಾರ್ಟ್‌ಮೆಂಟ್‌ನಲ್ಲಿ, ಸೀನಿಯರ್ ಇನ್ಸ್‌ಪೆಕ್ಟರ್ ಆಫ್ ಬಾಯ್ಲರ್ ಆಗಿ ಇರುವವರು ಈ ದಿವಸ ಸೀನಿಯರ್ ಇನ್ಸ್‌ಪೆಕ್ಟರ್ ಆಫ್ ಫ್ಯಾಕ್ಟರೀಸ್ ಆಗಿ ಕೆಲಸ ಮಾಡುತ್ತಿದ್ದಾರೆ. ಈ ಅಧಿಕಾರಿಯ ಹೆಸರು ಆರ್. ರಾಮ್‌ದಾಸ್, ಅವರು 3–4 ಸಲ ಅನೇಕ ಆರೋಪಗಳಿಗೆ ಗುರಿಯಾಗಿ ಅವರ ವಿರುದ್ಧ ತನಿಖೆಗಳನ್ನು ನಡೆಸಿ ಅವರಿಗೆ ಶಿಕ್ಷೆಯನ್ನು ಕೊಟ್ಟಂತಹ ಸಂದರ್ಭಗಳಿವೆ. ಅದನ್ನು ನಾನು ಪ್ರತ್ಯೇಕವಾಗಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇಂತಹ ವ್ಯಕ್ತಿಯು ಮೇಲೆ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಅವರ ಡಿಪಾರ್ಟ್‌ಮೆಂಟ್ ಕೊಟ್ಟಂತಹ ತೀರ್ಪಿನ ವಿರುದ್ಧ ರಿಟ್ ಪಿಟೀಷನ್

ಹಾಕಿದಂಥ ಸಂದರ್ಭದಲ್ಲಿ ಉಚ್ಚ ನ್ಯಾಯಾಲಯದಿಂದ ಆಜ್ಞೆ ಬಂದಿದೆ. 1972 ನೇ ಇಸವಿಯಲ್ಲಿ ಸನ್ಮಾನ್ಯ ಅಜೀಜ್ ಸೇಠ್‌ರವರು ಈ ಖಾತೆಯ ಮಂತ್ರಿಯಾಗಿದ್ದರು. ರಾಜ್ಯದ ಉಚ್ಚ ನ್ಯಾಯಾಲಯದ ತೀರ್ಪಿನ ಮೇಲೆ ಅವರು ರಾಷ್ಟ್ರದ ಸುಪ್ರೀಂ ಕೋರ್ಟ್‌ನಲ್ಲಿ ಅಪೀಲ್ ಹಾಕಿಕೊಂಡಿದ್ದಾರೆ. ಆ ಅಪೀಲ್ ಸತತವಾಗಿ 10 ವರ್ಷಗಳ ವರೆಗೆ ನಡೆಯುತ್ತಿತ್ತು. ಆಮೇಲೆ ಅಧಿಕಾರಕ್ಕೆ ಬಂದ ಪ್ರತಿಯೊಂದು ಸರ್ಕಾರದಲ್ಲೂ ಈ ಅಧಿಕಾರಿ ಅಪೀಲನ್ನು ಹಿಂದಕ್ಕೆ ತೆಗೆದುಕೊಳ್ಳಿ ಎಂದು ಕೇಳಿಕೊಳ್ಳುತ್ತಿದ್ದರು. ಆದರೆ ಅವರೆಲ್ಲರೂ ಕೋರ್ಟ್ ತೀರ್ಮಾನ ಮಾಡಲಿ ಎಂದು ಸುಮ್ಮನೆ ಇದ್ದರು. ತಿರುಗಿ ಪುನಃ ಏನಾಗಿದೆಯೆಂದರೆ ಈ ಹೊಸ ಸರ್ಕಾರ ಬಂದ ಮೇಲೆ ಮಾನ್ಯ ಅಜೀಜ್ ಸೇಠರು ಕಾರ್ಮಿಕ ಮಂತ್ರಿಗಳಾದ ನಂತರ ಏಕಾಏಕಿ 10 ವರ್ಷದಿಂದ ಸುಪ್ರೀಂ ಕೋರ್ಟ್‌ನಲ್ಲಿ ಇದ್ದಂಥ ಅಪೀಲನ್ನು ವಾಪಸ್ ಪಡೆದುಕೊಂಡರು. ಏಕೆ ಈ ರೀತಿ ಮಾಡಿದರು ? ಅದರಲ್ಲಿ ಯಾವುದೋ ಒಂದು ಒಳಸಂಚು ನಡೆದಿದೆ ಎಂದು ನಾನು ಹೇಳಬೇಕಾಗುತ್ತದೆ. ಇಂಥ ದೊಡ್ಡ ಆರೋಪವನ್ನು ಮಾಡುವಾಗ ಮಾನ್ಯ ಅಜೀಜ್ ಸೇಠರು ಇಲ್ಲಿಲ್ಲ. ಇವೊತ್ತಿನ ದಿವಸ ರಾಜ್ಯದ ಜನತೆ ಇವನ್ನೆಲ್ಲಾ ತಿಳಿದುಕೊಳ್ಳಬೇಕಾಗಿದೆ. ಈ 20 ಕೋಟಿ 60 ಲಕ್ಷ ರೂಪಾಯಿಗಳ ಹಣದ ಡಿಮ್ಯಾಂಡ್ ಇಂಥವರ ಕೈಯಲ್ಲಿ ಕೊಟ್ಟರೆ ಜನತೆಗೆ ನ್ಯಾಯ ಸಿಗಬಹುದೇ ಸ್ವಾಮಿ ? ಆದ್ದರಿಂದ ನಾನು ಸ್ಪಷ್ಟವಾಗಿ ಇವತ್ತು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಈ ಎಲ್ಲಾ ವ್ಯಹಹಾರಗಳಿಗೆ ಸಂಬಂಧಪಟ್ಟಹಾಗೆ ಇರುವಂಥ ಫೈಲ್‌ಗಳನ್ನು ತಾವು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕು. ಕೊನೆಯಪಕ್ಷ ಈ ಸದನದ ಒಂದು ಸಮಿತಿಯನ್ನಾದರೂ ನೇಮಿಸಬೇಕು. ಈ ಸಮಿತಿಯಲ್ಲಿ ಒಂದು ಕೂಲಂಕುಷವಾದಂಥ ತನಿಖೆಯಾಗಬೇಕು. ಅದು ಆಗುವವರೆಗೆ ಸನ್ಮಾನ್ಯ ಸಚಿವರಾದ ಶ್ರೀ ಅಜೀಜ್ ಸೇಠ್‌ರವರು ಪದವಿಯಿಂದ ಕೆಳಗೆ ಇಳಿಯಬೇಕು. ಇಂತಹ ಮಂತ್ರಿಯವರು ಅಧಿಕಾರ ಸ್ಥಾನದಲ್ಲಿದ್ದು ಕಾರ್ಮಿಕರ ಕಲ್ಯಾಣದ ಬಗ್ಗೆ ಚಿಂತನೆಯೇ ಇಲ್ಲ, ಸ್ವಜನ ಪಕ್ಷಪಾತ ಮಾಡಿ ಭ್ರಷ್ಟಾಚಾರದ ಆರೋಪವಿದ್ದರೂ ಇಂತಹ ಅಧಿಕಾರಿಗಳ ರಕ್ಷಣೆ ಮಾಡುವುದಾದರೆ ಇವೊತ್ತಿನ ದಿವಸ ಜನತೆ ಕಣ್ಣು ಮುಚ್ಚಿ ಕುಳಿತುಕೊಳ್ಳುವ ಸ್ಥಿತಿಯಲ್ಲಿಲ್ಲ. ಇದರಿಂದ ಕಾರ್ಮಿಕರು ದಂಗೆ ಏಳುವಂತಹ ಪರಿಸ್ಥಿತಿ ಬರುತ್ತದೆ. ಈ ಡಿಪಾರ್ಟ್‌ಮೆಂಟ್‌ನಲ್ಲಿ ಇವೊತ್ತಿನ ದಿವಸ ಯಾವುದೇ ಮೋರಲ್ ರೈಟ್ಸ್ ಉಳಿದಿಲ್ಲ. ಕಾರ್ಮಿಕರಿಗೆ ದೊರೆಯಬೇಕಾದ ಸೌಲಭ್ಯಗಳನ್ನು ಮತ್ತು ಅವರ ಹಕ್ಕುಗಳನ್ನು ರಕ್ಷಣೆ ಮಾಡುವುದರಲ್ಲಿ ಈ ಡಿಪಾರ್ಟ್‌ಮೆಂಟ್‌ನ ಅಧಿಕಾರಿಗಳು ಕರ್ತವ್ಯದಲ್ಲಿ ವಿಫಲರಾಗಿದ್ದಾರೆ. ಆದುದರಿಂದ ಈಗ ದಯವಿಟ್ಟು ಈ ಮೂರು ಫೈಲುಗಳನ್ನು ಅಂದರೆ, (1) ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್ ಡಿಪಾರ್ಟ್‌ಮೆಂಟನ್ನು ಬೈಫರ್ಕೇಟ್ ಮಾಡತಕ್ಕ ಫೈಲ್. (2) ಅಧಿಕಾರಿ ಶ್ರೀ ರಾಮದಾಸ್ ಅವರಿಗೆ ಸಂಬಂಧಪಟ್ಟ ಫೈಲ್, (3) ಅಧಿಕಾರಿಣಿ ಶ್ರೀಮತಿ ರಜಿಯಾ ಯುಸುಫ್ ಅವರನ್ನು ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್ ಡಿಪಾರ್ಟ್‌ಮೆಂಟ್‌ಗೆ ಕರೆದುಕೊಂಡು ಬರುವುದಕ್ಕೆ ವ್ಯವಸ್ಥೆ ಮಾಡಿರುವ ಫೈಲ್. ಈ ಮೂರು ಫೈಲುಗಳನ್ನು ತರಿಸಿಕೊಂಡು ತಮ್ಮ ಕಸ್ಟಡಿಗೆ ತೆಗೆದುಕೊಳ್ಳಬೇಕು ಮತ್ತು ತಕ್ಷಣ ಸಂಬಂಧಪಟ್ಟ ಮಂತ್ರಿಯವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಈ ರೀತಿಯಲ್ಲಿ ದುರ್ವ್ಯವಹಾರ ನಡೆಯುತ್ತಿದ್ದರೂ ಕೂಡ ಇವತ್ತು ಸನ್ಮಾನ್ಯ ಶ್ರೀ ಫರ್ನಾಂಡಿಸರು ಈ ವಿಚಾರ ಕೋರ್ಟ್‌ನಲ್ಲಿದೆ ಎಂದೂ ಅದನ್ನು ಪ್ರಸ್ತಾಪ ಮಾಡಬೇಡಿರೆಂದೂ ಹೇಳಿದರು. ಬಹುಶಃ ಅವರಿಗೂ ಸಹ ಈ ವಿಚಾರ ತಿಳಿದಿರಲಿಕ್ಕಿಲ್ಲವೆಂದು ನಾನು ಭಾವಿಸುತ್ತೇನೆ. ಇವೊತ್ತು ಅಧಿಕಾರದಲ್ಲಿರುವವರು ಏನೇನು ಮಾಡುತ್ತಿದ್ದಾರೆ. ಜನತೆಯ ಕಲ್ಯಾಣಕ್ಕೆ ಅಥವಾ ಕಾರ್ಮಿಕರ ಕಲ್ಯಾಣಕ್ಕೆ ಕೆಲಸ ಮಾಡುತ್ತಿದ್ದಾರೆಯೇ ಅಥವಾ ಕಾರ್ಮಿಕರ ಕಲ್ಯಾಣಕ್ಕಾಗಿ ಚಿಂತನೆ ಮಾಡುತ್ತಿದ್ದಾರೆಯೇ ಎಂದು ಇವೊತ್ತು ರಾಜ್ಯದ ಜನತೆ ಪ್ರಶ್ನೆ ಮಾಡುತ್ತಿದ್ದಾರೆ. ಒಂದು ಕಡೆ ಮಾನ್ಯ ಮಂತ್ರಿಯವರಾದ ಅಜೀಜ್ ಸೇಠ್‌ರವರು ಹೇಳುವುದೇನೆಂದರೆ ಜನತಾ ಸರ್ಕಾರಕ್ಕೆ ನಾನು ಮುಖ್ಯ, ನನಗೆ ಜನತಾ ಸರ್ಕಾರ ಮುಖ್ಯವಲ್ಲ ಎಂದು.

ಛೇರ್‌ಮನ್.—ಆಮೇಲೆ ಇಲ್ಲವೆಂದು ಹೇಳಿದ್ದಾರೆ.

ಶ್ರೀ ವಿ. ಧನಂಜಯಕುಮಾರ್.—ರಾಜಕೀಯದಲ್ಲಿ ಇದು ಸಾಮಾನ್ಯ. ಹೇಳಿಕೆಯನ್ನು ಕೊಡುವಾಗ ಇದನ್ನು ಮಾಡಲಿಕ್ಕೆ ಸಾಧ್ಯ ಇದೆಯೇ, ಇಲ್ಲವೇ ಎಂದು ಯೋಚನೆ ಮಾಡದೆ ಹೇಳಿಕೆ ಕೊಟ್ಟು ಆಮೇಲೆ ಕೊಟ್ಟಿಲ್ಲವೆಂದು ಹೇಳುವಂಥದ್ದು, ನಾವು ಈ ಸಭೆಗೆ ಹೊಸಬರಿರಬಹುದು, ಆದರೆ ಇದನ್ನು ಚೆನ್ನಾಗಿ ತಿಳಿದುಕೊಂಡಿದ್ದೇವೆ. ಇದರ ಬಗ್ಗೆ ಸಾಕಷ್ಟು ಮುಂಚಿತವಾಗಿಯೇ ಪ್ರಸ್ತಾಪ ಮಾಡುತ್ತೇನೆ. ಸಾಕಷ್ಟು ಮುಂಚಿತವಾಗಿ ನಮ್ಮ ಪಕ್ಷದ ಪತಿಯಿಂದ, ಪ್ರತಿಯೊಬ್ಬ ಶಾಸಕರೂ ಸಹಿ ಮಾಡಿದ ಮನವಿಯನ್ನು ಮಾನ್ಯ ಮುಖ್ಯ ಮಂತ್ರಿಯವರಿಗೆ ಕೂಡ ಅರ್ಪಿಸಿದ್ದೆವು. ಆದರೆ, ಕೆಲಸ ಏನು ಆಯಿತು ? ಮಾನ್ಯ ಮಂತ್ರಿಗಳು ಕೂಡ ಒಪ್ಪಿಕೊಂಡ ಹಾಗೆ ವರ್ತಿಸುತ್ತಿದ್ದರು. ಹೀಗಾದರೆ ಈ ಸರ್ಕಾರ ಮತ್ತೆ ಜನರ ವಿಶ್ವಾಸ ಕಳೆದುಕೊಳ್ಳಲಿಕ್ಕೆ ದಿನಗಳು ದೂರವಿಲ್ಲವೆಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಒಬ್ಬ ಮಂತ್ರಿಗಳು ಇದೇ ರೀತಿಯಲ್ಲಿ ಮುಂದುವರೆದುಕೊಂಡು ಹೋದರೆ ಅದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಮತ್ತು ಸಂಬಂಧಪಟ್ಟ ಮಂತ್ರಿಗೆ ಇಂಥ ಒಂದು ಕೆಲಸದಿಂದ ಅರೆನಿಮಿಷ ಕೂಡ ಅಧಿಕಾರದಲ್ಲಿ ಮುಂದುವರೆಯಲು ಯಾವ ನೈತಿಕ ಹಕ್ಕು ಕೂಡ ಇಲ್ಲವೆಂದು ಇಲ್ಲಿ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಸನ್ಮಾನ್ಯ ಮಂತ್ರಿಗಳು ಕೂಡ ಈ ಸಂದರ್ಭದಲ್ಲಿ ಇಲ್ಲಿ ಇಲ್ಲ. ಸನ್ಮಾನ್ಯ ರಘುಪತಿಯವರು ಉತ್ತರ ಕೊಡಬಹುದು. ನಾನು ಕೇಳಿದಂತಹ ಮೂರು ಫೈಲು

ಗಳನ್ನು ದಯಮಾಡಿ ಈ ಸದನದ ಮುಂದೆ ತರಿಸಿಕೊಡುತ್ತೇನೆ ಎಂಬ ಭರವಸೆಯನ್ನು ಅವರು ಕೊಡಬೇಕ. ಮಂತ್ರಿಗಳು ಬರಬಹುದು, ಮಂತ್ರಿಗಳು ಹೋಗಬಹುದು. ಆದರೆ ಇಲಾಖೆಯ ಕೆಲಸ ಕಾರ್ಯಗಳು ಮುಂದುವರೆಯಬೇಕು. ಕಾರ್ಮಿಕರ ಕಲ್ಯಾಣ ಆಗಬೇಕು. ಅದಕ್ಕಾಗಿ ನಾನು ಈ ಬೇಡಿಕೆಯನ್ನು ಅನುಮೋದಿಸುತ್ತಿದ್ದೇನೆ.

ಛೇರ್ಮನ್.—ನೀವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ 20 ನಿಮಿಷ ಆಯಿತು.

ಶ್ರೀ ವಿ. ಧನಂಜಯಕುಮಾರ್.—ಆಯಿತು. ಬೇಗನೆ ಮುಗಿಸುತ್ತೇನೆ. ರಸ್ತೆ ಸಾರಿಗೆ ಬಗ್ಗೆ ಅಷ್ಟೇ ನಾನು ಮಾತನಾಡಬೇಕಾಗಿದೆ.

ಒಬ್ಬರು ಮಾನ್ಯ ಸದಸ್ಯರು.—ಬಿ.ಜೆ.ಪಿ. ಪರವಾಗಿ ಅವರೇ ಮಾತನಾಡುತ್ತಾರೆ ಬಿಡಿ.

ಶ್ರೀ ವಿ. ಧನಂಜಯಕುಮಾರ್.—ರಸ್ತೆ ಸಾರಿಗೆ ವಿಚಾರದಲ್ಲಿ ಕೂಡ ನಾನು ಪ್ರಸ್ತಾಪ ಮಾಡಬೇಕಾಗಿದೆ. ಇವತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ, ಈ ಇಲಾಖೆಗೆ ಒಬ್ಬ ಒಳ್ಳೆಯ ಮಂತ್ರಿಯನ್ನು ನೀವು ಕೊಟ್ಟಿದ್ದೀರಿ ಎಂದು ನಾನು ಭಾವಿಸಿಕೊಂಡಿದ್ದೇನೆ. ಕಳೆದ ಎಂಟು ತಿಂಗಳ ಅಧಿಕಾರಾವಧಿಯಲ್ಲಿ ಅವರು ಮಾಡುತ್ತಿರುವಂತಹ ಕೆಲಸಗಳ ಬಗ್ಗೆ ನಾನು ನಿಜವಾಗಿಯೂ ಶ್ಲಾಘನೆಯನ್ನು ವ್ಯಕ್ತ ಮಾಡುತ್ತಿದ್ದೇನೆ. ಅವರಿಗೆ ಅಭಿನಂದನೆಗಳನ್ನು ಕೂಡ ಸಲ್ಲಿಸುತ್ತಿದ್ದೇನೆ. ಆದರೆ, ತಮ್ಮ ಇಲಾಖೆಯಲ್ಲಿ ಸತತವಾಗಿ ಕೇಳಿಬರುವುದೇನೆಂದರೆ ಯಾವಾಗ ನೋಡಿದರೂ ಈ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನಷ್ಟದಲ್ಲೇ ಇರುತ್ತಿರುವುದು. ಮಾನ್ಯ ಮಿತ್ರರೊಬ್ಬರು ಭಾಷಣ ಮಾಡುವಾಗ ಮಾತೊಂದು ನನಗೆ ಜ್ಞಾಪಕ ಬಂತು. ತಾವು ಅವರು ನಿಧಾನವಾಗಿ ಮಾತನಾಡುತ್ತಿದ್ದಾರೆ ಎಂದು ಹೇಳಿದಾಗ ನನಗೆ ಆ ಮಾತು ಜ್ಞಾಪಕವಾಯಿತು. ಯಾವ ರೀತಿಯಲ್ಲಿ ನಮ್ಮ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನಿಧಾನವಾಗಿ ಹೋಗುತ್ತಿದೆಯೋ, ಅದೇ ರೀತಿಯಾಗಿ ಅವರ ಭಾಷಣ ಸಾಗಿದೆ ಎಂದು ನೆನಪಾಯಿತು. ಏಕೆ ಈ ಮಾತನ್ನು ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ 20 ವರ್ಷಗಳಿಂದ ಸತತವಾಗಿ ನಡೆದುಕೊಂಡು ಬಂದಿರುವ ಈ ಸಂಸ್ಥೆ ಅಗಾಧವಾಗಿ ಬೆಳೆದಿರುವುದು ಸಹಜವಾಗಿದೆ. ಅನೇಕ ಬಸ್ಸುಗಳನ್ನು ಈ ಸಂಸ್ಥೆ ಪಡೆದುಕೊಂಡಿದೆ. ರಾಜ್ಯದ ಮೂಲೆ ಮೂಲೆಗಳಿಗೆ, ಎಲ್ಲಾ ಹಳ್ಳಿಗಳಿಗೂ ಕೂಡ ಸಂಪರ್ಕ ವ್ಯವಸ್ಥೆಯನ್ನು ಮಾಡುವ ಸಾಮರ್ಥ್ಯವನ್ನು ಈ ಸಂಸ್ಥೆ ಪಡೆದುಕೊಂಡಿದೆ. ಆದರೆ ಸಮಾಜವಾದದಲ್ಲಿ ನಂಬಿಕೆ ಇಟ್ಟುಕೊಂಡು ಈ ರಸ್ತೆ ಸಾರಿಗೆ ಸಂಸ್ಥೆ ಕೆಲಸ ಮಾಡುವಂತಹ ಸಂದರ್ಭದಲ್ಲಿ ಜನತೆ ಅಪೇಕ್ಷೆ ಮಾಡಿದ ರೀತಿಯಲ್ಲಿ ಅಗತ್ಯವಾದ ಸೌಕರ್ಯಗಳನ್ನು ಒದಗಿಸಿಕೊಡಬೇಕು. ಈ ಸಂಸ್ಥೆ ನಷ್ಟದಲ್ಲಿಯೇ ಉಳಿಯಬಾರದು. ಒಂದು ಕಿಲೋಮೀಟರ್ ಪ್ರಯಾಣಕ್ಕೆ 65 ಪೈಸೆ, 70 ಪೈಸೆ ತೆಗೆದುಕೊಂಡರೂ ಇಲ್ಲಿ ನಷ್ಟ ಬರುತ್ತಿರುವಾಗ, ತಿರುಗಿ ಬೇರೆ ಟ್ಯಾಕ್ಸ್ ಹಣ ಕೊಡಬೇಕೆನ್ನುವುದಾದರೆ, ಬಹುಶಃ ಈ ರಸ್ತೆ ಸಾರಿಗೆ ಸಂಸ್ಥೆ ಜನರಿಗೆ ಸೌಕರ್ಯಗಳನ್ನು ಒದಗಿಸಲಿಕ್ಕೆ ವಿಫಲವಾಗಿದೆಯೆಂದು ನಾನು ಹೇಳಬೇಕಾಗುತ್ತದೆ. ಇವತ್ತು ಪ್ರತಿಯೊಬ್ಬರೂ ಈ ವಿಚಾರವನ್ನು ಪ್ರಸ್ತಾಪ ಮಾಡುವಾಗ ಸನ್ಮಾನ್ಯ ಮಂತ್ರಿಯವರು ತಮ್ಮ ವಿಭಾಗದ ಶಾಸಕರಿಗೆ ಸಂಬಂಧಪಟ್ಟ ಹಾಗೆ ಒಂದು ಸಭೆಯನ್ನು ಕರೆದಿದ್ದರು. "ನೀವೆಲ್ಲರೂ ಸಂಸ್ಥೆ ನಷ್ಟ ಹೊಂದಿದೆ ಎನ್ನುವ ಮಾತನ್ನೇ ಹೇಳುತ್ತಿದ್ದೀರಿ; ಆದರೆ ಲಾಭ ಬರುವ ರೀತಿಯಲ್ಲಿ ಪರಿವರ್ತನೆ ಮಾಡಲಿಕ್ಕೆ ನಿಮ್ಮ ಸಲಹೆ ಕೊಡಿ" ಎಂದು ಕೇಳಿದ್ದರು. ಇವತ್ತು ತಮ್ಮ ಸಂಸ್ಥೆಯ ಕಾರ್ಯ ನಿರ್ವಹಣೆ ಮಾಡುತ್ತಿರುವಂತಹ ಅಧಿಕಾರಿ ವರ್ಗದವರ ಕಾರ್ಯವೈಖರಿಯಿಂದಾಗಿ ಇದು ನಷ್ಟ ಅನುಭವಿಸುತ್ತಿದೆ ಎಂದು ಸ್ಪಷ್ಟವಾದ ಮಾತನ್ನು ನಾನು ಹೇಳಬೇಕಾಗಿದೆ. ಸ್ವಾಮಿ, ತಮ್ಮ ಸಂಸ್ಥೆಯಲ್ಲಿರುವಂತಹ ಅಧಿಕಾರಿಗಳು ಯಾರ್ಯಾರು? ಇವತ್ತು ಎರಡು ಜನ ಐ.ಎ.ಎಸ್. ಅಧಿಕಾರಿಗಳನ್ನು ಈ ಸಂಸ್ಥೆಯಲ್ಲಿ ತಾವು ಇಟ್ಟುಕೊಂಡಿದ್ದೀರಿ. ಪೋಲೀಸ್ ಇಲಾಖೆಯಲ್ಲಿ ಸಾಕಷ್ಟು ಪರಿಣತಿಯನ್ನು ಹೊಂದಿ ಚತುರರಾಗಿರುವಂತಹ ಇಬ್ಬರು ಪೋಲೀಸ್ ಅಧಿಕಾರಿಗಳನ್ನು ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಇಟ್ಟುಕೊಂಡಿದ್ದೀರಿ. ಇದರ ಬಗ್ಗೆ ತಮ್ಮ ಸ್ಪಷ್ಟೀಕರಣ ನಮಗೆ ಬೇಕಾಗಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಸೋರಿಹೋಗುವ ಹಣ ಉಳಿತಾಯ ಆಗಲಿಕ್ಕೆ ಈ ವ್ಯವಸ್ಥೆ ಆಗಿದೆಯೇ? ಇದರ ಬಗ್ಗೆ ತಾವು ಗಮನ ಹರಿಸಬೇಕು. ಬೆಲೆ ಏರಿಕೆಗೆ ಕಾರಣ, ಟೈರುಗಳ ಬೆಲೆ ಜಾಸ್ತಿಯಾಗಿರುವುದು ಮುಂತಾದ ಬೇರೆ ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ಮೇಂಟೆನೆನ್ಸ್ ಚಾರ್ಜಸ್ ಮ್ಯಾನೇಜ್ ಮಾಡುವಾಗ ಇವತ್ತು ನಷ್ಟವಾಗಿದೆ ಎಂದು ಹೇಳಬಹುದು. ಕಳೆದ ತಿಂಗಳು ಇದೇ ಸದನದ ಮೂಲಕವೇ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಕಳ್ಳ ಟಿಕೇಟ್ ಚಲಾವಣೆ ಇದೆ ಎಂದು ಪ್ರಸ್ತಾಪ ಆಗಿದೆ. ಗುಲ್ಬರ್ಗ ಡಿವಿಜನ್‌ನಲ್ಲಿ ನಾನಾರಾವ್ ಭೀಮರಾವ್ ಕುಲಕರ್ಣಿ ಈ ಹೆಸರಿನ ಕಂಡಕ್ಟರ್ ಒಂದು ಪ್ರೆಸ್ಸನ್ನು ನಡೆಸುತ್ತಿದ್ದನು. ಕಳ್ಳ ಟಿಕೇಟುಗಳನ್ನು ಪ್ರಿಂಟ್ ಮಾಡಿ ಚಲಾವಣೆ ಮಾಡಿರತಕ್ಕ ಅವನನ್ನು ಹಿಡಿಯಲು ರಾಜ್ಯ ಪೋಲೀಸರಿಗೆ ಸಾಧ್ಯವಾಗಲಿಲ್ಲ. ಅವನನ್ನು ಹಿಡಿದವರು ಬೊಂಬಾಯಿ ಪೋಲೀಸರು. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಇರತಕ್ಕಂತಹ ಇಬ್ಬರು ಹಿರಿಯ ಪೋಲೀಸ್ ಅಧಿಕಾರಿಗಳಿಂದ ಅವನನ್ನು ಹಿಡಿಯುವಂತಹ ಸಂದರ್ಭ ಒದಗಲಿಲ್ಲ. ಬೊಂಬಾಯಿ ಪೋಲೀಸರು ಆತನನ್ನು ದಸ್ತಗಿರಿ ಮಾಡಿದರು. ಆಮೇಲೆ ಆತನ ಮೇಲೆ ಏನು ಕ್ರಮ ಜರುಗಿಸಿದಿರಿ? ಆತನಿಂದ ರಾಜೀನಾಮೆ ಬರೆಸಿಕೊಂಡು ಆತನು ಕೆಲಸದಿಂದ ಬಿಟ್ಟುಹೋಗುವಂತೆ ಮಾಡಿದರು. ಈ ರೀತಿಯಲ್ಲಿ ಇವತ್ತು ಕಳ್ಳ ಟಿಕೇಟ್ ಚಲಾವಣೆಯಿಂದ ಎಷ್ಟು ನಷ್ಟವಾಗಿದೆ, ಇದರ ಬಗ್ಗೆ ಅಂದಾಜು ಮಾಡಿದ್ದೀರಾ? ಇದರ ಬಗೆ

ಸ್ಪಷ್ಟವಾದ ಒಂದು ಚಿತ್ರವನ್ನು ತಾವು ಇವತ್ತು ಸಭೆಯ ಮುಂದೆ ಇಡಬೇಕಾಗಿದೆ. ಎರಡನೆಯದಾಗಿ, ಬೆಂಗಳೂರಿನ ಬಿ.ಟಿ.ಎಸ್.ನಲ್ಲಿರತಕ್ಕಂತಹ ಒಬ್ಬ ಕ್ಲರ್ಕ್ ಕಳೆದ ವರ್ಷದಲ್ಲಿ ಸ್ಕೂಲ್ ವಿದ್ಯಾರ್ಥಿಗಳಿಗೆ ರಿಯಾಯ್ತಿ ಬಸ್ ಪಾಸುಗಳನ್ನು ಫೋರ್ಜರಿಯಾಗಿ ಮಾಡಿ, ಮಾರಾಟ ಮಾಡಿ, ಲಕ್ಷಾಂತರ ರೂಪಾಯಿಗಳನ್ನು ನಷ್ಟಗೊಳಿಸಿದ ಪ್ರಕರಣ ತಮ್ಮ ಗಮನಕ್ಕೆ ಬಂದಿರಬಹುದು. ಆದರೆ ಆತ ಕೇರಳ ರಾಜ್ಯಕ್ಕೆ ಓಡಿಹೋದ ಕಾರಣ ಆತನ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ ಎಂದು ಹೇಳಿದರು. ಈ ರೀತಿಯಾಗುತ್ತಿರುವುವನ್ನು ನೋಡುತ್ತಿದ್ದೇವೆ. ಬೆಂಗಳೂರು ಬಿ.ಟಿ.ಎಸ್. ಬಸ್ಸುಗಳಲ್ಲಿ ಪ್ರಯಾಣ ಮಾಡುವಾಗ ನಿಂತುಕೊಳ್ಳುವುದಕ್ಕೆ ಜಾಗ ಇರುವುದಿಲ್ಲ: ಉಸಿರಾಡುವುದಕ್ಕೂ ಕೂಡ ಕಷ್ಟವಾಗುತ್ತದೆ. ಸಮಯಕ್ಕೆ ಸರಿಯಾಗಿ ಒಂದು ಕಡೆಗ ಹೋಗಿ ಮುಟ್ಟಲು ಸಾಧ್ಯವಿಲ್ಲ. ಇಷ್ಟು ಒಳ್ಳೆಯ ರೀತಿಯಲ್ಲಿ ಕಲೆಕ್ಷನ್ ಆಗುತ್ತಿದ್ದರೂ ಕೂಡ ಏಕೆ ಈ ಸಂಸ್ಥೆ ನಷ್ಟದಲ್ಲಿ ನಡೆಯುತ್ತಿದೆ? ಇದರ ಬಗ್ಗೆ ತಾವು ಗಮನ ಹರಿಸಬೇಕು.

ಇನ್ನು, ಪ್ರಮುಖವಾಗಿರತಕ್ಕಂಥಾದ್ದು ಮೇಂಟೆನೆನ್ಸ್ ಕಾಸ್ಟ್ ಜಾಸ್ತಿಯಾಗಿದೆ ಎಂದು ಹೇಳಿದ್ದೀರಿ. ಬಿಡಿ ಭಾಗಗಳ ಬೆಲೆ ವಿಪರೀತವಾಗಿ ಜಾಸ್ತಿಯಾಗಿದೆ, ಅದಕ್ಕಾಗಿ ಸಂಸ್ಥೆ ನಷ್ಟ ಅನುಭವಿಸುತ್ತಿದೆ ಎಂದು ಹೇಳಲಾಗಿದೆ. ತಾವು ಗಮನದಲ್ಲಿಟ್ಟು ಆಲೋಚನೆ ಮಾಡಿದರೆ, ಎಷ್ಟು ಬಿಡಿ ಭಾಗಗಳು ತಮ್ಮ ಇಲಾಖೆಯಿಂದ, ರಸ್ತೆ ಸಾರಿಗೆ ಸಂಸ್ಥೆಯಿಂದ ಕಳ್ಳತನದಿಂದ ಹೊರಗೆ ಸಾಗಿಸಲ್ಪಡುತ್ತವೆ ಎಂದು ಯೋಚನೆ ಮಾಡಿದ್ದೀರಾ? ಉದಾಹರಣೆಗೆ ಹೇಳುವುದಾದರೆ, ವಿದ್ಯುಚ್ಛಕ್ತಿ ಇಲಾಖೆ ಬಗ್ಗೆ ಒಂದು ಮಾತನ್ನು ಹೇಳಬೇಕು. ನಮ್ಮ ಜಿಲ್ಲೆಯಲ್ಲಿ ಮಂಗಳೂರಿನಲ್ಲಿ ಯಾವುದೇ ಸಂದರ್ಭದಲ್ಲಿ ಅಲ್ಲಿಯ ಒಂದು ಮನೆಗೆ ಅಥವಾ ಕೈಗಾರಿಕೆಗೆ ವಿದ್ಯುಚ್ಛಕ್ತಿ ಸಂಪರ್ಕ ಕೊಡಬೇಕೆಂದು ಹೇಳಿದರೆ ಇಲಾಖೆಯಲ್ಲಿ ಪೋಲ್, ವೈಯರ್ ಇಲ್ಲವೆಂದು ಬೇರೆ ಬೇರೆ ಕಾರಣಗಳನ್ನು ಕೊಟ್ಟು ಸರಬರಾಜು ಇಲ್ಲವೆಂದು ಹೇಳುತ್ತಾರೆ. ಆದರೆ ಅದೇ ಸಾಮಗ್ರಿಗಳು ಮುಕ್ತ ಮಾರುಕಟ್ಟೆಯಲ್ಲಿ ಧಾರಾಳವಾಗಿ ದೊರೆಯುತ್ತಿವೆ. ಏಕೆ ಈ ರೀತಿಯಾಗಿದೆ? ಇದರ ಬಗ್ಗೆ ತಾವು ಗಮನ ಕೊಡಬೇಕು. ನಿಮ್ಮ ಸಂಸ್ಥೆಗಾಗಿ ತೆಗೆದುಕೊಂಡಿರತಕ್ಕಂತಹ ಬಿಡಿಭಾಗಗಳು ಏನಿವೆ, ಅವು ಇವತ್ತು ಓಪನ್ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿವೆ. ಇದರ ಬಗ್ಗೆ ತಾವು ಕ್ರಮ ಕೈಗೊಳ್ಳಬೇಕು. ಕನಿಷ್ಠಪಕ್ಷ ಯಾವ ಬಿಡಿಭಾಗಗಳನ್ನು ನೀವು ತರಿಸುತ್ತೀರೋ, ಅವುಗಳ ಮೇಲೆ ನಿಮ್ಮದು ಎಂಬುದಾಗಿ ತೋರಿಸುವುದಕ್ಕೆ ಅಚ್ಚು ಅಥವಾ ಮೊಹರ್ ಹಾಕಿಸುವಂತಹ ಕೆಲಸವನ್ನು ಮಾಡಬೇಕು. ಈ ರೀತಿ ಮಾಡಿದಾಗ ಸೋರಿಹೋಗುವಂತಹ ಹಣವನ್ನು ಉಳಿಸುವುದಕ್ಕೆ ಸಾಧ್ಯವಾಗಬಹುದು. ಈ ಸಂಸ್ಥೆಯನ್ನು ನಷ್ಟದಿಂದ ಮೇಲಕ್ಕೆ ಎತ್ತುವುದಕ್ಕೆ ಸಾಧ್ಯವಾಗಬಹುದೆಂದು ನಾನು ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇವುಗಳನ್ನೆಲ್ಲಾ ತಡೆಹಿಡಿಯುವುದಕ್ಕಾಗಿ ತಮ್ಮ ಇಲಾಖೆಯಲ್ಲಿ ವ್ಯವಸ್ಥೆ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಸೆಕ್ಯೂರಿಟಿ ಮತ್ತು ವಿಜಿಲೆನ್ಸ್ ಇಲಾಖೆ ಏನು ಇದೆ, ಆ ಇಲಾಖೆಯವರು ಏನು ಮಾಡುತ್ತಿದ್ದಾರೆ? ಇದುವರೆವಿಗೆ ಎಷ್ಟು ಜನರನ್ನು ಈ ರೀತಿ ಕಳ್ಳ ವ್ಯವಹಾರದಲ್ಲಿ ತೊಡಗಿರುವವರನ್ನು ಹಿಡಿದು ಅವರ ಮೇಲೆ ಕ್ರಮ ಕೈಗೊಂಡಿದ್ದಾರೆ? ಅವರಿಂದ ಆದಂತಹ ನಷ್ಟವನ್ನು ಪುನಃ ತುಂಬಿಸುವುದಕ್ಕೆ ಏನು ಕ್ರಮ ಕೈಗೊಂಡಿದ್ದೀರಿ ಎಂಬ ಬಗ್ಗೆ ವಿವರವನ್ನು ಸದನಕ್ಕೆ ಕೊಡಬೇಕು. ಐ.ಪಿ.ಎಸ್. ಅಧಿಕಾರಿಗಳನ್ನು ತಮ್ಮ ಇಲಾಖೆಯಲ್ಲಿ ಏನು ನೇಮಕ ಮಾಡಿದ್ದಾರೆ, ಅವರು ಆಸಕ್ತಿ ವಹಿಸಿ ಕೆಲಸ ಮಾಡುತ್ತಿದ್ದಾರೆಯೇ? ಆ ರೀತಿ ಅವರು ಕೆಲಸ ಮಾಡದಿದ್ದರೆ ಪೋಲೀಸ್ ಅಧಿಕಾರಿಗಳನ್ನು ಇಲ್ಲಿಗೆ ಹಾಕುವಂತಹ ಉದ್ದೇಶವಾದರೂ ಏನು ಎಂಬುದನ್ನು ಸ್ಪಷ್ಟವಾಗಿ ಕೇಳಬೇಕಾಗುತ್ತದೆ. ನನಗೆ ತಿಳಿದಮಟ್ಟಿಗೆ ಹೇಳುವುದಾದರೆ ಹಲವಾರು ರಸ್ತೆಗಳನ್ನು ರಾಷ್ಟ್ರೀಕರಣ ಮಾಡಿದ್ದೀರಿ. ನಾವು ಎಲ್ಲಾ ಕಡೆ ನೋಡುತ್ತಿದ್ದೇವೆ. ಬೆಂಗಳೂರು, ಮಂಗಳೂರು, ಉಡುಪಿ, ಮೈಸೂರು, ಹುಬ್ಬಳ್ಳಿ, ಇತರೇ ದೊಡ್ಡ ದೊಡ್ಡ ನಗರಗಳಿಗೆ ರಾತ್ರಿ ಸಂಚಾರ ಮಾಡುವಂತಹ ಸುಖಾಸೀನ ಮಾದರಿಯ ಹೊಸ ಬಸ್ಸುಗಳನ್ನು ಈ ಸಂಸ್ಥೆಯವರು ವ್ಯವಸ್ಥೆ ಮಾಡಿದ್ದಾರೆ. ನನ್ನ ಗಮನಕ್ಕೆ ಬಂದಿರುವ ಹಾಗೆ ಹೇಳುವುದಾದರೆ, ಬೆಂಗಳೂರು–ಮಂಗಳೂರು ಮಧ್ಯೆ ಇರುವಂತಹ ರಸ್ತೆಯನ್ನು ಸಂಪೂರ್ಣವಾಗಿ ರಾಷ್ಟ್ರೀಕರಣ ಮಾಡಿದ್ದೀರಿ. ಇದರಲ್ಲಿ ಖಾಸಗಿ ಬಸ್ಸುಗಳನ್ನು ಓಡಿಸುವುದಕ್ಕೆ ಅವಕಾಶ ಇಲ್ಲ. ಆದರೆ ತಮ್ಮ ಕಣ್ಣು ಮುಂದೆ ನಡೆಯುತ್ತಿರುವ ಹಾಗೆ ದೊಡ್ಡ ದೊಡ್ಡ ಬೋರ್ಡ್‌ಗಳನ್ನು ಹಾಕಿಕೊಂಡು ಪ್ರತಿನಿತ್ಯ ಖಾಸಗಿ ಲಕ್ಷುರಿ ಬಸ್ಸುಗಳು ಬೆಂಗಳೂರು–ಮಂಗಳೂರು ಪ್ರಯಾಣ ಮಾಡುವಂತಹವರಿಗೆ ಬೇಕಾದ ವ್ಯವಸ್ಥೆಯನ್ನು ನಾವು ಮಾಡಿಕೊಡುತ್ತೇವೆಂಬ ಬೋರ್ಡ್‌ಗಳು ನಮ್ಮ ಬಸ್ ಸ್ಟ್ಯಾಂಡಿನ ಸುತ್ತಮುತ್ತಲೂ ಇರುವಂತಹದ್ದನ್ನು ನಾವು ನೋಡಬಹುದು. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ಯೋಚನೆ ಮಾಡಬೇಕು. ರಾಷ್ಟ್ರೀಕರಣ ಮಾಡಿದ ರಸ್ತೆಗಳಲ್ಲಿ ನಮ್ಮ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಪ್ರಯಾಣಿಕರ ಅನುಕೂಲಕ್ಕಾಗಿ ಬಸ್ಸುಗಳನ್ನು ಹಾಕಿದರೂ ಅದರಲ್ಲಿ ಹಣ ಸೋರಿಹೋಗುತ್ತಿದ್ದು, ಖಾಸಗಿ ಸಂಸ್ಥೆಯವರು ಹಣವನ್ನು ಲಪಟಾಯಿಸುತ್ತಿದ್ದಾರೆ. ಇದರ ಬಗ್ಗೆ ತಾವು ಗಮನ ಹರಿಸಬೇಕು. ಆಲ್ ಇಂಡಿಯಾ ಪರ್ಮಿಟ್ ಎಂಬುದಾಗಿ ಬಸ್ಸುಗಳಲ್ಲಿ ಬೋರ್ಡ್‌ಗಳನ್ನು ಹಾಕಿಕೊಂಡು ಟಿಕೆಟ್‌ಗಳನ್ನೂ ಕೂಡ ಕೊಡುತ್ತಿದ್ದಾರೆ. ಬೋರ್ಡ್‌ಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಿದ್ದಾರೆ. ಇದರ ಬಗ್ಗೆ ನಿಮ್ಮ ಇಲಾಖೆಯವರು ಇದನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಯಾವ

ಕ್ರಮ ಇಲ್ಲ ಎಂದು ಹೇಳಿದರೆ ಬಹಳ ಆಶ್ಚರ್ಯದ ಸಂಗತಿಯಾಗುತ್ತದೆ. ಈ ರೀತಿಯಲ್ಲಿ ತಮ್ಮ ಇಲಾಖೆಯಲ್ಲಿರುವ ಅಧಿಕಾರಿಗಳು ನಿರಾಸಕ್ತರಾಗಿ, ಶಕ್ತಿ ಇಲ್ಲದೆ, ಹಣ ಸೋರಿಹೋಗುವುದನ್ನು ತಡೆಗಟ್ಟುವುದಕ್ಕೆ ಯಾವುದೇ ಕ್ರಮವನ್ನು ಕೈಗೊಳ್ಳದಿದ್ದುದಕ್ಕಾಗಿ ನಿಮ್ಮ ಸಾರಿಗೆ ಸಂಸ್ಥೆ ನಷ್ಟದಲ್ಲಿದೆ. ಇಷ್ಟು ಮಾತ್ರ ಅಲ್ಲದೆ ರಾಷ್ಟ್ರೀಕರಣ ಮಾಡಿ ಜನರಿಗೆ ಸೌಕರ್ಯವನ್ನು ಒದಗಿಸಿರುವುದರಿಂದ ಸಂಸ್ಥೆಗೆ ನಷ್ಟವಾಗಿಲ್ಲ ಎಂಬುದನ್ನು ಸ್ಪಷ್ಟವಾಗಿ ತಮ್ಮ ಗಮನಕ್ಕೆ ತರಬಯಸುತ್ತೇನೆ. 1981 ನೇ ಇಸವಿಯಲ್ಲಿ ಆದಂತಹ ಒಂದು ಘಟನೆಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಒಂದು ಲಕ್ಷ ರೂಪಾಯಿಗಳ ಬೆಲೆ ಬಾಳುವ ಟಿಕೆಟ್ ಬಂಡಲ್ ಬೆಂಗಳೂರಿನಿಂದ ಮೈಸೂರಿಗೆ ಕಳುಹಿಸುವಾಗ ನಾಪತ್ತೆಯಾಯಿತು. ಅದಕ್ಕೆ ಸಂಬಂಧಪಟ್ಟ ಕೆ.ಎಸ್.ಆರ್.ಟಿ.ಸಿ. ಯವರಿಗೆ ದೂರು ಕೊಟ್ಟರೂ ಯಾವುದೇ ಕ್ರಮವನ್ನು ತಮ್ಮ ಇಲಾಖೆಯವರು ಕೈಗೊಳ್ಳಲಿಲ್ಲ. ಆ ರೀತಿ ನಾಪತ್ತೆಯಾದ ಟಿಕೆಟ್ ಬಂಡಲ್ ಈ ವರ್ಷ 1983 ರಲ್ಲಿ ಮಂಗಳೂರಿನಲ್ಲಿ ಸಿಕ್ಕಿದೆ. ಇದು ನಮಗೂ ಕೂಡ ಸಂಬಂಧ ಇದೆ ಎಂದರೆ ಬೇರೆ ರೀತಿಯಾಗಿ ಸದಸ್ಯರು ಭಾವಿಸಬಾರದು. ನಮ್ಮ ಭಾಗದಲ್ಲಿ ಸಿಕ್ಕಿದೆ ಎಂಬುದಕ್ಕೆ ನಮಗೂ ಸಂದಂಧ ಇದೆ ಎಂದು ಹೇಳಿದೆ. ನಮಗೆ ಧರ್ಮಾರ್ಥವಾಗಿ ಬಸ್ ಸಂಚಾರ ಮಾಡುವಂತಹ ವ್ಯವಸ್ಥೆಯನ್ನು ಮಾಡಿಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ಕೃತಜ್ಞತೆಗಳು. ಮಂಗಳೂರಿನಲ್ಲಿ ಅದು ಸಿಕ್ಕಿದೆ ಎಂದರೆ ಅದರ ಕಾರ್ಯನಿರ್ವಹಣೆ ಸರಿಯಾಗಿಲ್ಲ ಎಂದು ತಾವು ಭಾವಿಸಬಾರದು. ಇಲ್ಲಿಂದ ಕಳುವಾದುದು ಮಂಗಳೂರಿನಲ್ಲಿ ಸಿಕ್ಕಿದೆ. ಅದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ.

ಶ್ರೀ ಪಂಪಾವತಿ.—ಮಂಗಳೂರಿನಲ್ಲಿರುವವರೆಲ್ಲ ಸತ್ಯಹರಿಶ್ಚಂದ್ರರೇ ಇರುವುದು.

ಶ್ರೀ ವಿ. ಧನಂಜಯಕುಮಾರ್.—ತಾವು ಮಂಗಳೂರಿಗೆ ಬಂದು ನೋಡಿ. ಮಂಗಳೂರು ವಿಭಾಗ 5 ಲಕ್ಷ ರೂಪಾಯಿಗಳ ಲಾಭದಿಂದ ನಡೆಯುತ್ತಿದೆ. ತಮ್ಮ ದಾವಣಗೆರೆಯಲ್ಲಿ ಯಾವ ರೀತಿ ನಡೆಯುತ್ತಿದೆ ಎಂಬುದು ನನಗೆ ಗೊತ್ತಿಲ್ಲ. 50 ಪೈಸೆ ಟಿಕೆಟ್‌ನಲ್ಲಿ 9 ರೂಪಾಯಿಗಳೆಂದು ಮುದ್ರೆ ಹಾಕಿ ಮಾರಾಟ ಮಾಡತಕ್ಕಂತಹದ್ದು ನಡೆಯುತ್ತಿದ್ದಾಗ ಅದನ್ನು ನಿಮ್ಮ ಇಲಾಖೆಯಲ್ಲಿರತಕ್ಕಂತಹ ಸೆಕ್ಯೂರಿಟಿ ವಿಜಿಲೆನ್ಸ್‌ರವರು ಹಿಡಿಯಲಿಲ್ಲ. ನಮ್ಮ ವಿಭಾಗದಲ್ಲಿರತಕ್ಕಂತಹ ಡೆಪ್ಯುಟಿ ಟ್ರಾನ್ಸ್‌ಪೋರ್ಟ್ ಆಫೀಸರ್‌ರವರು ಹಿಡಿದರು. ತಾವು ಇಂತಹದ್ದರ ಬಗ್ಗೆ ಜಾಗ್ರತೆ ವಹಿಸಬೇಕಾಗಿದೆ. ತಮ್ಮ ಇಲಾಖೆಯಲ್ಲಿರತಕ್ಕಂತಹ ಸೆಕ್ಯೂರಿಟಿ ಆಫೀಸರ್ಸ್ ಏನು ಮಾಡುತ್ತಿದ್ದಾರೆ? ಕಣ್ಣು ಮುಂದೆಯೇ ದೊಡ್ಡ ದೊಡ್ಡ ದುರ್ವ್ಯವಹಾರ ನಡೆಯುತ್ತಿದ್ದರೂ ಅದನ್ನು ನೋಡಿಯೂ ಕಣ್ಣು ಮುಚ್ಚಿಕೊಂಡು ಕುಳಿತಿದ್ದಾರೆ. ರಾಜ್ಯದ ಜನತೆ ಮೇಲೆ ಇನ್ನೂ ಹೆಚ್ಚು ಹೆಚ್ಚು ಟ್ಯಾಕ್ಸನ್ನು ಹಾಕಿ ಆದಂತಹ ನಷ್ಟವನ್ನು ಭರಿಸುವುದಕ್ಕೆ ಇವರು ಸಿದ್ಧರಿದ್ದಾರೆಂದು ಅವರು ತಿಳಿದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ.

ಛೇರ್ಮನ್.—ತಾವು ದಯಮಾಡಿ ತಮ್ಮ ಭಾಷಣವನ್ನು ಮುಗಿಸಿ. ಇವತ್ತೇ ಈ ಬೇಡಿಕೆಯನ್ನು ಮುಗಿಸಬೇಕಾಗಿದೆ.

ಶ್ರೀ ವಿ. ಧನಂಜಯಕುಮಾರ್.—ಆದಂತಹ ನಷ್ಟ ಯಾವುದೇ ರೀತಿಯ ಭಾಷಣದಿಂದ ಭರ್ತಿಯಾಗುವುದಿಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಸೂಕ್ತವಾದ ಕೆಲವು ಸಲಹೆಗಳನ್ನು ಕೊಟ್ಟರೆ ಇನ್ನು ಆಗತಕ್ಕಂತಹ ನಷ್ಟವನ್ನು ಕಡಿಮೆಮಾಡುವುದಕ್ಕೆ ಅನುಕೂಲವಾಗುತ್ತದೆ. ಈ ರೀತಿ ಸೋರಿಹೋಗುತ್ತಿರುವುದನ್ನು ತಡೆಗಟ್ಟುವುದಕ್ಕೆ ಕ್ರಮ ಕೈಗೊಳ್ಳಿ ಎಂದು ಮತ್ತೊಮ್ಮೆ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಂತಹ ಅಧಿಕಾರಿಗಳು ತಮ್ಮ ಇಲಾಖೆಯಲ್ಲಿದ್ದರೂ ಅವರನ್ನು ವಿದೇಶಗಳಿಗೆ ಬೇರೆ ಬೇರೆ ಊರುಗಳಿಗೆ ತರಬೇತಿಗಾಗಿ ಬೇರೆ ಕಳುಹಿಸುತ್ತಿದ್ದೀರಿ. ಇಂತಹ ಅಧಿಕಾರಿಗಳ ಮೇಲೆ ಸಾವಿರಾರು ಹಾಗೂ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ತಾವು ದಯಮಾಡಿ ಇನ್ನುಮುಂದೆ ಇದರ ಬಗ್ಗೆ ಗಮನ ಹರಿಸಬೇಕು. ಈ ರೀತಿ ಸೋರಿಹೋಗುವ ನಷ್ಟ ಒಂದು ಕಡೆ, ಮತ್ತೊಂದು ಅಧಿಕಾರಿಗಳಿಗೆ ತರಬೇತಿಯನ್ನು ಕೊಡುವುದಕ್ಕಾಗಿ ಖರ್ಚು ಮಾಡುವ ನಷ್ಟ ಇನ್ನೊಂದು ಕಡೆ. ಈ ರೀತಿ ಆಗಿರುವಂತಹ ನಷ್ಟವನ್ನು ಭರಿಸುವುದಕ್ಕೆ ಬಡ ಜನತೆಯ ಮೇಲೆ ಇನ್ನಷ್ಟು ಹೊರೆಯನ್ನು ಹೊರಿಸಬೇಡಿ ಎಂದು ತಮ್ಮಲ್ಲಿ ವಿನಮ್ರತೆಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ತಮ್ಮ ಇಲಾಖೆಯಲ್ಲಿ ಇನ್ನೂ ಅನೇಕ ಅಧಿಕಾರಿಗಳು ಇದ್ದಾರೆ. ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇಲ್ಲಿ ಇನ್ನೂ ಅನೇಕ ಮಾನ್ಯ ನನ್ನ ಮಿತ್ರರು ಇದರ ಬಗ್ಗೆ ಪ್ರಸ್ತಾಪ ಮಾಡುವವರು ಇರಬಹುದು. ತಾವು ಒಳ್ಳೆಯ ದಕ್ಷತೆಯಿಂದ ಕೆಲಸ ಮಾಡುತ್ತೀರಿ ಎಂಬ ವಿಶ್ವಾಸ ನಮಗಿದೆ. ತಮ್ಮ ಅಧಿಕಾರದ ಅವಧಿಯಲ್ಲಿ ಈ ಸಂಸ್ಥೆ ನಷ್ಟದಿಂದ ಮೇಲೆ ಬಂದು ಲಾಭ ಗಳಿಸುವಂತಾಗಲಿ ಎಂಬುದಾಗಿ ಹಾರೈಸುತ್ತಾ, ತಾವು ಇಟ್ಟಂತಹ ಬೇಡಿಕೆಯನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತಾ, ಅಧ್ಯಕ್ಷರು ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೂ ವಂದಿಸುತ್ತೇನೆ. ಜೊತೆಗೆ ಮತ್ತೊಮ್ಮೆ ಸಚಿವರಾದ ಶ್ರೀ ರಘುಪತಿಯವರು ಇಲ್ಲಿ ಇಲ್ಲ. ನಾನು ಲೇಬರ್ ಇಲಾಖೆಗೆ ಸಂಬಂಧಪಟ್ಟಂತೆ ಮಾತನಾಡುವಾಗ ಹೇಳಿದಂತಹ ದೂರು ಕಡತಗಳನ್ನು ಸಭೆಯ ಮುಂದೆ ಇಡಬೇಕು. ಕಾರ್ಮಿಕ ಮಂತ್ರಿಗಳು ಏನು ಇದ್ದಾರೆ ಅವರು

ಹಚ್‌ನಿಂದ ವಾಪಸ್ಸು ಬಂದ ತಕ್ಷಣ ಅವರಿಂದ ರಾಜೀನಾಮೆಯನ್ನು ಬರೆಯಿಸಿಕೊಳ್ಳಬೇಕು. ಇಂತಹ ಮಂತ್ರಿಗಳು ಅಧಿಕಾರದಲ್ಲಿದ್ದರೆ ಇನ್ನೂ ಕಷ್ಟವಾಗಬಹುದು, ಎಂಬುದಾಗಿ ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಿಮ್ಮ ಸರ್ಕಾರಕ್ಕೆ ಸಹಕಾರ ಕೊಡುವವರೇ ಮಂತ್ರಿಗಳಿಂದ ರಾಜೀನಾಮೆಯನ್ನು ಕೇಳಿದರೆ ಈ ಸರ್ಕಾರ ಹೇಗೆ ನಡೆಯಬೇಕು ?

ಶ್ರೀ ಎ. ಲಕ್ಷ್ಮೀಸಾಗರ್ :—ಅದು ಮಾನ್ಯ ಸದಸ್ಯರ ತತ್ವನಿಷ್ಠೆ, ಕಾರ್ಯನಿಷ್ಠೆ ಇದನ್ನು ತೋರಿಸುತ್ತದೆ.

ಶ್ರೀ ಸೂರ್ಯನಾರಾಯಣರಾವ್ (ವರ್ತೂರು).—ಸನ್ಮಾನ್ಯ ಸಭಾ ಅಧ್ಯಕ್ಷರೆ, ನಾನು ಇವತ್ತು ಕಾರ್ಮಿಕ ಇಲಾಖೆಯ ಬಗ್ಗೆ ಇಟ್ಟಂತಹ ಬೇಡಿಕೆಯ ಮೇಲೆ ನಾಲ್ಕಾರು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಈ ಕಾರ್ಮಿಕ ಇಲಾಖೆ ಕಳೆದ 35 ವರ್ಷಗಳಿಂದಲೂ ಯಾರಿಗೂ ಬೇಡವಾದುದು ಎಂಬುದಾಗಿ ಪರಿಗಣಿಸಿದ್ದಾರೆ ಎಂದು ಕಾಣುತ್ತದೆ. ಈ ರಾಷ್ಟ್ರದಲ್ಲಿ ಸಾಮಾಜಿಕ ನ್ಯಾಯವನ್ನು ಕೊಡಬೇಕಾದರೆ ದುಡಿಯುವ ವರ್ಗಕ್ಕೆ ನ್ಯಾಯವನ್ನು ಕೊಡಬೇಕು. ಈ ಕ್ರಾಂತಿಕಾರಕ ವರ್ಗಕ್ಕೆ ನ್ಯಾಯವನ್ನು ಕೊಡಬೇಕು. ಈ ಸಮಾಜದಲ್ಲಿ ಉಪಯೋಗಕ್ಕೆ ಬೇಕಾದಂತಹ ವಸ್ತುಗಳನ್ನು ಸೃಷ್ಟಿ ಮಾಡುವಂತಹ ವರ್ಗಕ್ಕೆ ಕೊಡಬೇಕೆಂದು ಹೇಳುತ್ತಾ ಅಂತಹ ಕಾನೂನುಗಳನ್ನು ಸರ್ಕಾರ ಮಾಡಿ, ಅದಕ್ಕನುಗುಣವಾದ ರೀತಿಯಲ್ಲಿ ಈ ಇಲಾಖೆ ಕೆಲಸ ಮಾಡುತ್ತಿಲ್ಲ. ಈ ಇಲಾಖೆಯಲ್ಲಿ ಸರಿಯಾಗಿ ತರಬೇತಿಯನ್ನು ಹೊಂದಿದ ಸಾಮಾಜಿಕ ನ್ಯಾಯವನ್ನು ದೊರಕಿಸಿ ಕೊಡತಕ್ಕಂತಹ, ಅಧಿಕಾರಿಗಳು ಇಲ್ಲ, ಮಾಲೀಕರು ಮತ್ತು ಕಾರ್ಮಿಕರ ಮಧ್ಯೆ ವಾದವಿವಾದಗಳು ಬಂದಾಗ ಅಧಿಕಾರಿಗಳು ಮಧ್ಯೆ ಪ್ರವೇಶ ಮಾಡಿ, ಚೌಕಾಶಿ ಮಾಡಿ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಸರಿಯಾಗಿ ಅನುಭವ ಇರತಕ್ಕಂತಹ ಅಧಿಕಾರಿಗಳು ಅಲ್ಲಿ ಇಲ್ಲ. ಅಂತಹ ಅಧಿಕಾರಿಗಳ ಕೊರತೆ ಈ ಇಲಾಖೆಯಲ್ಲಿದೆ.

ಅಧಿಕಾರಿಗಳನ್ನು ಯಾವುದಾದರೂ ಒಂದು ಇಲಾಖೆಗೆ ಟ್ರಾನ್ಸ್‌ಫರ್ ಮಾಡಿದರೆ ಅಲ್ಲಿಯ ವಿದ್ಯಮಾನಗಳನ್ನು ತಿಳಿದುಕೊಳ್ಳಬೇಕಾದರೆ ಅವನಿಗೆ ಆರು ತಿಂಗಳು ಬೇಕಾಗುತ್ತದೆ. ಇದರಿಂದ ಏನಾಗುತ್ತದೆ ಎಂದರೆ ಅಲ್ಲಿಯ ಕೆಲಸಗಾರರಿಗೆ ನಿರುಸೆಯಾಗುತ್ತದೆ ಅಲ್ಲದೆ ಅವರು ಅನೇಕ ಕಷ್ಟನಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಆದುದರಿಂದ ಇದರ ಬಗ್ಗೆ ಚೆನ್ನಾಗಿ ತಿಳಿದುಕೊಂಡಂಥವರನ್ನು ಅದರಲ್ಲಿ ಟ್ರೈನ್ಡ್ ಕೇಡರ್‌ನಲ್ಲಿ ಇದ್ದಂಥವರನ್ನು ಈ ಕಾರ್ಮಿಕರ ಬಗ್ಗೆ ಚೆನ್ನಾಗಿ ತಿಳಿದುಕೊಂಡಂಥವರನ್ನು, ಈ ಕೈಗಾರಿಕೆಗಳ ಬಗ್ಗೆ ಅರ್ಥ ಮಾಡಿಕೊಂಡಂಥವರನ್ನು ಆ ಕಾರ್ಖಾನೆಗೆ ಹಾಕಿದರೆ ಆಗ ಅಲ್ಲಿರುವವರಿಗೆ ಒಂದು ಸಾಮಾಜಿಕ ನ್ಯಾಯ ದೊರಕಿಸಿಕೊಟ್ಟಂತಾಗುತ್ತದೆ. ಇಲ್ಲದೇ ಹೋದರೆ ಮಾಲೀಕರ ಪರವಾಗಿ ತೀರ್ಪು ಬರುತ್ತದೆ. ಈ ಕಾರ್ಖಾನೆಗಳಲ್ಲಿ ಮಾಲೀಕ ವರ್ಗ ಮತ್ತು ದುಡಿಯುವವರ ವರ್ಗ ಎಂದು ಎರಡು ವರ್ಗಗಳು ಇವೆ. ಈ ದುಡಿಯುವ ವರ್ಗ ಏನು ಇದೆಯೋ ಅದು ಈ ಕಾರ್ಮಿಕ ವರ್ಗಕ್ಕೆ ವೀಕರ್ ಸೆಕ್ಷನ್ ಎಂದು ಕರೆಯುತ್ತೇವೆ. ಈ ವೀಕರ್ ಸೆಕ್ಷನ್ ಬಗ್ಗೆ ಗೊತ್ತಿರತಕ್ಕಂಥ ಅಧಿಕಾರಿಗಳು ಅಲ್ಲಿ ಇಲ್ಲದೇ ಇರುವುದರಿಂದ ಅನೇಕ ಸಮಸ್ಯೆಗಳು ಬಗೆಹರಿಯದೇ ನೆನೆಗುದಿಗೆ ಬಿದ್ದಿವೆ.

ಇನ್ನು ಆರ್ಥಿಕ ಪರಿಸ್ಥಿತಿ ಬಗ್ಗೆ ಹೇಳಬೇಕಾದರೆ ನಮ್ಮ ಸರ್ಕಾರ ಕೇಂದ್ರ ಸರ್ಕಾರದ ಮುಖಾಂತರ ಇಂಟರ್‌ನ್ಯಾಷನಲ್ ಫಂಡ್‌ನಿಂದ ಸಾಲ ತೆಗೆದುಕೊಳ್ಳುತ್ತಾರೆ. ವರ್ಲ್ಡ್ ಬ್ಯಾಂಕ್‌ನಿಂದ ಸಾಲ ತೆಗೆದುಕೊಳ್ಳುತ್ತಾರೆ. ಆದರೆ ಈಗ ಏನಾಗಿದೆ ಎಂದರೆ ನಮ್ಮಲ್ಲಿ ಇಂಪೋರ್ಟ್ ಮಾಡುವುದಕ್ಕೆ ಅವಕಾಶ ಇದ್ದರೂ ಕೂಡ ಎಕ್ಸ್‌ಪೋರ್ಟ್ ಮಾಡವುದು ಕಷ್ಟವಾಗಿದೆ, ಇದನ್ನು ಎತ್ತಬೇಕು. ಮತ್ತು ನಾವು ಬೇರೆ ದೇಶಗಳಿಂದ ಔಟ್‌ಡೇಟೆಡ್ ಮಿಷನರಿ ಏನು ತರಿಸುತ್ತೇವೋ ಅದು ಬಂದ ಮೇಲೆ ಅದರ ಬಗ್ಗೆ ಟೆಕ್ನಿಕಲ್ ನೋ-ಹೌ ತಿಳಿದಂಥವರು ಇಲ್ಲದೇ ಹೋದರೆ ಯಾವ ಕೈಗಾರಿಕೆಗಳೂ ಸಹ ಲಾಭ ಮಾಡವುದಕ್ಕಾಗುವುದಿಲ್ಲ. ಹೀಗಾಗಿ ನಮ್ಮಲ್ಲಿ ಇರತಕ್ಕಂಥ ಮಲ್ಟಿನ್ಯಾಷನಲ್ ಕಂಪನಿಗಳು, ಇನ್ನೂ ಅನೇಕ ಕಂಪನಿಗಳು ಮುಚ್ಚಿ ಹೋಗಿವೆ. ಇವರಿಂದ ಅನೇಕ ಕಾರ್ಖಾನೆಗಳಲ್ಲಿ ಈವೊತ್ತಿನ ದಿವಸ ಕಾರ್ಮಿಕರನ್ನು ಕೆಲಸದಿಂದ ತೆಗೆದಿದ್ದಾರೆ. ಮೈಕ್ರೋ ಇನ್ನೂ ಸಣ್ಣ ಸಣ್ಣ ಇಂಜಿನಿಯರಿಂಗ್ ಕಂಪನಿಗಳು ಮುಚ್ಚಿಹೋಗಿದ್ದಂಥ ಪರಿಸ್ಥಿತಿ ದಾಖಲೆಯಲ್ಲಿ ಇವೆ. ಈವೊತ್ತಿನ ಒಂದು ಆರ್ಥಿಕ ಪರಿಸ್ಥಿತಿ ಮತ್ತು ಕೇಂದ್ರ ಸರ್ಕಾರದ ಒಂದು ಧೋರಣೆ ಏನು ಇದೆ ಇವೆರಡೂ ಸರಿಹೋಗದೇ ಹೋದರೆ ನಮ್ಮ ರಾಜ್ಯದಲ್ಲಿರತಕ್ಕಂಥ ಕಾರ್ಮಿಕರಿಗೆ ನ್ಯಾಯವನ್ನು ದೊರಕಿಸಿಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಈವೊತ್ತಿನ ದಿವಸ ಕೇಂದ್ರ ಸರ್ಕಾರ ಈ ಕಾರ್ಮಿಕರ ಬಾಯನ್ನು ಮುಚ್ಚಿಸುವುದಕ್ಕೆ ಒಂದು ತಿದ್ದುಪಡಿಯನ್ನು ತರಬೇಕು ಎಂದು ಮಾಡಿದ್ದಾರೆ. ಇದರ ಬಗ್ಗೆ ಜನತಾಪಕ್ಷದವರು ತಮ್ಮ ಒಂದು ಕಳಕಳಿಯನ್ನೂ ಸಹ ತೋರಿಸಬೇಕು ಎಂದು ನಾನು ಹೇಳುತ್ತೇನೆ. ಕೇಂದ್ರ ಸರ್ಕಾರದಲ್ಲಿ ಬರತಕ್ಕಂಥ ಈ ಒಂದು ತಿದ್ದುಪಡಿಗೆ ಪಾರ್ಲಿಮೆಂಟ್ ಸದಸ್ಯರು ಇದಕ್ಕೆ ಅವಕಾಶ ಕೊಡದೇ ಇದ್ದ ಹಾಗೆ ಕಾರ್ಮಿಕರ ಬಗ್ಗೆ ತಮ್ಮ ಬೆಂಬಲವನ್ನು ತೋರಿಸಬೇಕು ಎಂದು ಹೇಳುತ್ತೇನೆ. ಇಂಟರ್‌ನ್ಯಾಷನಲ್ ಡಿಸ್‌ಪ್ಯೂಟ್ ಆಕ್ಟ್ ಬಗ್ಗೆ, ಟ್ರೇಡ್ ಯೂನಿಯನ್ ಆಕ್ಟ್ ಬಗ್ಗೆ, ಪ್ರಾವಿಡೆಂಟ್ ಫಂಡ್ ಆಕ್ಟ್ ಬಗ್ಗೆ,

ಪೇಮೆಂಟ್ ಆಫ್ ವೇಜಸ್ ಆಕ್ಟ್ ಬಗ್ಗೆ ಏನು ಒಂದು ತಿದ್ದುಪಡಿ ತರುತ್ತಾರೋ ಅದಕ್ಕೆ ಅವಕಾಶ ಕೊಡಬೇಡಿ ಎಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಕಾರ್ಮಿಕರ ಬೆಂಬಲ ನಿಮಗೆ ಇರುವುದರಿಂದ ಅಧಿಕಾರಕ್ಕೆ ಬಂದಿದ್ದೀರಿ ಎನ್ನುವುದನ್ನು ಮರೆಯಬಾರದು. ತಮಗೆ ಇನ್ನೊಂದು ವಿಷಯ ಹೇಳುವುದಾದರೆ ಜನತಾ ಸರ್ಕಾರ ಬಂದಮೇಲೆ ಈ ಮೇ ದಿನಾಚರಣೆಯನ್ನು ಅಂತರರಾಷ್ಟ್ರೀಯ ಕಾರ್ಮಿಕ ದಿನಾಚರಣೆಯನ್ನಾಗಿ, ಅವರಿಗೆ ಸಂಬಳ ಸಮೇತ ರಜಾ ಸಿಕ್ಕಬೇಕು ಎಂದು ಪ್ರಯತ್ನ ಮಾಡಿದರು. ಕಾನೂನು ಇಲಾಖೆಯವರು ಇದರ ಬಗ್ಗೆ ಒಂದು ಆರ್ಡಿನೆನ್ಸ್ ತರಬೇಕು ಎಂದು ಸಲಹೆ ಕೊಟ್ಟ ಮೇಲೆ ಆ ಆರ್ಡಿನೆನ್ಸ್ ಅನುಮತಿಗೆ ಒಬ್ಬ ಸ್ಪೆಷಲ್ ಅಧಿಕಾರಿಯನ್ನು ರಾಷ್ಟ್ರಪತಿ ಅನುಮತಿಗೆ ಕಳುಹಿಸಿಕೊಟ್ಟರು. ಅದಕ್ಕೆ ರಾಷ್ಟ್ರಪತಿ ಅನುಮತಿ ಇನ್ನೂ ಕೊಟ್ಟಿಲ್ಲ. ತಮಿಳುನಾಡಿನಲ್ಲಿ ಕೊಟ್ಟಿದ್ದಾರೆ. ಆದರೆ ನಮ್ಮ ಕರ್ನಾಟಕಕ್ಕೆ ಏತಕ್ಕೆ ಕೊಟ್ಟಿಲ್ಲವೋ ಕಾರಣ ಗೊತ್ತಾಗಲಿಲ್ಲ. ಜನತಾ ಸರ್ಕಾರದ ಬಗ್ಗೆ, ಕಾರ್ಮಿಕರ ಬಗ್ಗೆ ಏನು ಅಭಿಪ್ರಾಯ ಇದೆಯೋ ಗೊತ್ತಿಲ್ಲ. ಇನ್ನೇನಾದರೂ ರಾಜಕೀಯ ಉದ್ದೇಶ ಇದೆಯೋ ಏನೋ ಗೊತ್ತಿಲ್ಲ. ಏತಕ್ಕಾಗಿ ರಾಷ್ಟ್ರಪತಿ ಅನುಮತಿ ಇದಕ್ಕೆ ಬರಲಿಲ್ಲ ಗೊತ್ತಾಗಲಿಲ್ಲ. ಮಾನ್ಯ ಎಂ. ಎಸ್. ಕೃಷ್ಣನ್‌ರವರೂ ಸಹ ಇದರ ಬಗ್ಗೆ ಮಾತನಾಡುವಾಗ ಹೇಳಿದ್ದಾರೆ. ಈ ಆರ್ಡಿನೆನ್ಸ್ ಅನ್ನು ಯಾರು ತರಬೇಕು ಎಂದು ಮಾಡಿದರು, ಅದಕ್ಕೆ ಯಾರು ಸೈನ್ ಮಾಡಿದರು, ಏತಕ್ಕಾಗಿ ಇದುವರೆಗೂ ಬರಲಿಲ್ಲ ಎನ್ನುವುದನ್ನು ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಹೇಳಬೇಕು. ಇದರ ಬಗ್ಗೆ ಕಾರ್ಮಿಕರಿಗೆ ಸರಿಯಾಗಿ ತಿಳುವಳಿಕೆ ಬರಬೇಕು ಎನ್ನುವ ಉದ್ದೇಶದಿಂದ ನಾನು ಹೇಳುತ್ತಿದ್ದೇನೆ. ಈ ಜನತಾ ಸರ್ಕಾರ ಬಂದಾಗ ಕಾರ್ಮಿಕರಿಗೆ ಸರಿಯಾಗಿ ನ್ಯಾಯ ಸಿಕ್ಕುತ್ತದೆ ಎಂದು ತಿಳಿದುಕೊಂಡಿದ್ದರು. ಆದರೆ ಈ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸ್ವಲ್ಪ ಉಸಿರಾಡುವ ಹಾಗಾಯಿತೇ ವಿನಃ ಈ ಕಾರ್ಮಿಕರು ಇನ್ನೂ ಸ್ವಲ್ಪ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಈವೊತ್ತಿನ ದಿವಸ ಮಲ್ಟಿನ್ಯಾಷನಲ್ ಕಂಪನಿಯವರು ಕಾರ್ಮಿಕರಾಗಲಿ ಅಥವಾ ಮೈಕೊ ಕಂಪನಿಯ ಕಾರ್ಮಿಕರಾಗಲಿ ಏನಾದರೂ ಒಂದು ಶಾಂತಿಯುತವಾದ ಚಳುವಳಿ ಮಾಡಿದರೂ ಸಹ ಆ ಕಂಪನಿಯ ಗೇಟ್ ಹತ್ತಿರವೇ ಪೋಲೀಸಿನವರು ಅವರನ್ನು ಬಿಡುವುದಿಲ್ಲ. ಅದಕ್ಕಾಗಿ ನಾನು ಹೇಳುವುದೇನೆಂದರೆ ಕೈಗಾರಿಕಾ ವಿವಾದಗಳಲ್ಲಿ ಪೋಲೀಸರ ಮಧ್ಯಸ್ಥಿಕೆ ಇರಕೂಡದು ಎಂದು. ತಾವು ಇದನ್ನು ಅರಿಯಬೇಕಾಗಿದೆ. ಬೆಂಗಳೂರಿನಲ್ಲಿ 12 ಕ್ಷೇತ್ರಗಳಲ್ಲೂ ಕೂಡ ಜನತಾ ಪಕ್ಷದವರು ಆರಿಸಿ ಬಂದಿರುವುದಕ್ಕೆ ಕಾರಣ ಮುಖ್ಯವಾಗಿ ಈ ಕಾರ್ಮಿಕರ ಬೆಂಬಲದಿಂದಲೇ. ಆದುದರಿಂದ ನಾನು ಹೇಳುತ್ತಾ ಇರುವುದು ಈ ಹೊಸ ಸರ್ಕಾರ ಬಂದಮೇಲೆ ಈಗ ಕಾರ್ಮಿಕರ ಮೇಲೆ ಏನು ಒಂದು ದಬ್ಬಾಳಿಕೆ ನಡೆಯುತ್ತಾ ಇದೆಯೋ ಅದು ಬದಲಾವಣೆಯಾಗಬೇಕು ಎಂದು. ರಾಜಕೀಯ ಉದ್ದೇಶ ಇದರಲ್ಲಿ ತರಬಾರದು. ಕಾರ್ಮಿಕರಲ್ಲಿ ಒಂದು ಸಂಘಟನಾ ಶಕ್ತಿ ಇರುವುದು ಬಹಳ ಮುಖ್ಯವಾದುದು. ಕಾರ್ಮಿಕರು ತಮ್ಮಲ್ಲಿ ಒಂದು ಸಂಘಟನಾ ಶಕ್ತಿಯಿಂದ ಈವೊತ್ತಿನ ದಿವಸ ತಮ್ಮ ಬೇಡಿಕೆಗಳ ಬಗ್ಗೆ ಚಳುವಳಿ ಹಾಗೂ ಮುಷ್ಕರ ಮಾಡಲು ಹೊರಟರೆ ದೊಡ್ಡ ದೊಡ್ಡ ಮಾಲೀಕರು, ಮಲ್ಟಿನ್ಯಾಷನಲ್ ಕಂಪನಿಯ ಮಾಲೀಕರು ಏನು ಮಾಡುತ್ತಿದ್ದಾರೆ ಎಂದರೆ ಆ ಕಾರ್ಖಾನೆಯ ಗೇಟಿನ ಬಾಗಿಲಿಗೇ ಬಿಡದೇ ಇರುವ ಹಾಗೆ ಪೋಲೀಸಿನವರನ್ನು ಕರೆಯಿಸಿ ತಮ್ಮ ಬಲಪ್ರಯೋಗವನ್ನು ಬಳಸುತ್ತಾರೆ. ಅಲ್ಲಿರುವ ನೌಕರರನ್ನು ರಿಟ್ರೆಂಚ್ ಮಾಡಿಸುತ್ತಾರೆ, ಆ ಕಾರ್ಖಾನೆಯನ್ನು ಲಾಕೌಟ್ ಮಾಡಿಸುತ್ತಾರೆ. ಕ್ಲೋಸ್ ಮಾಡಿಸುತ್ತಾರೆ. ಇದರ ಬಗ್ಗೆ ಸಿ.ಆರ್. ಪೀನಲ್ ಕೋಡ್ ಏನು ಇದೆ ಅದನ್ನು ಬಳಸುತ್ತಾರೆ. ಇದು ಇನ್ನೂ ಬದಲಾವಣೆಯಾಗಿಲ್ಲ. ಈವೊತ್ತಿನ ದಿವಸ ಅವರು ಶಾಂತಿಯುತವಾಗಿ ಚಳುವಳಿ ಮಾಡಬೇಕು ಎಂದರೂ ಸಹ ಆಗುತ್ತಾ ಇಲ್ಲ. ಇದಕ್ಕೆ ಕಾರಣ ಇಲ್ಲಿ ಇರತಕ್ಕಂಥ ಕನ್‌ಸಲ್ಟೆಂಟ್ಸ್ ಏನು ಇದ್ದಾರೆ, ಇವರಿಗೆ ಆ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ಸರಿಯಾಗಿ ಗೊತ್ತಿರುವುದಿಲ್ಲ. ಈ ಕಾರ್ಮಿಕರು ಇನ್ನೂ ಹೆಚ್ಚು ಮುಂದುವರೆಯುವುದಾದರೆ ಆ ಮಾಲೀಕರು ಕೋರ್ಟಿಗೆ ಹೋಗಿ ಸಿವಿಲ್ ಇಂಜಕ್ಷನ್ ತಂದುಬಿಡುತ್ತಾರೆ, ಮೀಟಿಂಗ್ ಮಾಡಬಾರದು ಎಂದು. ಒಂದು ಕಡೆ ನೋಡಿದರೆ ಟ್ರೇಡ್ ಯೂನಿಯನ್ ಆಕ್ಟ್ ಪ್ರಕಾರ ಶಾಂತಿಯುತವಾಗಿ ಚಳುವಳಿ ಮಾಡಬಹುದು ಎಂದು ಹಕ್ಕು ಇದೆ. ಇನ್ನೊಂದು ಕಡೆ ನೋಡಿದರೆ ಗೇಟ್ ಹತ್ತಿರ ಮೀಟಿಂಗ್ ಮಾಡಬೇಡಿ, ಘೋಷಣೆಗಳನ್ನು ಕೂಗಬಾರದು ಎಂದು ಹೇಳುತ್ತಾರೆ. 1926 ರ ಟ್ರೇಡ್ ಯೂನಿಯನ್ ಆಕ್ಟ್ ಪ್ರಕಾರ ಅವರಿಗೆ ಈ ತರಹವಾದ ಸೌಲಭ್ಯಗಳು ಇವೆ. ಇದಕ್ಕೆ ವಿರುದ್ಧವಾಗಿ ಹೋಗಬಾರದು. ಇದನ್ನು ಸರ್ಕಾರದವರು ಬಹಳ ಗಂಭೀರವಾಗಿ ಪರಿಗಣಿಸಬೇಕು. ಸಣ್ಣ ಸಣ್ಣ ಕಾರ್ಖಾನೆಗಳಲ್ಲಿ ಕೇಂದ್ರ ಸರ್ಕಾರದ್ದೇ ಆಗಲೀ ರಾಜ್ಯ ಸರ್ಕಾರದ್ದೇ ಆಗಲೀ ಅಲ್ಲಿರುವ ಅಸಂಘಟಿತ ಕಾರ್ಮಿಕರನ್ನು ಸಂಘಟನೆ ಮಾಡಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ಆ ಕಾರ್ಮಿಕರನ್ನು ಗೇಟ್ ಹತ್ತಿರ ಬರಬಾರದು ಎಂದರೆ ಹೇಗೆ? ಎಲಿಕ್ಟ್ರೋನ್ ಸಂಸ್ಥೆ ಇದೆ, ಹೆಣ್ಣುಮಕ್ಕಳು ಕೆಲಸ ಮಾಡತಕ್ಕಂಥ ಅನೇಕ ಕಾರ್ಖಾನೆಗಳು ಇವೆ. ಅಲ್ಲಿರುವ ಹೆಣ್ಣುಮಕ್ಕಳನ್ನು ಅಸಂಘಟಿತ ಕಾರ್ಮಿಕರನ್ನು ಸಂಘಟನೆ ಮಾಡುವುದಕ್ಕೆ ಹೊರಟಾಗ ಅವರನ್ನು ಪೋಲೀಸಿನವರು ದಸ್ತಗಿರಿ ಮಾಡಿದ್ದಾರೆ. ಗೇಟ್ ಹತ್ತಿರ ತಡೆದಿದ್ದಾರೆ. ನಾನು ನೋಡಿದ್ದೇನೆ. ಇದು ಬದಲಾವಣೆಯಾಗಬೇಕು. ಈ ಜನತಾ ಸರ್ಕಾರ ಹಿಂದಿನ ಸರ್ಕಾರಕ್ಕಿಂತ ಉತ್ತಮ ಎನ್ನುವ ಒಂದು ಮನೋಭಾವನೆ ಬಂದಿತ್ತು. ಈ ಕಾರ್ಮಿಕರ ವಿವಾದದಲ್ಲಿ ಪೋಲೀಸರು ಮಧ್ಯೆ ಪ್ರವೇಶ

ಮಾಡಬಾರದು. ತಾವು ಕಾರ್ಮಿಕರಿಗೆ ರಕ್ಷಣೆ ಕೊಡಬೇಕು. ದೊಡ್ಡ ದೊಡ್ಡ ಮಾಲೀಕರಿಗೆ, ದೊಡ್ಡ ದೊಡ್ಡ ಸಂಸ್ಥೆಗೆ ರಕ್ಷಣೆ ಕೊಟ್ಟಿರುವುದರಿಂದ ಈವೊತ್ತಿನ ದಿವಸ ನಾವು ತಲೆ ತಗ್ಗಿಸಬೇಕಾಗಿದೆ. ಇದು ಬದಲಾವಣೆಯಾಗಬೇಕು. ನಮ್ಮ ರಾಜ್ಯದಲ್ಲಿರುವ ಟೆಕ್ಸ್‌ಟೈಲ್ ಮಿಲ್ಸ್‌ನಲ್ಲಿ 33 ಸಾವಿರ ಕಾರ್ಮಿಕರು ಇದ್ದಾರೆ. ಇಲ್ಲಿ ಟೆಕ್ಸ್‌ಟೈಲ್ ಕಾರ್ಮಿಕರಿಗೆ ಕೊಡತಕ್ಕಂಥ ಸಂಬಳ, ಕೊಯಮತ್ತೂರು ಮತ್ತು ಕೇರಳದಲ್ಲಿರುವ ಟೆಕ್ಸ್‌ಟೈಲ್ ಕಾರ್ಮಿಕರಿಗೆ ಕೊಡುತ್ತಿರುವ ವೇಜಸ್ ನೋಡಿದರೆ ಬಹಳ ಅಂತರ ಇದೆ. ಇದು ಬದಲಾವಣೆಯಾಗಬೇಕು. ಇದು ಎರಡು ವರ್ಷದ ಹಿಂದಿನ ಮಾತು. ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್, ಬಿನ್ನಿಮಿಲ್, ಕೆ.ಆರ್. ಮಿಲ್ ಈ ಕೆಲಸಗಾರರಿಗೆ ಮಿನಿಮಮ್ ವೇಜಸ್ ಇಷ್ಟು ಕೊಡಬೇಕು ಎಂದು ಒಂದು ಅಗ್ರಿಮೆಂಟ್ ಆಗಿ ಅದಕ್ಕೆ ದಸ್ಕತ್ತೂ ಸಹ ಆಯಿತು. ಅವರಿಗೆ 26 ರೂಪಾಯಿಗಳ ಹೆಚ್ಚಳ ಕೊಡಬೇಕಾಗಿತ್ತು. ಇದುವರೆಗೂ ಕೊಟ್ಟಿಲ್ಲ. ಕರ್ನಾಟಕದಲ್ಲಿರುವ ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್‌ನಲ್ಲಿರುವ ಕಾರ್ಮಿಕರ ವೇತನಕ್ಕೂ ಕೇರಳದಲ್ಲಿರುವ ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್ ಕಾರ್ಮಿಕರ ವೇತನಕ್ಕೂ ಹೋಲಿಸಿದರೆ ಇಲ್ಲಿ ಬಹಳ ಅಂತರ ಇದೆ. ಈ ಹಿಂದೆ ಸರ್ಕಾರ 26 ರೂಪಾಯಿಗಳು ಹೆಚ್ಚು ಕೊಡುತ್ತೇವೆ ಎಂದು ಹೇಳಿದುದನ್ನೇ ಕೊಡದೇ ಇನ್ನೂ ಇವರು ಮೋಸ ಮಾಡುತ್ತಿದ್ದಾರೆ. ಇದು ಕೆಲವು ಮಾಲೀಕರ ಪ್ರಭಾವದಿಂದ ಹೀಗಾಗಿದೆ. ಅದನ್ನು ಸರಿಪಡಿಸತಕ್ಕಂಥ ಜವಾಬ್ದಾರಿ ಸರ್ಕಾರದ್ದಲ್ಲವೇ? ಇದುವರೆಗೆ ಅವರು ಏತಕ್ಕಾಗಿ ಕೊಟ್ಟಿಲ್ಲ, ಇದರ ಬಗ್ಗೆ ಹೋರಾಟವೂ ಕೂಡ ಆಗಿದೆ. ಮಿನಿಮಮ್ ವೇಜಸ್ ಎಲ್ಲಾ ರಾಜ್ಯದ್ದೂ ತೆಗೆದುಕೊಂಡು ಇದರ ಬಗ್ಗೆ ಅಡ್ವೈಸರಿ ಕಮಿಟಿಯವರು ಪರಿಶೀಲನೆ ಮಾಡಿ ಕನಿಷ್ಟಪಕ್ಷ 500 ರೂಪಾಯಿಗಳು ಇರಬೇಕು ಎಂದು ಮಾಡಿದ್ದಾರೆ. 1957ನೇ ಇಸವಿಯಲ್ಲಿ ತ್ರಿಪಕ್ಷ ಸಮ್ಮೇಳನದಲ್ಲಿ ಮಿನಿಮಮ್ ವೇಜಸ್ ನೀಡ್ ಇಷ್ಟಾದರೂ ಇರಬೇಕು ಎಂದು ತೀರ್ಮಾನ ಮಾಡಿದೆವು. ಆದರೆ ಈವೊತ್ತಿನ ದಿವಸದ ಬೆಲೆಗನುಗುಣವಾಗಿ ನಾವು ಕ್ಯಾಲ್ಕುಲೇಟ್ ಮಾಡಿ ನೋಡಿದರೆ ನೀಡ್ ಬೇಸ್ಡ್ ವೇಜಸ್‌ಗಿಂತ ಮಿನಿಮಮ್ ವೇಜಸ್ ಕಡಿಮೆಯಾಗಿದೆ. ಈವೊತ್ತಿನ ನೀಡ್ ಬೇಸ್ಡ್ ಪ್ರಕಾರ 1,500 ರೂಪಾಯಿಗಳು ಆದರೂ ಕೊಡಬೇಕಾಗುತ್ತದೆ. ಅವೊತ್ತಿನ ದಿವಸ ಮಿನಿಮಮ್ ವೇಜಸ್ 500 ರೂಪಾಯಿಗಳು ಆದರೂ ಕೊಡಬೇಕು ಎಂದು ತೀರ್ಮಾನ ಮಾಡಿದ್ದು ಇನ್ನೂ ಕೊಟ್ಟಿಲ್ಲ.

ಇನ್ನು ಬೀಡಿ ಕಾರ್ಮಿಕರ ಬಗ್ಗೆ ಹೇಳುವುದಾದರೆ ಅವರಿಗೆ 8 ರೂ. 10 ಪೈಸೆ ಕೊಡಬೇಕು ಎಂದು ಒಂದು ಒಪ್ಪಂದ ಆಗಿತ್ತು. ಈ ಬಗ್ಗೆ ಕಾರ್ಮಿಕರಿಗೂ ಮಾಲೀಕರಿಗೂ ಒಂದು ಒಮ್ಮತ ಅಭಿಪ್ರಾಯ ಬಂದು ಒಪ್ಪಿಕೊಂಡಿದ್ದರು. ಆಗ ಶ್ರೀ ಜಕನೂರ್ ಅವರು ಕಾರ್ಮಿಕ ಮಂತ್ರಿಗಳಾಗಿದ್ದರು. ಅವರು 8 ರೂ. 10 ಪೈಸೆ ಕೊಡಬೇಡಿ, ಅವರಿಗೇಕೆ ಇಷ್ಟು ಕೊಡಬೇಕು ಎಂದು ಏಕಾಏಕಿ 7 ರೂ. 40 ಪೈಸೆ ಕೊಡಬಹುದು ಎಂದು ಮಾಡಿ ಒಪ್ಪಂದ ಆಗಿದ್ದುದನ್ನು ಕೈಬಿಡಲಾಯಿತು. ಈ ಸಂದರ್ಭದಲ್ಲಿ ಅಸಂಘಟಿತ ಕಾರ್ಮಿಕರು ಏನು ಇದ್ದಾರೆ ಅವರನ್ನು ಸಂಘಟನೆ ಮಾಡಬೇಕಾದುದ್ದು ಬಹಳ ಪ್ರಾಮುಖ್ಯವಾಗಿತ್ತು. ಇದು ಕಾರ್ಮಿಕ ನೀತಿಯೂ ಆಗಿದೆ. ಇದರ ಬಗ್ಗೆ 26 ಕೈಗಾರಿಕೆಗಳು ಈ ರೀತಿಯ ವೇಜಸ್ ಕೊಡುವುದಕ್ಕೆ ಒಪ್ಪಿಕೊಂಡಿದ್ದರು. ಇದರ ಬಗ್ಗೆ ರಿಪೋರ್ಟ್ ಬರೆದವರು ಸರಿಯಾದ ರೀತಿಯಲ್ಲಿ ರಿಪೋರ್ಟ್ ಬರೆಯಲಿಲ್ಲ. ಬೇರೆಯವರು ಏನು ಹೇಳಿದರು ಆ ವಾದವನ್ನು ಅವರು ಬರೆಯಲಿಲ್ಲ. ನಂತರ ಇದು ಹೈಕೋರ್ಟಿಗೆ ಹೋಯಿತು. ಅಲ್ಲಿ ಸ್ಟೇ ಆಯಿತು. ಈಗ ಎಂಟು ತಿಂಗಳಾಗಿದೆ. ಸ್ಟೇ ಇನ್ನೂ ವೆಕೇಟ್ ಆಗಲಿಲ್ಲ. ಇದರಲ್ಲಿ ಕೃಷಿ ಕಾರ್ಮಿಕರು ಇದ್ದಾರೆ, ಕಾರ್ಮಿಕರು ಇದ್ದಾರೆ, ಬೀಡಿ ಕಾರ್ಮಿಕರು ಇದ್ದಾರೆ. ದಿನಗೂಲಿ 8–10 ರೂಪಾಯಿಗಳನ್ನು ಪಡೆಯತಕ್ಕವರು ಸುಮಾರು 26 ಲಕ್ಷ ಜನರು ಇದ್ದಾರೆ. ಮಾನ್ಯ ಅಜೀಜ್ ಸೇಟ್ ಅವರು ಮಂತ್ರಿಗಳಾಗಿ ಬಂದಮೇಲೆ ನಾನು ಬೇಗ ಈ ಕೆಲಸವನ್ನು ಮಾಡಿಸಿಬಿಡುತ್ತೇನೆ ಎಂದು ಹೇಳಿದರು. ಮತ್ತೆ ಒಂದು Minimum Wage Advisory Committee ಯನ್ನು ಅವರು ಕಾನ್‌ಸ್ಟಿಟ್ಯೂಟ್ ಮಾಡಿದರು. ಅದರ ಬಗ್ಗೆ ಮಾನ್ಯ ಸದಸ್ಯರಾದ ಕೃಷ್ಣನ್ ಅವರು ಹೇಳಿದ್ದಾರೆ. ಇಲ್ಲಿ ಇವರು ಎಷ್ಟು ದೂರ ಹೋಗಿಬಿಟ್ಟಿದ್ದಾರೆಂದರೆ ಹಿಂದಿನವರು ಯಾವ ರೀತಿಯಲ್ಲಿ ಮಾಡಿದ್ದಾರೋ ಅಷ್ಟನ್ನು ಇವರು ಮಾಡಿದ್ದಾರೆ, ಆದರೆ ಅವರಿಗಿಂತ ಸ್ವಲ್ಪ ಉತ್ತಮವಾಗಿ ಮಾಡಿದ್ದಾರೆಂದು ಹೇಳುತ್ತೇನೆ. It is better balanced. You can always go on improving it. ಎಲ್ಲಾ ವಿಭಾಗದ ಜನರಿಗೂ ಇದರಲ್ಲಿ ಪ್ರಾತಿನಿಧ್ಯ ದೊರೆತಿದೆ. ಆದರೆ ಸ್ಟೇ ವೆಕೇಟ್ ಮಾತ್ರ ಆಗಲಿಲ್ಲ. ಇದರಲ್ಲಿ ಯಾರದು ದೋಷ ಇದೆ, ಎನ್ನುವುದನ್ನು ತಾವು ವಿಚಾರ ಮಾಡಬೇಕಾಗುತ್ತದೆ. ಇನ್ನೂ ಸಹ ಕೆಲವು ಕಾರ್ಮಿಕರಿಗೆ ರಿವೈಸ್ ಮಾಡಿದಂಥ ಮಿನಿಮಂ ವೇಜಸ್ ಸಿಕ್ಕಿಲ್ಲ. ಇದರಿಂದ ಸುಮಾರು 26 ಲಕ್ಷ ಜನರು ಅನುಕೂಲವನ್ನು ಪಡೆಯುವವರು ಇದ್ದರು. ಇದರ ಬಗ್ಗೆ ಡಿಸಿಷನ್ ತೆಗೆದುಕೊಳ್ಳುವುದು ನಿಧಾನವಾಗಿರುವುದರಿಂದ ಈ ಹಣ ಮಾಲೀಕರಿಗೆ ಉಳಿಯುತ್ತದೆ. ಕೂಲಿಯನ್ನು ಜಾಸ್ತಿ ಮಾಡಿದರೆ ಲಕ್ಷಾಂತರ ರೂಪಾಯಿಗಳು ಕಾರ್ಮಿಕರಿಗೆ ಅನುಕೂಲವಾಗುತ್ತದೆ, ಇಲ್ಲದೇಹೋದರೆ ಅನ್ಯಾಯವಾಗುತ್ತದೆ. ಇದರ ಬಗ್ಗೆ ವಿಳಂಬ ಆಗಕೂಡದು. ತಕ್ಷಣ ಇದನ್ನು ತಾವು ಮಾಡಬೇಕಾಗುತ್ತದೆಂದು ಮಾತ್ರ ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇದಾದಮೇಲೆ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ಸ್—ಇವು ಎಕ್ಸ್‌ಪಿಡಿಷಿಯಸ್ ಆಗಿ ಡಿಸ್ಪೋಸ್ ಆಗ ಬೇಕು. ಇವುಗಳು ಹೈಕೋರ್ಟ್‌ನವರೆಗೂ ಹೋದರೆ ವರ್ಷಾನುಗಟ್ಟಲೆ ತೀರ್ಮಾನವಾಗದೆ ಕಾರ್ಮಿಕರಿಗೆ ಬಹಳ ತೊಂದರೆಯಾಗುತ್ತದೆ. 1980 ನೇ ಇಸವಿಯಲ್ಲಿ ಐಟಿಸಿ, ಮಲ್ಟಿನ್ಯಾಷನಲ್ ಕಂಪನಿಗಳು, ಸುಮಾರು 500 ಕೋಟಿ ರೂಪಾಯಿಗಳ ವ್ಯವಹಾರ ಮಾಡತಕ್ಕ ಕಂಪನಿಗಳು, ಹೆಚ್ಚಾಗಿ ಹರಿಜನರು ಇರತಕ್ಕ ಕಂಪನಿ ಗಳು ಯಾರನ್ನೂ ಕೇಳದೆ ಒಂದು ಒಪ್ಪಂದಕ್ಕೆ ಬಂದವು. ಅದರ ವಿರುದ್ಧವಾಗಿ ಕಳೆದ 138 ದಿವಸಗಳಿಂದ ಕಾರ್ಮಿಕರು ಮುಷ್ಕರ ಮಾಡಿ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್‌ನವರು ಅಪೀಲು ಬರದೆ ಕಳೆದ ಎರಡೂವರೆ ವರ್ಷಗಳಿಂದ ಅದು ಏನಾಯಿತೋ ಗೊತ್ತಾಗಲಿಲ್ಲ. ಮೈಕೋದವರು ಅಗ್ರಿಮೆಂಟ್ ಮಾಡಿದ್ದು ಸರಿಯಲ್ಲವೆಂದು ಹೇಳಿದರು, ಟ್ರಿಬ್ಯೂನಲ್‌ಗೆ ಹೋದಾಗ ಅಲ್ಲಿ ಮಾನ್ಯ ಎಫ್. ಎಂ. ಖಾನ್ ಅವರು ಪ್ರೆಸಿಡೆಂಟ್ ಅಲ್ಲ ಎಂದು ಹೇಳಿದರು, ಸಿಂಗಲ್ ಬೆಂಚ್‌ಗೆ ಹೋದಾಗ ಅಲ್ಲಿಯೂ ಸಹ ಖಾನ್ ಅವರು ಪ್ರೆಸಿಡೆಂಟ್ ಅಲ್ಲವೆಂದು ಹೇಳಿದರು. ಇದರಿಂದ ಸುಮಾರು 6,000 ಜನ ಕಾರ್ಮಿಕರಿಗೆ ತೊಂದರೆಯಾಗಿದೆ. ಆಮೇಲೆ ಮೈಕೋದಲ್ಲಿ ಕಾರ್ಮಿಕರಿಂದ ಒಂದೊಂದು ರೂಪಾಯಿಯನ್ನು ಪ್ರತಿಯೊಬ್ಬರಿಂದಲೂ ಪ್ರತಿ ತಿಂಗಳೂ ವಸೂಲು ಮಾಡುತ್ತಿದ್ದಾರೆ. ಅದನ್ನು ಎಂಪ್ಲಾಯೀಸ್ ಅಸೋಸಿಯೇಷನ್‌ಗೆ ಕಳುಹಿಸಿ ಕೊಡಬೇಕು. ಆದರೆ ಯಾರ ರಾಜಕೀಯ ಪ್ರಭಾವವೋ ಏನೋ ಕೆಲಸಗಾರರಿಂದ ವಸೂಲಾದಂಥ ಹಣ ಕೆಲಸಗಾರರ ಸಂಘಕ್ಕೆ ಹೋಗುತ್ತಿಲ್ಲ. ಕಳೆದ 28 ತಿಂಗಳಿಂದಲೂ ಈ ಹಣ ಸಂಘಕ್ಕೆ ಹೋಗುತ್ತಿಲ್ಲ. ಒಂದು ತಿಂಗಳಿಗೆ ಸುಮಾರು 6 ಸಾವಿರ ರೂಪಾಯಿಗಳನ್ನು ಇವರು ವಸೂಲು ಮಾಡುತ್ತಿದ್ದಾರೆ, ಆದರೆ ಹಣವನ್ನು ಸಂಘಕ್ಕೆ ಕಳುಹಿಸಿಕೊಡುತ್ತಿಲ್ಲ. ಹಿಂದಿನ ಸರ್ಕಾರವಿದ್ದಾಗ ಸಂಘಕ್ಕೆ ಚುನಾವಣೆ ನಡೆಸಿ ಅಗ್ರಿಮೆಂಟ್ ಮಾಡೋಣ ಎಂದು ಹೇಳಿದರು. ಕನ್‌ಸಿಲಿಯೇಷನ್ ಮಾಡುವುದನ್ನೂ ಕೂಡ ನಿಲ್ಲಿಸಿದರು. ರಿಟರ್ನಿಂಗ್ ಆಫೀಸರನ್ನು ನೇಮಕ ಮಾಡಿದ ಮೇಲೆ ಎಲೆಕ್ಷನ್ ಮಾಡುವುದು ಬೇಡ ಎಂದು ಹೇಳಿದರು. ಇದಾದ ಮೇಲೆ ಇಲ್ಲಿ ಎಲೆಕ್ಷನ್ ನಡೆಯಲೇ ಇಲ್ಲ. ಕಾರ್ಖಾನೆಯಲ್ಲಿ ವರ್ಕ್‌ಲೋಡ್ ಜಾಸ್ತಿಯಾಗಿ ತುಂಬಾ ಹೆರಾಸ್‌ಮೆಂಟ್ ಆಗುತ್ತಿದೆ, ಇದು ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೂ ಮುಂದುವರಿಯ ಬಾರದು ಎಂದು ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕಾರ್ಮಿಕ ಮಂತ್ರಿಗಳಾದ ಅಜೀಜ್ ಸೇಠ್ ಅವರು ದುಡುಕಿ ಕೆಲವು ಹೇಳಿಕೆಗಳನ್ನು ಕೊಟ್ಟು ಬಿಟ್ಟಿದ್ದರಿಂದ ಕೆಲವು ಅನಾಹುತವಾಗಿವೆ. ಅವರು ಹೇಳಿದರು; ವರ್ಕ್‌ಮನ್ಸ್ ಕಂಪನ್ಸೇಷನ್ನನ್ನು ಲೇಬರ್ ಇಲಾಖೆಯಿಂದ ರೆವಿನ್ಯೂ ಇಲಾಖೆಗೆ ಹಾಕಿಬಿಡುತ್ತೇವೆಂದು. ಇದು ಮಾಡಿದರೆ ಕಾರ್ಮಿಕರ ಗತಿ ದೇವರೇ ಗತಿ. ಇವರು ಈ ರೀತಿಯಾಗಿ ಬಹಳ ಬೇಜವಾಬ್ದಾರಿಯ ಹೇಳಿಕೆಗಳನ್ನು ಕೊಡಬಾರದು. ಹಾಗೆಯೇ ಇವರು ಲೇಬರ್ ಇಲಾಖೆಯಲ್ಲಿ ಒಂದೇ ದಿವಸದಲ್ಲಿ ಬಹಳ ಬದಲಾವಣೆ ಮಾಡಿದರು. ಲೇಬರ್ ಕಮಿಷನರ್ ಅವರನ್ನು, ಲೇಬರ್ ಸೆಕ್ರೆಟರಿಯವರನ್ನು ಮತ್ತು ಇದಕ್ಕೆ ಸಂಬಂಧಪಟ್ಟ ಡೆಪ್ಯೂಟಿ ಸೆಕ್ರೆಟರಿಯವರನ್ನು ಒಂದೇ ದಿವಸದಲ್ಲಿ ಬದಲಾವಣೆ ಮಾಡಿದರು. ಮತ್ತೆ ಈಗ ಆ ಜಾಗಗಳಲ್ಲಿ ಎಲ್ಲಾ ಹೊಸಬರನ್ನು ಹಾಕಿದ್ದಾರೆ. ಈ ಹೊಸಬರಿಗೆ ಲೇಬರ್ ಕಾಯಿದೆ ಕೂಡ ಗೊತ್ತಿಲ್ಲ, ಅವರಿಗೆ ಬೇರೆ ಬೇರೆ ಇಲಾಖೆಯಲ್ಲಿ ಅನುಭವ ಇರಬಹುದು, ಆದರೆ ಈ ಇಲಾಖೆಯಲ್ಲಿ ಅವರಿಗೆ ಏನೂ ಗೊತ್ತಿಲ್ಲದೆ ಕಾರ್ಮಿಕರಿಗೆ ತೊಂದರೆಯಾಗುವ ಪರಿಸ್ಥಿತಿ ಬಂದಿದೆ. ಈ ರೀತಿಯಾಗಿ ಹಿಂದೆ ಎಂದೂ ನಡೆದಿರಲಿಲ್ಲ. ಎಲ್ಲರನ್ನೂ ಒಂದೇ ದಿವಸ ಈ ರೀತಿಯಾಗಿ ಬದಲಾವಣೆ ಮಾಡಿಬಿಟ್ಟರೆ ಹೇಗೆ, 'ದಾಲ್ರಿ' ಎಂದು ಯಾರು ಯಾರನ್ನೋ ಹಾಕಿದರೆ ಹೇಗೆ? ಇದು ಬಹಳ ಬೇಜವಾಬ್ದಾರಿಯಾದ ಕೆಲಸ.

ಶ್ರೀ ಕೆ. ಎಚ್. ರಂಗನಾಥ್.—ದಾಲ್ರಿ ಎಂದು ಯಾರಿಗೆ ಸ್ವಾಮಿ ಅವರು ಹೇಳಿದ್ದುದು?

ಶ್ರೀ ಎಸ್. ಸೂರ್ಯನಾರಾಯಣರಾವ್.—ನಮಗೆ ಆ ರೀತಿಯಾಗಿ ಗಾಳಿ ವರ್ತಮಾನ ಬಂತು. ಇವರು ಹುಬ್ಬಳ್ಳಿಗೆ ಹೋದರು. ಅಲ್ಲಿ ಈ ಯೂನಿಯನ್‌ಗಳಲ್ಲಿ ಹೊರಗಡೆಯವರು ಬರುತ್ತಾರೆ. ಅದರಿಂದಲೇ ಸಮಸ್ಯೆಗಳು ಉದ್ಭವವಾಗುತ್ತವೆ ಎಂದು ಹೇಳಿದ್ದಾರೆ. ಇದರಿಂದ ಜನತಾ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆಯೇ?

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ವೀರೇಂದ್ರ ಪಾಟೀಲರು ಇದೇ ಮಾತನ್ನು ಹೇಳಿದ್ದಾರೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—*

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಸದಸ್ಯರು ಕೇಂದ್ರದ ಒಬ್ಬ ಮಂತ್ರಿಗಳ ಮೇಲೆ ಇಷ್ಟು ಹಗುರವಾಗಿ ಮಾತನಾಡುವುದಕ್ಕೆ ಅವಕಾಶವನ್ನು ತಾವು ಕೊಡಬಾರದು. ಅವರು ಕೇಂದ್ರದಲ್ಲಿ ಮಂತ್ರಿ ಗಳಾಗಿದ್ದಾರೆ.

---

* Expunged as ordered by the Chair.

ಶ್ರೀ ಎಸ್. ಸೂರ್ಯನಾರಾಯಣರಾವ್.—ಅವರ ಬಗ್ಗೆ ನನಗೆ ವೈಯುಕ್ತಿಕವಾಗಿ ಗೌರವ ಇದೆ. ಅವರು ಹೇಳತಕ್ಕ ಮಾತುಗಳನ್ನು ನೋಡಿದಾಗ, ಅವರಿಗೆ ಕಾರ್ಮಿಕರ ಬಗ್ಗೆ ಕಾಳಜಿ ಇಲ್ಲ ಎನ್ನುವುದಕ್ಕೆ ಮಾತ್ರ ಈ ಮಾತನ್ನು ಹೇಳಿದೆ.

ವೈಸ್-ಛೇರ್ಮನ್.—ಸಭೆಯಲ್ಲಿ ಇಲ್ಲದೆ ಇರುವವರ ಬಗ್ಗೆ ಏನೂ ಹೇಳುವುದು ಬೇಡ. ಮಾನ್ಯ ಸದಸ್ಯರು ವೀರೇಂದ್ರ ಪಾಟೀಲರ ಬಗ್ಗೆ ಹೇಳಿದುದನ್ನು ತೆಗೆದುಹಾಕಿಬಿಡಿ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ವೀರೇಂದ್ರ ಪಾಟೀಲ್ ಅವರು ಟ್ರೇಡ್ ಯೂನಿಯನ್‌ಗಳಲ್ಲಿ ಹೊರಗಡೆಯವರು ಇರಕೂಡದು ಎಂದು ಹೇಳಿದ್ದಾರೆ. ಅವರು ಹೇಳಿರುವುದೂ ಮತ್ತು ಮಾನ್ಯ ಅಜೀಜ್ ಸೇಠ್ ಅವರು ಹೇಳಿರುವುದೂ ಒಂದೆ.

ಶ್ರೀ ಕೆ. ಎಚ್. ರಂಗನಾಥ್.—ಈಗ ದೇಶದಲ್ಲಿ ಒಂದು ಅಭಿಪ್ರಾಯ ಇದೆ. ಇಲ್ಲಿ ಯಾರೂ ಸಹ ಪ್ರೊಫೆಷನಲ್ ಟ್ರೇಡ್ ಯೂನಿಯನಿಸ್ಟ್ ಇರಬಾರದು, ಕೆಲಸ ಮಾಡತಕ್ಕವರೇ ಇರಬೇಕು ಎನ್ನುವಂಥ ಅಭಿಪ್ರಾಯಗಳು ಇವೆ. ಅವರು ಯಾವ ಅರ್ಥದಲ್ಲಿ ಹೇಳಿದ್ದಾರೋ, ಮಾನ್ಯ ಕೃಷ್ಣನ್ ಅವರು ಯಾವ ಅರ್ಥದಲ್ಲಿ ಹೇಳಿದರೋ ಗೊತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿರುವ ವಿಷಯ ಎಂದರೆ, ಟ್ರೇಡ್ ಯೂನಿಯನಿಸ್ಟ್ ಅನೇಕ ರಾಜಕೀಯ ಪಕ್ಷಗಳಿಗೆ ಸೇರಿರುವುದರಿಂದ ಇದರ ಬಗ್ಗೆ ದೇಶದಲ್ಲಿ ಒಂದು ರೀತಿಯ ಚರ್ಚೆಗಳು ನಡೆಯುತ್ತಿವೆ. ಇಂಟಕ್ ಇದೆ, ಸಿಐಟಿಯು ಇದೆ, ಎಚ್‌ಎಂಎಸ್ ಇದೆ, ಎಚ್‌ಎಂಪಿ ಇದೆ, ಹೀಗೆ ಎಲ್ಲಾ ಇವೆ. ಕೆಲವರು ಹೊರಗಡೆಯವರು ಇರಬೇಕಾಗುತ್ತದೆ, ಕೆಲವರು ಇರಬಾರದು ಎನ್ನುವ ಬಗ್ಗೆ ಚರ್ಚೆಗಳು ನಡೆದಿವೆ ಅದನ್ನು ಇಲ್ಲಿ ಹೇಳುವುದು ಬೇಡ.

ಶ್ರೀ ಎಂ. ವೀರಪ್ಪ ಮೊಯ್ಲಿ.—ದೇಶದಲ್ಲಿ ಟ್ರೇಡ್ ಯೂನಿಯನ್‌ನವರು ರಾಜಕೀಯವನ್ನಾಗಿ ಬೆಳಸಿಕೊಳ್ಳಬಾರದು. ಇದನ್ನು ಪ್ರೊಫೆಷನಲ್ ಆಗಿ ಇಟ್ಟುಕೊಳ್ಳಬಾರದು ಎನ್ನುವ ವಾದ ಇದೆ. ಇದರ ಬಗ್ಗೆ ಪರವಾಗಿ ಹೇಳುವವರು ಇದ್ದಾರೆ, ವಿರೋಧವಾಗಿ ಹೇಳುವವರು ಇದ್ದಾರೆ. ಆದರೆ ಇಲ್ಲಿ ಯಾರ ಬಗ್ಗೆಯೂ ವೈಯುಕ್ತಿಕವಾಗಿ ದೋಷಾರೋಪಣೆ ಮಾಡತಕ್ಕ ಮೋಟಿವೇಷನ್ ಮಾಡತಕ್ಕ ಪ್ರಸಂಗ ಇಲ್ಲಿ ಬರಬಾರದು.

ಶ್ರೀ ಎಸ್. ಸೂರ್ಯನಾರಾಯಣರಾವ್.—ಮೋಟಿವೇಷನ್ ಎನ್ನುವುದು ನನ್ನ ತಲೆಯೊಳಗೆ ಇರಲಿಲ್ಲ. ಈ ರಾಜ್ಯದಲ್ಲಿ ಟ್ರೇಡ್ ಯೂನಿಯನ್‌ಗಳಲ್ಲಿ ಹೊರಗಡೆಯವರು ಇರಬೇಕು ಎಂದೇನೂ ಇಲ್ಲ. ಕಾರ್ಮಿಕರ ಸಂಘಟನೆಯನ್ನು ದೇಶದಲ್ಲಿ ಬಲಯುತವನ್ನಾಗಿ ಮಾಡಲು ಅಲ್ಲಿರುವವರು ಶಕ್ತರಾಗಿಲ್ಲದೆ ಇದ್ದುದರಿಂದ ಈ ಪ್ರಶ್ನೆ ಬಂದಿದೆ. ಕಾರ್ಮಿಕರ ಕಾನೂನನ್ನು ಮತ್ತು ಇದಕ್ಕೆ ಸಂಬಂಧಪಟ್ಟ ಹಾಗೆ ಸುಪ್ರೀಂ ಕೋರ್ಟಿನ ತೀರ್ಮಾನವನ್ನು ಓದಿ ಅರ್ಥಮಾಡಿಕೊಳ್ಳದೆ ಇರತಕ್ಕವರು ಇರುವುದರಿಂದ, ಮತ್ತು ಇವರ ವಿಚಾರಗಳು ಅನೇಕ ರೀತಿಯಲ್ಲಿ ಕಾಂಪ್ಲಿಕೇಟೆಡ್ ಇರುವುದರಿಂದ ಅವರನ್ನು ಹೊಂದಾಣಿಕೆ ಮಾಡುವುದಕ್ಕೋಸ್ಕರ ಮತ್ತು ವಿಚಾರಗಳನ್ನು ತಿಳಿಯುವುದಕ್ಕೋಸ್ಕರ ಹೊರಗಡೆಯವರು ಬೇಕಾಗುತ್ತದೆ. ಹೊರಗಡೆಯವರು ಇರಬೇಕೆಂದು ಹೇಳುವುದು ಬೇರೆ ಉದ್ದೇಶದಿಂದಲ್ಲ. ಬ್ಯಾಂಕ್‌ನಲ್ಲಿ ಅವರೇ ನೋಡಿಕೊಳ್ಳುತ್ತಾ ಇದ್ದಾರೆ. ಕೇಂದ್ರಸರ್ಕಾರ ಮತ್ತು ರಾಜ್ಯಸರ್ಕಾರಗಳು ಹೊರದೇಶಗಳಲ್ಲಿ ಇದ್ದಹಾಗೆ. ಇಂಡಸ್ಟ್ರೀವೈಸ್ ಆರ್ಗನೈಸೇಷನ್ ಮಾಡಿ, ಕಾರ್ಮಿಕರು ಸಾವಿರಗಟ್ಟಲೆ, ಲಕ್ಷಗಟ್ಟಲೆ ಇದ್ದಾಗ ಅವರಿಗೆ ಬೇಕಾದಂಥ ಎಕ್ಸ್‌ಪರ್ಟ್ಸ್ ಸಹಾಯ ತೆಗೆದುಕೊಂಡು ಹೊರಗಡೆಯವರು ಇಲ್ಲದೆ ಮಾಡಬಹುದು. ಇಂಡಸ್ಟ್ರಿಯಲ್ ಎಸ್ಟೇಟಿನಲ್ಲಿ 50–100 ಜನ ಕಾರ್ಮಿಕರು ಇರತಕ್ಕವರಿಗೆ ಎಲ್ಲಾ ಕಡೆ ಎಕ್ಸ್‌ಪರ್ಟ್ಸ್ ಲಾಯರ್ಸ್ ಇರುತ್ತಾರೆ. ಎನ್‌ಕ್ವೈರಿ ನಡೆಯುವುದು ನಿಧಾನವಾದರೆ ಈ ಸಂಘಟನೆಗಳು ಬೆಳೆಯುವುದಿಲ್ಲ. ಇವತ್ತು ನಿಧಾನದ ಪ್ರವೃತ್ತಿಗೆ ಒಂದು ಮಾತನ್ನು ಹೇಳುತ್ತೇನೆ. ಹೈಕೋರ್ಟಿಗೆ ಲ್ಯಾಂಡ್ ಅಕ್ವಿಸಿಷನ್ ಕೇಸುಗಳಾಗಲಿ, ಟೆನೆನ್ಸಿ ಕೇಸುಗಳಾಗಲೀ, ಲೇಬರರ್ಸ್ ಕೇಸುಗಳಾಗಲೀ ಹೋದರೆ ಬಹಳ ನಿಧಾನವಾಗಿ ನಡೆಯುತ್ತವೆ. ಇದರಿಂದ ಅನೇಕ ಜನಗಳಿಗೆ ಪರಿಹಾರ ಸಿಗುವುದಕ್ಕೆ ಅವಕಾಶವಾಗದೆ ಕಾರ್ಮಿಕರು ಸಂಕಷ್ಟಕ್ಕೆ ಒಳಗಾಗಿದ್ದಾರೆ, ಆದುದರಿಂದ ಹೈಕೋರ್ಟಿನಲ್ಲಿ ಲೇಬರ್ ಇಲಾಖೆಯ ಲೇಬರ್ ಕೇಸುಗಳನ್ನು ಡಿಸ್ಪೋಸ್ ಮಾಡುವುದಕ್ಕೆ ಒಂದು ಬೆಂಚನ್ನು ತಾವು ಕಾನ್‌ಸ್ಟಿಟ್ಯೂಟ್ ಮಾಡಿದರೆ ಬೇಗ ಆಗುತ್ತವೆ, ಪೆಂಡಿಂಗ್ ಇದ್ದರೆ ಬಿಟ್ಟುಬಿಡಲಿ. ಇವತ್ತು ಇದು ಒಂದು ಆದರೆ ಐ.ಟಿ.ಸಿ., ಮೈಕೋದವರ ಸಮಸ್ಯೆಗಳನ್ನು ಬಗೆಹರಿಸಲು ಕಾರ್ಮಿಕರಿಗೆ ತಮ್ಮದೇ ಆದ ಸಂಕಷ್ಟಗಳನ್ನು ಪರಿಹಾರ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ, ಲೇಬರ್ ಕೋರ್ಟಿನಲ್ಲಿ ಮತ್ತು ಟ್ರಿಬ್ಯುನಲ್‌ಗಳಲ್ಲಿ ಆಗಿಂದಾಗ್ಗೆ ಟ್ರಾನ್ಸ್‌ಫರ್ ಮಾಡಿಬಿಡುತ್ತಾರೆ. ಇದಕ್ಕೆ ಯಾರು ಡಿಸ್ಟ್ರಿಕ್ಟ್ ಜಡ್ಜ್, ಪ್ರಿಸೈಡಿಂಗ್ ಆಫೀಸರ್ಸ್ ಬರುವುದಕ್ಕೆ ಇಷ್ಟಪಡುತ್ತಾರೋ ಗೊತ್ತಿಲ್ಲ. ಮೂರು ತಿಂಗಳು, ಆರು ತಿಂಗಳಾದ್ದರೂ ಜಡ್ಜಸ್ ಇಲ್ಲ. ಫಸ್ಟ್, ಸೆಕೆಂಡ್, ಥರ್ಡ್ ಕೋರ್ಟ್‌ಗಳಲ್ಲಿ ಜಡ್ಜಸ್ ಇಲ್ಲ. ಕೆಲಸಗಾರರು ಹೋಗಬೇಕು, ಅಡ್ಜರ್ನ್‌ಮೆಂಟ್ ತೆಗೆದುಕೊಳ್ಳಬೇಕು, ಇದರಿಂದ ಅವರಿಗೆ ತೊಂದರೆಯಾಗಿಬಿಟ್ಟಿದೆ. ಈಗ ಮೂರು ಸಾವಿರ ಡಿಸ್ಪ್ಯೂಟ್ಸ್ ಇದೆ ಎಂದರೆ ಇವತ್ತು ಹೋಗತಕ್ಕ ವೇಗದಲ್ಲಿ ಹೋದರೆ ಎಷ್ಟು

ವರ್ಷ ಈ ಕೇಸುಗಳನ್ನು ತೀರ್ಮಾನ ಮಾಡುವುದಕ್ಕೆ ಆಗಬಹುದು ಯೋಚನೆ ಮಾಡಿ. ಆದುದರಿಂದ ಒಂದು, ಎರಡು ಕೋರ್ಟ್‌ಗಳನ್ನು ಕಾನ್‌ಸ್ಟಿಟ್ಯೂಟ್ ಮಾಡಿ ಈ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ಪಡಬೇಕು. ನಮ್ಮ ಕಾನೂನು ಮಂತ್ರಿಗಳಿದ್ದಾರೆ, ಸಿವಿಲ್ ಕೋರ್ಟ್‌ನಲ್ಲಿ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ವಿಚಾರದಲ್ಲಿ ಇಂಜಕ್ಷನ್ ಕೊಡದ ಹಾಗೆ ಸಂಬಂಧಪಟ್ಟವರಿಗೆ ಹೇಳಬೇಕು, ಇದು ಬೇರೆ ಕಡೆ ಇಲ್ಲ.

SRI A. LAKSHMISAGAR.—This is a right available under the Civil Procedure Code. I cannot take a way that right.

SRI S. SURYANARAYANA RAO.—It is not there. Civil Procedure Code ಇದ್ದಾಗ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ಸ್ ಆಕ್ಟ್ ಇರಲಿಲ್ಲ, ಇದು ನಮ್ಮ ದೇಶಕ್ಕೆ ಸ್ವತಂತ್ರ ಬಂದಮೇಲೆ ಬಂದಿದ್ದು. ಇವತ್ತು ಈ ಕಾನೂನು ಏನಿದೆ ಇದನ್ನು ಜಾರಿಯಲ್ಲಿ ತಂದಿರುವುದರಿಂದ ಕಾನೂನಿನ ಬಿಕ್ಕಟ್ಟು ಜಾಸ್ತಿ ಇರುತ್ತದೆ. ಕಾರ್ಮಿಕರಿಗೆ ಪರಿಹಾರ ಕೊಡದೇ ಹೋದರೆ ಹೇಗೆ ? ಇವತ್ತು ಸ್ಟ್ರೈಕ್ ಮಾಡಿದರೆ ಪೋಲೀಸ್ ವ್ಯಾನ್‌ನಲ್ಲಿ ಹೋಗಿ ಕೆಲಸ ಮಾಡಿಸುತ್ತಾರೆ, ಇವತ್ತು ಕಲ್ಲು ಹೊಡೆದರೆ, ಗಲಾಟೆಯಾದರೆ ಫೈರಿಂಗ್ ಆಗುತ್ತದೆ, ಅದು ಆಗಬಾರದು ಎಂದು ನಾವು ಹೇಳಿದ್ದು. ಒಂದು ಲೀಗಲ್ ಆಗಿ ಪರಿಹಾರ ಸಿಕ್ಕಬೇಕಾದರೆ ಇವತ್ತು ಅದನ್ನು ಇಲ್ಲಿ ಹೇಳಿದರೆ ಮಾತ್ರ ಅರ್ಥವಾಗುತ್ತದೆ. ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟನ್ನು ಕಾರ್ಮಿಕರು ಓದಿರುವುದಿಲ್ಲ, ಆದರಿಂದ ಅವರಿಗೆ ಅರ್ಥವಾಗುವುದಿಲ್ಲ.

SRI A. LAKSHMISAGAR.—It is a matter of civil nature.

SRI S. SURYANARAYANA RAO.—It is not civil nature. Industrial Dispute Act is a special legislation ಅಂದಮೇಲೆ ಕ್ಲೋಷರ್ ಲಾಕೌಟ್ ಗೊತ್ತಿಲ್ಲವೇ ? ಆದಷ್ಟು ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಟ್ಟಿದ್ದೇವೆ ಎಂದು ಹೇಳಿರುವಾಗ ಕ್ಲೋಷರ್, ಲಾಕೌಟ್ ಮಾಡುವುದರ ಬಗ್ಗೆ ಉಗ್ರಕ್ರಮ ತೆಗೆದುಕೊಳ್ಳಬೇಕು. ಅಲ್ಲದೆ ಸರ್ಕಾರದ ಗಮನಕ್ಕೆ ಬಾರದೆ ಕಾರ್ಖಾನೆಗಳು ಬೇನಾಮಿ ಟ್ರಾನ್‌ಜಾಕ್ಷನ್ ಮಾಡತಕ್ಕಂಥಾದ್ದು ನಡೆದಿದೆ. ಹಿಂದುಜಾ ಕಾರ್ಖಾನೆಯಲ್ಲಿ 6–9 ಶಾಖೆಗಳನ್ನು ಇಟ್ಟು ಕೊಂಡಿದ್ದಾರೆ. ಸುಮಾರು 5,000 ಹೆಣ್ಣುಮಕ್ಕಳು ಉಡುಪು ತಯಾರಿಕೆ ಉದ್ಯಮದಲ್ಲಿ ಕೆಲಸ ಮಾಡುತ್ತಾರೆ. ಅಲ್ಲಿ ಸಂಘ ಮಾಡಬೇಕು ಎಂದು ಹೇಳಿ, ಮಾಡಿದಾಕ್ಷಣ ಅದನ್ನು ಕ್ಲೋಸ್ ಮಾಡಿಬಿಟ್ಟರು. ಅದನ್ನು ಇನ್ನೊಬ್ಬರಿಗೆ ಮಾರಿಬಿಟ್ಟರು. ಲೇಬರ್ ಕಮೀಷನರ್ ಕರೆದರೆ, ಇವರು ಯಾರೂ ಕನ್‌ಸಿಲಿಯೇಷನ್‌ಗೆ ಬರುವುದಿಲ್ಲ. ಇಂಡಸ್ಟ್ರಿಯಲ್ ಡಿಸ್ಪ್ಯೂಟ್‌ನಲ್ಲಿ ಕನ್ಸಿಲಿಯೇಷನ್‌ಗೆ ಬರುವುದು ಮ್ಯಾನ್‌ಡೇಟರಿ ಅಲ್ಲ. ಅವರು ಹೋಗದೇಹೋದರೆ ಫೇಲ್ಯೂರ್ ರಿಪೋರ್ಟ್ ಹಾಕುತ್ತಾರೆ. ಅವರು ಹಾಜರಿ ಆಗುವುದಿಲ್ಲ. ಹೀಗಾಗಿ ಇವತ್ತು ಕಾರ್ಮಿಕರು ಅಂತರಪಿಶಾಚಿಯಾಗಿದ್ದಾರೆ. ಹಿಂದೆ ಅನೇಕ ಸಾರಿ ಲೇಬರ್ ಕಮೀಷನರು ಮತ್ತು ಲೇಬರ್ ಸೆಕ್ರೆಟರಿಯವರು ಇದಕ್ಕೆ ಅಮೆಂಡ್‌ಮೆಂಟ್ ತರುತ್ತೇವೆ, ಕಂಪಲ್ಸರಿ ಅಟೆಂಡೆನ್ಸ್ ತರುತ್ತೇವೆ ಎಂದು ಹೇಳಿದ್ದರು. ಆದರೆ ಆ ರೀತಿ ಮಾಡಲಿಲ್ಲ. ಅವರು ಬಾರದೇ ಇದ್ದರೆ ಅಂಥವರಿಗೆ ಪೋಲೀಸರು ಏಕೆ ನೆರವು ಕೊಡಬೇಕು ? ಒಬ್ಬರನ್ನು ಕಾರ್ಖಾನೆಯಲ್ಲಿ ಕೆಲಸದಿಂದ ಕಿತ್ತುಹಾಕಿದರೆ, ಲೇಬರ್ ಕಮೀಷನರ್ ಬರಬೇಕು ಎಂದು ಕರೆದಾಗ ಬರಬೇಕು, ಬರದೇಹೋದರೆ ಹೇಗೆ ? ಆಂಧ್ರದ ಸ್ಟೀಲ್ ಫ್ಯಾಕ್ಟರಿಯಲ್ಲಿ ಮ್ಯಾನೇಜ್‌ಮೆಂಟಿನವರು ಸಿ.ಐ.ಟಿ.ಯು. ಕಮ್ಯೂನಿಸ್ಟ್ ಯೂನಿಯನ್ ಹತ್ತಿರ ವ್ಯವಹಾರ ಮಾಡುವುದಿಲ್ಲ ಎಂದು ಪತ್ರ ಬರೆದಿದ್ದಾರೆ. ಲೇಬರ್ ಕಮೀಷನರ್ ಕರೆದರೂ ಅವರು ಬರಲಿಲ್ಲ. ಪೋಲೀಸ್ ವ್ಯಾನ್‌ನಲ್ಲಿ ಜನರನ್ನು ಕರೆದುಕೊಂಡು ಹೋಗಿ ಫ್ಯಾಕ್ಟರಿ ನಡೆಸಿಕೊಳ್ಳುತ್ತಿದ್ದಾರೆ. ಆ ಸಿ.ಐ.ಟಿ.ಯು.ವನ್ನು ಸರ್ಕಾರ ಮಾನ್ಯತೆ ಮಾಡಿದೆ, ಕೇಂದ್ರ ಸರ್ಕಾರ ಮಾನ್ಯತೆ ಮಾಡಿದೆ. ನಮ್ಮ ಪಕ್ಷ ಕಮ್ಯೂನಿಸ್ಟ್ ಪಕ್ಷ ಮಾನ್ಯತೆ ಪಡೆದಂಥ ಪಕ್ಷ. ಹೀಗಿರುವಾಗ ಮಾಲೀಕರಿಗೆ ಎಷ್ಟು ಧೈರ್ಯ ಇರಬಹುದು. ಜಕನೂರ್ಸ್ ಕಾಲಕ್ಕೆ ಹೊರಟುಹೋಗಿ ಎಂದು ಹೇಳಿದರು. ಅದಕ್ಕೋಸ್ಕರ ಇಲ್ಲಿ ಪೋಲೀಸ್‌ರ ಇಂಟರ್‌ಫಿಯರೆನ್ ಇರಬಾರದು. ಮತ್ತೆ ಲೇಬರ್ ಇಲಾಖೆಯೊಳಗೆ ಸರ್ಕಾರಿ ಎಂಪ್ಲಾಯೀಸ್ ಮಾಡೆಲ್ ಎಂಪ್ಲಾಯೀಸ್ ಆಗಿ ಇರಬೇಕು. ಕೃಷಿ ಕಾರ್ಮಿಕರನ್ನು ಸಂಘಟನೆ ಮಾಡಬೇಕು. ಧಾರವಾಡದಲ್ಲಿ ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿ 400 ಜನ ಕಾರ್ಮಿಕರನ್ನು ಸಂಘಟನೆ ಮಾಡಿ ಮಿನಿಮಂ ವೇಜಸ್ ರೈಸ್ ಮಾಡಲಿಕ್ಕೆ ಬೇಡಿಕೆ ಇತ್ತು, ಮೆರವಣಿಗೆ ತೆರೆದರು, ಇವರು ಸ್ಟ್ರೈಕ್ ಮಾಡಿದ್ದರಿಂದ ಕೆಲಸದಿಂದ ನಿಲ್ಲಿಸಿದರು. ಇಲ್ಲಿ ಡಿಸ್ಪ್ಯೂಟ್ ಇತ್ತು, ರೆಫರ್ ಆಗಲಿಲ್ಲ, ಅಲ್ಲಿ ಕನ್ಸಿಲಿಯೇಷನ್‌ಗೆ ಯಾರೂ ಬರಲಿಲ್ಲ. ಕೊನೆಗೆ ಏಪ್ರಿಲ್ ತಿಂಗಳಲ್ಲಿ ನಾವು ಅದನ್ನು ಫೇಲ್ಯೂರ್ ಮಾಡಿಸಿದೆವು. ಅಗ್ರಿಕಲ್ಚರ್ ಮಿನಿಸ್ಟರ್ ಹತ್ತಿರ ಹೋದರು. Strike will not end. Relationship of the employer and the employee is not a cessation. It is suspended. ಹಾಗೆ ರೆಫರೆನ್ಸ್ ಆಗಿದೆ. ಸಿರಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಒಬ್ಬ ವರ್ಕರನ್ನು ಡಿಸ್‌ಮಿಸ್ ಮಾಡಿದರು. ಹೈಕೋರ್ಟಿನಲ್ಲಿ ಅದು ರೀಇನ್‌ಸ್ಟೇಟ್ ಆಯಿತು, ಆದರೆ ಕೆಲಸ ಇಲ್ಲ. ಅವರಿಗೆ ಏನಾದರೂ ಒಂದು ಪರಿಹಾರ ಕೊಡುವುದಕ್ಕೆ ಅವರ ಮೇಲೆ ಪ್ರಾಸಿಕ್ಯೂಷನ್ ಮಾಡಬೇಕು ಎಂದು ಡಿಪಾರ್ಟ್‌ಮೆಂಟ್‌ಗೆ

ಬರೆಯುತ್ತೇವೆ ಎಂದು ಹೇಳಿದರು. ವೆಟರ್ನರಿ ಡಿಪಾರ್ಟ್‌ಮೆಂಟ್‌ನಲ್ಲಿ ಲೇಬರರ್ಸ್ ಇದ್ದಾರೆ. ಅಲ್ಲೂ ಕೂಡ ಡಿಮ್ಯಾಂಡ್ ಇಟ್ಟರು. ನಾವು ಮಂತ್ರಿಗಳಲ್ಲಿ ಹೇಳಿದೆವು. ಅವರ ಸಮಸ್ಯೆಯನ್ನು ಬಗೆಹರಿಸುತ್ತೇವೆ. ಯುಗಾದಿ ಹಬ್ಬ ಬರುತ್ತಾ ಇದೆ, ಏನೂ ತೊಂದರೆ ಮಾಡಬೇಡಿ ಎಂದು ಹೇಳಿದೆವು. ಲೇಬರರ್ಸ್ ಯುಗಾದಿ ಹಬ್ಬ ಮಾಡಲಿಲ್ಲ, ಇವತ್ತು ಅವರಿಗೆ ಕೆಲಸ ಇಲ್ಲ, ಕನ್ಸಿಲಿಯೇಷನ್‌ಗೆ ಯಾರೂ ಬರುತ್ತಾ ಇಲ್ಲ. ಸರ್ಕಾರಿ ಇಲಾಖೆಗಳಲ್ಲಿ ಈ ವಿಷಯದಲ್ಲಿ ಮಾದರಿಯಾಗಿರಬೇಕು.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ತಾವೇ ಬಗೆಹರಿಸುತ್ತೇವೆ ಎಂದು ರೆಸ್ಪಾನ್ಸಿಬಿಲಿಟಿ ತೆಗೆದುಕೊಂಡಿರಿ, ತಾವು ಬರಲಿಲ್ಲ?

ಶ್ರೀ ಎಸ್. ಸೂರ್ಯನಾರಾಯಣರಾವ್.—ನಾವು ಪ್ರಪೋಸಲ್ ಕೊಡಬಹುದು, ಒಪ್ಪದೇ ಹೋದರೆ ಏನು ಮಾಡುವುದಕ್ಕಾಗುತ್ತದೆ. ಶ್ರೀಮಾನ್ ದೇವೇಗೌಡರು ಗವರ್ನಮೆಂಟ್ ಆರ್ಡರ್ ಬರುತ್ತದೆ ಎಂದು ಹೇಳಿದರು. ನಾನು ಹೇಮಾವತಿಗೆ ಹೋಗಿದ್ದೆ. ಅಲ್ಲಿ ಕೆಲಸಗಾರರಿಗೆ ಸಂಬಳವಿಲ್ಲ. 32 ಸಾವಿರ ಜನ ಕೆಲಸಗಾರರಿದ್ದಾರೆ, ಫೆಸ್ಟಿವಲ್ ಅಡ್ವಾನ್ಸ್ ಇಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಬೆನಕನ ಮದುವೆ ತರಹ ಆಗುವುದಿಲ್ಲ ಎಂದು ನಾನು ಅಂದು ಕೊಂಡಿದ್ದೇನೆ. ಮಾನ್ಯ ಸೂರ್ಯನಾರಾಯಣರಾವ್‌ರವರು ಮಾತನಾಡಿದ್ದು ಅವರು ಹೇಳಿದ್ದನ್ನು ಕೇಳಿದ ಮೇಲೆ ಹಾಗಾಗುತ್ತದೆ ಎನ್ನುವ ಅನುಮಾನ ಬರುತ್ತಾ ಇದೆ.

ಆದರೆ ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಹಿಂದಿನ ಲೇಬರ್ ಕಮೀಷನರ್‌ರವರಿಗೆ ಬರೆದಿದ್ದೆನು, ನಿರ್ದಿಷ್ಟವಾದ ದಿನಾಂಕದ ದಿವಸ ಸಂಬಳ ಕೊಡಬೇಕೆಂದು ಇದ್ದರೂ ಅವರು ಕೊಡುತ್ತಿಲ್ಲ, ಆದುದರಿಂದ ಇದರ ಬಗ್ಗೆ ಸರ್ಕಾರದವರು ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಸರ್ಕಾರಿ ನೌಕರರಿದ್ದಾರೆ, ಅವರು ದುಡಿಮೆಯ ವರ್ಗಕ್ಕೆ ಸೇರಿದವರು, ಅವರಿಗೆ ಕಾರ್ಮಿಕ ಸಂಘ ಮಾಡಿಕೊಳ್ಳುವುದಕ್ಕೆ ಹಕ್ಕಿಲ್ಲ. ಅವರೊಂದು ಅಸೋಸಿಯೇಷನ್ ಮಾಡಿಕೊಂಡಿದ್ದಾರೆ. ಆದರೆ ಪಶ್ಚಿಮ ಬಂಗಾಳದಲ್ಲಿ ಟ್ರೇಡ್ ಯೂನಿಯನ್ ಮಾಡುವುದಕ್ಕೆ ಪರ್ಮಿಷನ್ ಕೊಟ್ಟಿದ್ದಾರೆ, ಅದೇ ರೀತಿಯಾಗಿ ಇಲ್ಲಿಯ ನೌಕರರಿಗೂ ಸಹ ಟ್ರೇಡ್ ಯೂನಿಯನ್ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಪಬ್ಲಿಕ್ ಸೆಕ್ಟಾರ್‌ನಲ್ಲಿ ಪ್ಯಾರಿಟಿ ಆಫ್ ಪೇ ರೈಜ್ ಬಗ್ಗೆ ದೊಡ್ಡ ಹೋರಾಟ ಮಾಡಿದೆವು. 3 ತಿಂಗಳ ಕಾಲ 70 ಸಾವಿರ ಜನ ಕಾರ್ಮಿಕರು ಮುಷ್ಕರ ಹೂಡಿದ್ದು ತಮಗೆಲ್ಲಾ ಗೊತ್ತಿದೆ. ಬಿ.ಎಚ್.ಇ.ಎಲ್.ನಲ್ಲಿ ಏನು ಕೊಡುತ್ತಿದ್ದಾರೆ, ಅದೇ ರೀತಿಯಾಗಿ ಐ.ಟಿ.ಐ., ಮತ್ತು ಪೋರ್ಸಲಿನ್, ಬಿ.ಇ.ಎಲ್. ಮತ್ತು ಎಚ್.ಎ.ಎಲ್.ನಲ್ಲಿರತಕ್ಕವರಿಗೆ ಕೊಡುತ್ತಿಲ್ಲ. ಆದುದರಿಂದ ಮಾನ್ಯ ಕಾರ್ಮಿಕ ಮಂತ್ರಿಗಳವರಲ್ಲಿ ಮತ್ತು ಮಾನ್ಯ ಮುಖ್ಯಮಂತ್ರಿಗಳವರಲ್ಲಿ ಕೇಳಿಕೊಳ್ಳುವುದೇನೆಂದರೆ ಕಾರ್ಮಿಕರಲ್ಲಿ ಇರತಕ್ಕ ಅಸಂತೃಪ್ತಿಯನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಬಿ.ಎಚ್.ಇ.ಎಲ್.ನಲ್ಲಿ ಅರಿಯರ್ಸ್ ಕೂಡ ಕೊಟ್ಟುಬಿಟ್ಟಿದ್ದಾರೆ. ಇದರಿಂದಾಗಿ ಬಾಕಿ ಕಾರ್ಖಾನೆಗಳವರಿಗೆ ಅಸಂತೃಪ್ತಿ ಉಂಟಾಗುವುದಕ್ಕೆ ಕಾರಣವಾಗಿದೆ. ಆ ರೀತಿಯಾಗದ ಹಾಗೆ ನೋಡಿಕೊಳ್ಳಬೇಕೆಂದು ಒತ್ತಾಯ ಮಾಡಬಯಸುತ್ತೇನೆ.

ಇನ್ನು 1982 ನೇ ಇಸವಿಯೊಳಗೆ ಜನವರಿ 19 ನೇ ತಾರೀಖಿನ ದಿವಸ ದೇಶವ್ಯಾಪ್ತಿಯಾಗಿ ಬೆಲೆ ಏರಿಕೆಯ ವಿರುದ್ಧ ಕೃಷಿ ಕಾರ್ಮಿಕರು ಮುಷ್ಕರ ಹೂಡಿದರು. ಆಗ ನಮ್ಮ ರಾಜ್ಯದಲ್ಲಿ ಸಹ ಸುಮಾರು 2, 2½ ಸಾವಿರ ಜನ ಕೃಷಿ ಕಾರ್ಮಿಕರು ಸೆಕ್ಷನ್ ಮುರಿದರು. ಆಗ ಅಂಥವರ ಮೇಲೆ ಎಲ್ಲಾ ಮೊಕದ್ದಮೆ ಹೂಡಲಾಗಿದೆ. ಅದನ್ನು ಇಲ್ಲಿಯವರೆಗೆ ವಾಪಸ್ಸು ತೆಗೆದುಕೊಂಡಿಲ್ಲ. ಅದೇ ರೀತಿಯಾಗಿ ಮಂಗಳೂರಿನಲ್ಲಿ, ಸಕಲೇಶಪುರದಲ್ಲಿ ಪ್ಲಾಂಟೇಷನ್ನಿನ 400 ಜನ ಸೆಕ್ಷನ್ ಮುರಿದರು. ಇವರುಗಳ ಮೇಲೂ ಸಹ ಇವತ್ತಿನ ವರೆಗೆ ಹಾಕಿರತಕ್ಕ ಮೊಕದ್ದಮೆಯನ್ನು ಹಿಂದಕ್ಕೆ ತೆಗೆದುಕೊಂಡಿಲ್ಲ. ಆದುದರಿಂದ ಈಗಲಾದರೂ ತಕ್ಷಣವೇ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಫ್ಯಾಕ್ಟರಿಯಲ್ಲಿ ಇನ್ಸ್‌ಪೆಕ್ಟರ್‌ಗಳೆಂದು ಇಟ್ಟಿದ್ದಾರೆ, ಅವರು ಇದ್ದರೂ ಸಹ ಆಕ್ಸಿಡೆಂಟ್‌ಗಳು ಜಾಸ್ತಿಯಾಗುತ್ತಲೇ ಇವೆ. ಫ್ಯಾಕ್ಟರಿ ಇನ್ಸ್‌ಪೆಕ್ಟರೇಟ್ ನಲ್ಲೂ ಸಹ ಫುಲ್ ಆಫ್ ಕರಪ್ಷನ್ ಆಗುತ್ತಿದೆ. ಬಾಯಿಲರ್ಸ್ ಎಗ್ಸಾಮಿನ್ ಮಾಡಿರುವುದಿಲ್ಲ. ದಾಂಡೇಲಿಯಲ್ಲಿ 3 ಜನ ಸತ್ತು ಹೋಗಿದ್ದಾರೆ. ಒಬ್ಬನನ್ನು ಮೊದಲು ಬಾಯಿಲರ್‌ನಲ್ಲಿ ಇಳಿಸಿದರು. ಅವನು ಮೇಲಕ್ಕೆ ಬರಲಿಲ್ಲ. ಆಗ ಇನ್ನೊಬ್ಬನನ್ನು ಇಳಿಸಿದರು, ಅವನೂ ಮೇಲಕ್ಕೆ ಬರಲಿಲ್ಲ, ಆಗ ಇನ್ನೊಬ್ಬನನ್ನು ಇಳಿಸಿದರು. ಅವನೂ ಮೇಲಕ್ಕೆ ಬರಲಿಲ್ಲ. ಹೀಗೆ ಒಟ್ಟು 3 ಜನ ಇಳಿದವರು ಮೇಲಕ್ಕೆ ಬರದೇ ಸತ್ತುಹೋದರು. ಆಗ ಅಲ್ಲಿ ಸ್ಟ್ರೈಕ್ ಆಯಿತು, ಅನಂತರ ಏನು ಮಾಡಿದರೋ ಗೊತ್ತಿಲ್ಲ. ಅಂತಹ ಅಧಿಕಾರಿಯ ಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ? ಅನಂತರ ನಂದಾರವರು ರಿಪೋರ್ಟನ್ನು ಕೊಟ್ಟಿದ್ದಾರೆ, ಅದರಂತೆ ಎಲ್ಲಾ ಕಡೆಯಲ್ಲೂ ಕಾನೂನು ಜಾರಿಗೆ ಬಂದಿದೆ ಎಂದು ಹೇಳುವುದಾದರೆ ಅದಕ್ಕಿಂತ ಅಸತ್ಯ ಬೇರೆ ಇಲ್ಲ. ಮಾನ್ಯ ಶ್ರೀ ರಘುಪತಿಯವರು ಬೇಕಾದರೆ ನಾಳೆಯೇ ಹೋಗಿ ನೋಡಿಕೊಂಡು ಬರಲಿ. ಎಲ್ಲಿ ಸರಿಯಾಗಿ 8 ಗಂಟೆ ಕೆಲಸ ತೆಗೆದುಕೊಳ್ಳುತ್ತಿದ್ದಾರೆ, ಎಲ್ಲಿ ಓವರ್‌ಟೈಮ್ ಅಲೋಯೆನ್ಸ್ ಕೊಡುತ್ತಿದ್ದಾರೆ? ಮತ್ತು ಎಲ್ಲಿ ಅಟೆಂಡೆನ್ಸ್ ಸರಿಯಾಗಿ ಹಾಕುತ್ತಿದ್ದಾರೆ ಎಂಬುದು ಗೊತ್ತಾಗುತ್ತದೆ,

ಇನ್ಸ್‌ಪೆಕ್ಟರೇಟ್‌ನಲ್ಲಿ ಕರಪ್ಷನ್ ನಡೆಯುತ್ತಿರುವುದೇ ಇದಕ್ಕೆಲ್ಲಾ ಕಾರಣವಾಗಿದೆ. ನಮಗೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾದರೂ ಸಹ ಕಾನೂನು ಮಾಡಿದ್ದರೂ ಸಹ ಎಲ್ಲಿಯೂ ಸಹ ಇನ್ನೂ 8 ಗಂಟೆಗಳ ಕೆಲಸ ಜಾರಿಗೆ ಬಂದಿಲ್ಲ. ಇವತ್ತು ಇನ್ಸ್‌ಪೆಕ್ಟರೇಟ್‌ನಲ್ಲಿರತಕ್ಕವರ ಸಂಪನ್ಮೂಲಗಳು ಎಷ್ಟು ಜಾಸ್ತಿಯಾಗುತ್ತಿವೆ ಎಂಬುದನ್ನೇನಾದರೂ ತಾವು ನೋಡಿದ್ದೀರಾ? ಈಗಾಗಲೇ ಯಾರೋ ಒಬ್ಬರು ಹೆಸರು ಹೇಳಿದರು, ರಾಮದಾಸ್‌ರವರು ಎಷ್ಟು ಆಸ್ತಿಪಾಸ್ತಿ ಮಾಡಿಕೊಂಡಿದ್ದಾರೆ ಎನ್ನುವ ಬಗ್ಗೆ ತಾವು ಎನ್‌ಕ್ವೈರಿ ಮಾಡಿ ನೋಡಿ, ಗೊತ್ತಾಗುತ್ತದೆ. ಇನ್ನು ಸಿಲಿಕೋಸ್ ಬಗೆ ನಾವು ಎಲ್ಲಾ ಮಾಡಿಬಿಟ್ಟಿದ್ದೇವೆಂದು ಹೇಳಿದ್ದಾರೆ, ಪೇಜ್ (2) ರಲ್ಲಿ ನಾವು ಅದರ ಬಗ್ಗೆ ಎಲ್ಲಾ ರೆಕ್ಟಿಫೈ ಮಾಡಿಬಿಟ್ಟಿದ್ದೇವೆಂದು ಹೇಳಿದ್ದಾರೆ. ರೆಕ್ಟಿಫೈ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ತಾವು ಅದನ್ನು ರೆಕ್ಟಿಫೈ ಮಾಡಿದ್ದರೆ ಎಷ್ಟು ಜನರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ಎಷ್ಟು ಜನರನ್ನು ಜೈಲಿಗೆ ಹಾಕಿದ್ದೀರಿ? ದಾಂಡೇಲಿಯಲ್ಲಿ 3 ಜನ ಸತ್ತು ಹೋದರೆ ಅದಕ್ಕೆ ಕಾರಣಕರ್ತರಾಗಿರತಕ್ಕವರ ಮೇಲೆ ಏನು ಕ್ರಮವನ್ನು ಕೈಗೊಂಡಿದ್ದೀರಿ? ಈ ಸದನದಲ್ಲಿ ಒಂದು ಅಭಿಪ್ರಾಯವಿದೆ. ಕಾರ್ಮಿಕರು ಎಂದರೆ ಯಾವಾಗಲೂ ಶಂಖ ಹೊಡೆದುಕೊಳ್ಳುತ್ತಿರುತ್ತಾರೆ ಎನ್ನತಕ್ಕದ್ದು.

ಶ್ರೀ ಕೆ. ಎಚ್. ರಂಗನಾಥ್.—ಸದನದ ಅಭಿಪ್ರಾಯವಿದೆಂದು ತಾವು ಏತಕ್ಕೆ ಆ ಅಭಿಪ್ರಾಯಕ್ಕೆ ಬರುತ್ತೀರಿ? ಯಾರೋ ಕೆಲವರಿಗೆ ಆ ರೀತಿಯಾದ ಅಭಿಪ್ರಾಯ ಇರಬಹುದು, ಆದರೆ ನೀವು ಆ ರೀತಿಯ ಅಭಿಪ್ರಾಯಕ್ಕೆ ಏತಕ್ಕೆ ಬರುತ್ತೀರಿ?

ಶ್ರೀ ಎಸ್. ಸೂರ್ಯನಾರಾಯಣರಾವ್.—ಸಾಧಾರಣವಾಗಿ ಬಹುತೇಕ ಜನಕ್ಕೆ ಆ ಅಭಿಪ್ರಾಯವಿದೆ. ಅದಕ್ಕೇ ನಾನು ಈ ಮಾತನ್ನು ಹೇಳುತ್ತಿರುವುದು.

ಶ್ರೀ ಕೆ. ಎಚ್. ರಂಗನಾಥ್.—ಬಹುತೇಕವಾಗಿ ಇಲ್ಲಿರತಕ್ಕ ಜನಕ್ಕೆ ಆ ರೀತಿಯಾದ ಅಭಿಪ್ರಾಯ ವಿದ್ದಿದ್ದರೆ ಇವೆಲ್ಲಾ ಕಾನೂನು ಇರುತ್ತಲೇ ಇರುತ್ತಿರಲಿಲ್ಲ. ದಾಂಡೇಲಿ ವಿಚಾರ ಹೇಳಿದಿರಿ, ಅವರ ನೋವಿನ ಅಭಿಪ್ರಾಯವನ್ನು ಇಲ್ಲಿ ನೀವು ವ್ಯಕ್ತಮಾಡಬಹುದು. ಆದುದರಿಂದ ತಾವು ಆ ರೀತಿಯಾಗಿ ಎಲ್ಲಾ ಸದನದ ಸದಸ್ಯರ ಅಭಿಪ್ರಾಯವಿದೆ ಎಂದು ಹೇಳುವುದು ಅಷ್ಟು ಸಮಂಜಸವಾದುದಲ್ಲ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಅನೇಕ ಜನ ಆ ಅಭಿಪ್ರಾಯದಲ್ಲಿ ಮಾತನಾಡುತ್ತಿದ್ದಾರೆ. ಇವತ್ತು ಕಾರ್ಮಿಕರು ಸಂಘಟಿತರಾಗಿದ್ದಾರೆ. ಅವರಿಗೆ ಇಲ್ಲಿ ಎಲ್ಲಾ ರೇಷನ್ ಸಿಗುತ್ತದೆ. ಆದರೆ ಹಳ್ಳಿಯ ಜನಕ್ಕೆ ಏನೂ ಸಿಗುತ್ತಿಲ್ಲವೆಂದು ಹೇಳಿದರು. ನಿಜ, ಕೃಷಿ ಕಾರ್ಮಿಕರಿಗೆ ಕೇವಲ 5 ರೂಪಾಯಿಗಳನ್ನು ಕೊಡುತ್ತಿದ್ದೀರಿ, ಆದರೆ ಇವತ್ತು ಮಾಂಸದ ಬೆಲೆ ಕೆ.ಜಿ.ಗೆ 25 ರೂಪಾಯಿ ಆಗಿದೆ, ಎಣ್ಣೆ ಬೆಲೆ 20 ರೂಪಾಯಿಗಳು ಆಗಿದೆ. ಕೃಷಿ ಕಾರ್ಮಿಕರು ಏನು ಮಾಂಸವನ್ನು ತಿನ್ನಬಾರದೇ? ಆದುದರಿಂದ ಅವರಿಗೂ ಸಹ ಕನಿಷ್ಠ ಕೂಲಿ 10 ರೂಪಾಯಿಯನ್ನಾದರೂ ಮಾಡಬೇಕು. ಬಹುತೇಕವಾಗಿ ಹರಿಜನರಿಗೂ ಇದರಿಂದ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ. ಇವತ್ತಿನ ದಿವಸ ಹರಿಜನರು ಉದ್ಧಾರವಾಗ ಬೇಕಾದರೆ ಕೃಷಿ ಕಾರ್ಮಿಕರ ಕೂಲಿಯನ್ನು 10 ರೂಪಾಯಿಗೆ ಏರಿಸಬೇಕೆಂದು ಒತ್ತಾಯ ಮಾಡಬಯಸು ತ್ತೇನೆ. 1980 ನೇ ಇಸವಿಯಲ್ಲಿ ಕೂಲಿಗಾರರ ಸಂಬಳವನ್ನು ಹೆಚ್ಚಿಸಿದಾಗ ಮಾಲೀಕರು ಹೈಕೋರ್ಟಿಗೆ ಹೋಗಿ ಸ್ಟೇ ತಂದರು. ಅದು ಇನ್ನೂ ವೆಕೇಟ್ ಆಗಿಲ್ಲ. ಅದರ ಬಗ್ಗೆ ಇನ್ನೂ ಏನೂ ತೀರ್ಮಾನವಾಗಿಲ್ಲ. ಇವತ್ತು ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ಸಣ್ಣ ಸಣ್ಣ ಕಾರ್ಖಾನೆಗಳ ಮಾಲೀಕರು ಇದ್ದಾರೆ. ಅವರಿಗೆಲ್ಲಾ ಕಾರು ಇದೆ, ಅವರ ಮನೆಯಲ್ಲಿ ಫ್ರಿಜ್ ಇದೆ. ಅದೆಲ್ಲಾ ಇರಬಾರದೆಂದು ಹೇಳುವುದಿಲ್ಲ. ಆದರೆ ಕಾರ್ಮಿಕರಿಗೆ ಕೂಲಿ 6 ರೂಪಾಯಿಗಳನ್ನು ಕೊಡತಕ್ಕದ್ದರ ಬಗ್ಗೆ ಇನ್ನೂ ಅಂತಿಮವಾದ ತೀರ್ಮಾನ ಸರ್ಕಾರದಿಂದ ಆಗಿಲ್ಲ. ಲೇಬರ್ ಇಲಾಖೆಯವರು ಕೋರ್ಟಿಗೆ ಹೋಗಿ ಸ್ಟೇ ಆಗಿರತಕ್ಕದ್ದನ್ನು ವೆಕೇಟ್ ಮಾಡಿಸುವುದಕ್ಕೆ ಆಗಲಿಲ್ಲವೇ? ಆದುದರಿಂದ ಈಗಲಾದರೂ ಜನತಾ ಸರ್ಕಾರದವರು ಇದರ ಬಗ್ಗೆ ಆದಷ್ಟು ಬೇಗ ತೀವ್ರವಾದ ಕ್ರಮವನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಕಾರ್ಮಿಕ ಇಲಾಖೆಯಲ್ಲಿ ಇರುವವರಿಗೆ ತರಬೇತಿ ಕೊಡಬೇಕು ಮತ್ತು ಹೆಚ್ಚು ಸಿಬ್ಬಂದಿ ವರ್ಗವನ್ನು ಕೊಡಬೇಕು. ಅವರಿಗೆ ಶೀಘ್ರಲಿಪಿಗಾರರು ಇರುವುದಿಲ್ಲ. ಆ ವ್ಯವಸ್ಥೆ ಯನ್ನುಮಾಡಿ ಕೊಡಬೇಕು. ಅವರು ಬೇರೆ ಬೇರೆ ಇಲಾಖೆಗಳಿಗೆ ಹೋಗಿದ್ದರೆ ಡೆಪ್ಯುಟಿ ಕಮೀಷನರ್ ಮತ್ತೊಂದು ಮಗದೊಂದು ಆಗುತ್ತಿದ್ದರು. ಅವರಿಗೆ ಡಿಪಾರ್ಟ್‌ಮೆಂಟಲ್ ಹೆಡ್ ಇಲ್ಲವೆಂಬ ನಿರಾಶಾ ಭಾವನೆ ಇರಬಾರದು. ಇವತ್ತಿನ ದಿವಸ ಇಲಾಖೆ ದೊಡ್ಡದಾಗುತ್ತಿದೆ. ಅವರಿಗೆ ಬೇಕಾದ ಅನುಕೂಲತೆ ಗಳನ್ನು ಕೊಟ್ಟು ಅವರಲ್ಲಿರತಕ್ಕ ನ್ಯೂನತೆಗಳನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಸಾರಿಗೆ ಇಲಾಖೆ ವಿಚಾರದಲ್ಲಿ ಹೇಳುವುದಾದರೆ, ನನ್ನ ಕ್ಷೇತ್ರದಲ್ಲಿ ಬಸ್ ಇಲ್ಲ. ಈ ಬಗ್ಗೆ ಮಂತ್ರಿಗಳಿಗೆ ಕಾಗದ ಬರೆದಾಗ ಹೊಸ ಬಸ್ ಬರಲಿ ಹಾಕುತ್ತೇವೆಂದು ಹೇಳಿದರು. ಇದುವರೆಗೆ ಹಾಕಿಲ್ಲ. ನಮ್ಮ ವರ್ತೂರು ಕ್ಷೇತ್ರದಲ್ಲಿ ಸುಮಾರು 2 ಲಕ್ಷ ಜನರಿದ್ದಾರೆ; ಆದರೆ ಅಲ್ಲಿ ಒಂದು ಶಾಲೆ ಇಲ್ಲ. ಅವರೆಲ್ಲ ಶಾಲೆಗಾಗಿ ಇಲ್ಲಿಗೇ ಬರಬೇಕಾಗಿದೆ. ಆದ್ದರಿಂದ, ಮಕ್ಕಳ ಸಲುವಾಗಿ ಒಂದು ಪ್ರತ್ಯೇಕ ಬಸ್ಸನ್ನು ಓಡಿಸಿ,

ಇಲ್ಲದಿದ್ದರೆ ಜನರು ಮಕ್ಕಳನ್ನು ತುಳಿದುಹಾಕುತ್ತಾರೆಂದು ಹೇಳಿದೆ. ಅದನ್ನೂ ಮಾಡಲಿಲ್ಲ. ಹೆಚ್.ಎ.ಎಲ್.ನಲ್ಲಿ ಬೇರೆ ಕಾರ್ಖಾನೆಯ ಮಕ್ಕಳನ್ನು ಸೇರಿಸುವುದಿಲ್ಲ. ಅವರು ಬಸ್ಸಿಗಾಗಿ ಬಹಳ ಕಷ್ಟಪಡುತ್ತಿದ್ದಾರೆ. ಪೀಣ್ಯದ ಸುತ್ತಮುತ್ತಲ ಹಳ್ಳಿಯ ಜನರು ತರಕಾರಿಗೆ ಬರಬೇಕೆಂದರೆ ಪೀಣ್ಯಕ್ಕೆ ಬರಬೇಕು. ಅಲ್ಲಿ ಕೂಡ ಬಸ್ಸಿನ ವ್ಯವಸ್ಥೆ ಇಲ್ಲ; ಅಲ್ಲಿ ಸಹ ಬಸ್ಸುಗಳ ಸೌಕರ್ಯವನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ. ಇಲಾಖೆಯಲ್ಲಿ ನಡೆಯತಕ್ಕ ಕರಪ್ಷನ್ ಬಗ್ಗೆ ಮತ್ತು ಪರ್ಚೇಸ್ ಬಗ್ಗೆ ಬಹಳ ನಿಗ ಇಡಬೇಕು. ಹೊಸದನ್ನು ಕೊಂಡುಕೊಂಡು ಬಂದೆ ಎಂದರೆ ಹಳೆಯದನ್ನೇ ಸೇರಿಸಿರುತ್ತಾರೆ. ಅದರಿಂದ ಇಲಾಖೆಯಲ್ಲಿ ಸೋರಿಕೆ ಬರುತ್ತದೆ. ಇದರಿಂದ ಕೆಲ ಜನರು ಎಷ್ಟೆಷ್ಟು ದುಡ್ಡು ಮಾಡಿದ್ದಾರೆಂಬುದು ಗೊತ್ತಾಗುತ್ತದೆ. ಸಾರಿಗೆ ಸಂಸ್ಥೆಯಲ್ಲಿ ಮೇಂಟೆನೆನ್ಸ್ ಸರಿಯಿಲ್ಲ. ಜನರು ಪ್ರಯಾಣ ಮಾಡುತ್ತಿದ್ದಾಗ ಮಧ್ಯದಲ್ಲಿ ಬಸ್ ಕೆಟ್ಟರೆ ರಿಪೇರಿ ಮಾಡುವುವಕ್ಕೆ ಬೇಕಾದ ಟೂಲ್ಸ್ ಇರುವುದಿಲ್ಲ. ವರ್ಕ್‌ಷಾಪ್‌ನಲ್ಲಾದರೂ ರಿಪೇರಿ ಮಾಡುವುವಕ್ಕೆ ಒಳ್ಳೆಯ ಮೆಕ್ಯಾನಿಕ್ ಇರುವುದಿಲ್ಲ. ಅವರಿಗೆ ಸರ್ಕಾರಿ ಸಂಬಳ ಕೊಡುತ್ತೇವೆಂದರೆ ಆಗುವುದಿಲ್ಲ. ಕೋಟಿ ಗಟ್ಟಲೆ ವ್ಯವಹಾರ ಮಾಡುವ ಸಂಸ್ಥೆಯಲ್ಲಿ ಒಂದು ಒಳ್ಳೆಯ ವರ್ಕ್‌ಷಾಪ್ ಇಲ್ಲ. ಇಲಾಖೆಯಲ್ಲಿ ಆಗತಕ್ಕ ಸೋರಿಕೆಯನ್ನು ಕಡಿಮೆ ಮಾಡಬೇಕು ಮತ್ತು ಉತ್ತಮವಾದ ವರ್ಕ್‌ಷಾಪ್‌ಗಳನ್ನು ಮಾಡಬೇಕು; ಹಾಗೂ ಪ್ರಯಾಣಿಕರಿಗೆ ಆಗತಕ್ಕ ತೊಂದರೆಯನ್ನು ತಪ್ಪಿಸಬೇಕು. ಬಸ್ಸುಗಳನ್ನು ರಾಷ್ಟ್ರೀಕರಣ ಮಾಡಿದ್ದೇವೆ ಅಂದಮೇಲೆ ಬಿ.ಟಿ.ಎಸ್. ಬಸ್ಸುಗಳಿಗೆ ಏತಕ್ಕೆ ಒಂದು ವ್ಯವಸ್ಥೆ ಮಾಡಲಿಲ್ಲವೆಂದು ಕೇಳುತ್ತೇನೆ. ಇವತ್ತಿನ ದಿವಸ ನೂರಾರು ಬಸ್ಸುಗಳನ್ನು ಹಾಗೇ ನಿಲ್ಲಿಸಿ ಅವೆಲ್ಲ ತುಕ್ಕು ಹಿಡಿಯುತ್ತಿವೆ. ಏತಕ್ಕೆ ಅವುಗಳಿಗೆ ಒಂದು ವ್ಯವಸ್ಥೆ ಮಾಡಲಿಲ್ಲ? ಬೇರೆಯವರಾದರೂ ಅವುಗಳ ಉಪಯೋಗ ಮಾಡಿಕೊಳ್ಳುತ್ತಿದ್ದರು. ಅವುಗಳ ಟೈರುಗಳೆಲ್ಲ ಹಾಳಾಗುತ್ತಿವೆ. ಇದು ಜನಗಳ ದುಡ್ಡು ಎಂಬುದು ನಿರ್ಲಕ್ಷ್ಯವಾಗಿದೆ. ಇದರ ಬಗ್ಗೆ ಸರ್ಕಾರ ತೀವ್ರ ಕ್ರಮ ಕೈಗೊಳ್ಳಬೇಕು. ಇಂಡಸ್ಟ್ರಿಯಲ್ ಪಿಲ್‌ಫರೇಜ್ ಕಡಿಮೆಯಾಗಬೇಕಾದರೆ ತಮಿಳ್ನಾಡಿನ ತರಹ ಇನ್‌ಸೆಂಟಿವ್ ಮಾಡುವುದಕ್ಕೆ ಸಾಧ್ಯವೆ? ನಮ್ಮಲ್ಲಿ ಡ್ರೈವರ್‌ಗಳಿಗೆ ಒಳ್ಳೆಯ ಬಸ್ ಕೊಡಬೇಕಾದರೆ ದುಡ್ಡು ಕೊಡಬೇಕು; ಇನ್ಸ್‌ಪೆಕ್ಟರ್‌ಗಳಿಗೆ ಮಾಮೂಲು ಕೊಡಬೇಕು. ಅದನ್ನೆಲ್ಲ ಅವರು ಎಲ್ಲಿಂದ ಕೊಡಬೇಕು? ಅದನ್ನು ಪಿಲ್‌ಫರೇಜ್ ಮಾಡಿ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಬ್ರೇಕ್ ಇಲ್ಲದ ಗಾಡಿ ಕೊಡುತ್ತಾರೆ. ಇವತ್ತಿನ ದಿವಸ ಸಮಾಜವಾದಿ ಮುಖಂಡರು ಏನು ಮಂತ್ರಿಗಳಾಗಿದ್ದಾರೆ ಅವರು ಇದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ವರ್ಕ್‌ಷಾಪುಗಳನ್ನು ಜಾಸ್ತಿ ಮಾಡಿ ಅಲ್ಲಿ ಒಳ್ಳೆಯ ಮೆಕ್ಯಾನಿಕ್‌ನ್ನು ಇಡತಕ್ಕ ವ್ಯವಸ್ಥೆ ಮಾಡಬೇಕು. ನೂರಾರು–ಸಾವಿರಾರು ಬಸ್ಸುಗಳನ್ನು ಕೊಂಡು ಓಡಿಸುವವರು ಸರಿಯಾದ ರಿಪೇರಿ ಮಾಡದಿದ್ದರೆ ಹೇಗೆ? ಆದ್ದರಿಂದ ಅವಶ್ಯವಿದ್ದ ಕಡೆಗಳಲ್ಲೆಲ್ಲ ರಿಪೇರಿ ವ್ಯವಸ್ಥೆ ಮಾಡಿ ಹಳ್ಳಿಗಳಿಗೆ ಒಳ್ಳೆಯ ಬಸ್ಸುಗಳನ್ನು ಹಾಕಿ. ಇವತ್ತಿನ ದಿವಸ ಹಳ್ಳಿಗಳಿಗೆ ಕೆಟ್ಟ ಬಸ್ಸುಗಳನ್ನು ಹಾಕುತ್ತಿದ್ದಾರೆ. ಹಳ್ಳಿಯ ಜನರನ್ನು ತಾತ್ಸಾರ ಭಾವನೆಯಿಂದ ನೋಡಬಾರದು. ಅಲ್ಲಿಗೆ ಒಳ್ಳೆಯ ಬಸ್ಸುಗಳನ್ನು ಹಾಕಬೇಕು. ಡಕೋಟ ಬಸ್ಸುಗಳನ್ನು ಹಾಕುವುದಕ್ಕೆ ಅವಕಾಶ ಕೊಡದೆ ದಕ್ಷ ರೀತಿಯಲ್ಲಿ ಕೆ.ಎಸ್.ಆರ್.ಟಿ.ಸಿ. ಯನ್ನು ನಡೆಸುವಂಥ ವ್ಯವಸ್ಥೆ ಮಾಡಬೇಕು. ಹಾರ್ಟಿಕಲ್ಚರ್ ಇಲಾಖೆ ಬಗ್ಗೆ ಇದುವರೆಗೆ ಯಾರೂ ಮಾತನಾಡಿಲ್ಲ.

ಶ್ರೀ ಎಂ. ರಘುಪತಿ.—ಎಲ್ಲರಿಗೂ ಹಾಲು ಹಣ್ಣು ಕೊಟ್ಟು ಸಮಾಧಾನ ಮಾಡಿದ್ದಾರೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಇವತ್ತಿನ ದಿವಸ ಹಾಲೂ ಕೂಡ ಸರಿಯಾಗಿ ಸರಬರಾಜಾಗುತ್ತಿಲ್ಲ. ಅದರಲ್ಲಿ ಏನೇನೋ ಬೆರಕೆಯಾಗಿ ಬರುತ್ತದೆ. ಇದರ ಬಗ್ಗೆ ಸರ್ಕಾರ ನಿಗಾ ಇಡಬೇಕು. ಅದರಲ್ಲಿ ಟೋನಿಂಗ್ ಜಾಸ್ತಿಯಾಗುತ್ತಿದೆ.

ಒಬ್ಬ ಮಾನ್ಯ ಸದಸ್ಯರು.—ಕೆಲವು ಸಂದರ್ಭಗಳಲ್ಲಿ ಹುಳಿ ಹಾಲನ್ನು ಸರಬರಾಜು ಮಾಡತಕ್ಕದ್ದು ಇದೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಹೌದು, ಹಾಲು ಹುಳಿ ಬಂದಿರುತ್ತದೆ. ಇದಕ್ಕೆ ಕಾರಣವನ್ನು ಕಂಡುಹಿಡಿಯಬೇಕು. ಕೆಲವು ಸಾರಿ ಹಾಲನ್ನು ಟೋನ್ ಮಾಡಿ ಕೊಡುತ್ತಾರೆ.

ಶ್ರೀ ಆರ್. ಎಲ್. ಜಾಲಪ್ಪ.—ನೀವು ಕೊಡುವ 2·80 ಪೈಸೆಗೆ ಹುಳಿ ಹಾಲು ಎನ್ನುತ್ತೀರಿ.

ಶ್ರೀ ಕೆ. ಹೆಚ್. ರಂಗನಾಥ್.—ಜಾಲಪ್ಪನವರಿಗೆ ಕೊಳ್ಳುವ ಬೆಲೆ ಜಾಸ್ತಿಯಾದರೂ ಕೂಡ ಕೊಟ್ಟು ಕೊಳ್ಳುತ್ತಾರೆ. ಸೂರ್ಯನಾರಾಯಣರಾವ್‌ರವರು ಹಾರ್ಟಿಕಲ್ಚರ್ ಮತ್ತು ಲೇಬರ್ ಇಲಾಖೆಯ ಬಗ್ಗೆ ಹೇಳಿದ್ದನ್ನು ಕೇಳಿದ್ದೇನೆ. ಮಂತ್ರಿಗಳ ಮನೆಯಲ್ಲಿ ನೀರು ಹಾಕುತ್ತಾರಲ್ಲ ಅವರಿಗೆ ಎಷ್ಟು ಸಂಬಳ ಸಿಗುತ್ತದೆಂದು ಕೇಳಿದ್ದೀರಾ? ಅವರಲ್ಲಿ ಖಾಯಂ ಆಗದೆ ಇರುವವರು ಎಷ್ಟು ಮಂದಿ ಇದ್ದಾರೆಂಬುದು ಗೊತ್ತೆ?

ಶ್ರೀ ಆರ್. ಎಲ್. ಜಾಲಪ್ಪ.—ನನ್ನ ಅಭಿಪ್ರಾಯ ಏನೆಂದರೆ, ಹಸುವಿಗೆ ಹೊಟ್ಟೆ ತುಂಬ ಹಾಕಿದರೆ ತಾನೇ ಅದು ಹಾಲು ಕೊಡುವುದು. ನೀವು ಒಂದು ಲೀಟರಿಗೆ 2·80 ಕೊಟ್ಟರೆ ಅದರಲ್ಲಿ ಹಸುವಿಗೆ ಏನು ಹಾಕುತ್ತಾರೆ?

ಶ್ರೀ ವೈ. ರಾಮಕೃಷ್ಣ.—ಹಾಗಾದರೆ 4 ರೂಪಾಯಿಗಳನ್ನು ಗೊತ್ತುಮಾಡಿ. ಹಿಂದಿನ ಸರ್ಕಾರ ಇದ್ದಾಗ ಮೇವಿನ ಬೆಲೆ ಜಾಸ್ತಿಯಾಗಿದೆ ಎಂದು ಎರಡು ಸಾರಿ ರೇಟನ್ನು ರಿವೈಸ್ ಮಾಡಿದೆ. ನೀವು ಬೇಕಾದರೆ ಇನ್ನೂ ಜಾಸ್ತಿ ಮಾಡಿ.

ಶ್ರೀ ಕೆ. ಹೆಚ್. ರಂಗನಾಥ್.—ಬೂಸಾವನ್ನು ಹೇಗೆ ಡಿಸ್‌ಪೋಸ್ ಮಾಡಬೇಕೆಂದು ಆದೇಶ ಕೊಡದೆ ಇರುವುದರಿಂದ ಫಂಗಸ್ ಡೆವಲಪ್ ಆಗಿದೆ; ಮತ್ತು ಅದು ಖರ್ಚಾಗದೆ ಇರುವ ಪರಿಸ್ಥಿತಿಗೆ ಬಂದಿದೆ ಎಂದು ಮಾಣಿಕ್‌ರಾವ್ ಪಾಟೀಲರು ಹೇಳುತ್ತಿದ್ದರು. ನೀವು ಏತಕ್ಕೆ ಇದರ ಬಗ್ಗೆ ನಿಮ್ಮ ಸಹೋದ್ಯೋಗಿಗಳಿಗೆ ಹೇಳಬಾರದು ? ಅದನ್ನು ಏತಕ್ಕೆ ಮಿಲ್‌ನಲ್ಲಿ ಇಟ್ಟುಕೊಂಡು ಕೂರಬೇಕು ? ಏತಕ್ಕೆ ಅದನ್ನು ಮಾರಾಟ ಮಾಡಲು ಅನುಮತಿ ಕೊಡಬಾರದು ? ಇವತ್ತಿನ ದಿವಸ ಬೂಸಾ ಎಲ್ಲಿ ಸಿಗುತ್ತಿದೆ ?

ಶ್ರೀ ಆರ್. ಎಲ್. ಜಾಲಪ್ಪ.—ಗೊತ್ತಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಜಾಲಪ್ಪನವರು ನನ್ನಂತೆ ಸಾಮಾನ್ಯ ಸದಸ್ಯರಾಗಿದ್ದರೆ ಗೊತ್ತಿಲ್ಲವೆಂಬುದನ್ನು ಒಪ್ಪುತ್ತಿದ್ದೆ. ಆದರೆ ಅವರು ಮಂತ್ರಿ ಮಂಡಲದ ಸದಸ್ಯರಾಗಿ ಇವತ್ತು ಮಿಲ್ಲಿನಲ್ಲಿರತಕ್ಕ ಬೂಸಾವನ್ನು ಮಾರಾಟ ಮಾಡಲು ಅನುಮತಿ ಕೊಡಬೇಕೆಂಬುದು ಗೊತ್ತಿಲ್ಲವೆಂದರೆ ಹೇಗೆ ? ಅದರಿಂದ ಮಿಲ್‌ನವರಿಗೂ ನಷ್ಟ ಮತ್ತು ಬಳಕೆದಾರರಿಗೂ ಹಾನಿ. ಇದನ್ನು ತಾವು ವಿಚಾರ ಮಾಡಬೇಕಾಗುತ್ತದೆ. ಇದನ್ನು ತಾವು ವಿಚಾರ ಮಾಡದೆ ನನ್ನಂಥ ಸಾಮಾನ್ಯ ಸದಸ್ಯರು ವಿಚಾರ ಮಾಡುವುದಕ್ಕಾಗುತ್ತದೆಯೇ ?

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಕಾರ್ಮಿಕರಿಗೆ ತುಟ್ಟಿಭತ್ಯ ಕೊಡುವುದು ಸೂಚ್ಯಂಕದ ಮೇಲೆ. ನಮ್ಮ ರಾಜ್ಯದಲ್ಲಿ ಸೂಚ್ಯಂಕದಲ್ಲಿ ಬಹಳ ಮೋಸ ಇದೆ. ಇದನ್ನು ಗೊತ್ತು ಮಾಡುವವರು ಕೇಂದ್ರ ದವರು; ನಮ್ಮವರು ಅದಕ್ಕೆ ಅಸಿಸ್ಟ್ ಮಾಡುತ್ತಾರೆ. ಬೊಂಬಾಯಿಯಲ್ಲಿ 27 ಪಾಯಿಂಟ್ ಮಾಡಿದರು, ಡೆಲ್ಲಿಯದನ್ನು ತಿದ್ದುಪಡಿ ಮಾಡಿದರು. ಬೆಂಗಳೂರಿನಲ್ಲಿ 17 ಪಾಯಿಂಟ್ ಮಾಡಿ ಕೊನೆಗೆ 16 ಪಾಯಿಂಟ್ ಎಂದರು. ಅದರಲ್ಲಿ ನಮ್ಮ ರಾಜ್ಯಕ್ಕೆ ಬಹಳ ಮೋಸ ಮಾಡುತ್ತಿದ್ದಾರೆ. ಇದರಲ್ಲಿ ಇಂಡೆಕ್ಸ್ ವ್ಯವಸ್ಥೆ ಏನಿದೆ ಅದನ್ನು ಸರಿಪಡಿಸುವುದಕ್ಕೆ ನಮ್ಮ ರಾಜ್ಯದ ಒಂದು ಕಮಿಟಿ ಮಾಡಿ ಅದನ್ನು ಕಮಿಟಿಯವರು ವಿಚಾರ ಮಾಡಬೇಕು. ಇದರಿಂದ ಕಾರ್ಮಿಕರಿಗೆ ಲಕ್ಷಾಂತರ ರೂಪಾಯಿಗಳ ಮೋಸವಾಗುತ್ತಿದೆ. ಸರ್ಕಾರ ಏನು ಒಂದು ಪಾಯಿಂಟ್‌ನ್ನು ಗೊತ್ತುಮಾಡಿದೆ, ಏನು ಒಂದು ಪ್ರಮಾಣವನ್ನು ಗೊತ್ತುಮಾಡಿದೆ ಅದನ್ನು ಸರಿಯಾಗಿ ಲೆಕ್ಕಾಚಾರ ಮಾಡಿದರೆ 30–40 ಪಾಯಿಂಟ್ ಒಬ್ಬೊಬ್ಬ ಕಾರ್ಮಿಕರಿಗೆ ಜಾಸ್ತಿ ಸಿಗುತ್ತದೆ. 40 ಪಾಯಿಂಟ್ ಎಂದರೆ 60 ರೂಪಾಯಿಗಳು ಆಗುತ್ತದೆ. ದಯವಿಟ್ಟು ನಿಮ್ಮ ಕಾಲದಲ್ಲಿ ಇಂಡೆಕ್ಸ್ ತಿದ್ದುಪಡಿ ಮಾಡಿ ಬೊಂಬಾಯಿ ಮತ್ತು ಬಂಗಾಳದಲ್ಲಿ ಹಾಗೂ ಡೆಲ್ಲಿಯಲ್ಲಿ ಮಾಡಿದಂತೆ ಮಾಡಿ. ಇದಕ್ಕೆ ಒಂದು ಕಮಿಟಿ ಮಾಡಿ ಅನ್ಯಾಯವಾಗಿದ್ದರೆ ಅದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಪೊಲಿಟಿಕಲ್ ವಿಲ್ ಇಟ್ಟುಕೊಂಡು ಯಾವ ಬಂಡವಾಳಶಾಹಿ ಶಕ್ತಿಗಳಿಗೂ ಒಳಗಾಗದೆ ಕಾರ್ಮಿಕರು ಮತ್ತು ಸಾರ್ವಜನಿಕರು ಈ ಸರ್ಕಾರಕ್ಕೆ ಮತ ನೀಡಿ ಅಧಿಕಾರದಲ್ಲಿರುವುದಕ್ಕೆ ಏನು ಅವಕಾಶ ಮಾಡಿಕೊಟ್ಟಿದ್ದಾರೆ ಅದನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಡಿ. ಸೋಮಪ್ಪ (ಸಕಲೇಶಪುರ).—ಸನ್ಮಾನ್ಯ ಅಧ್ಯಕ್ಷರೇ, ಸಭೆಯ ಮುಂದಿಟ್ಟಿರತಕ್ಕ ಸಾರಿಗೆ, ಪಶುಸಂಗೋಪನೆ, ತೋಟಗಾರಿಕೆ, ವಕ್ಫ್ ಮತ್ತು ಕಾರ್ಮಿಕ ಇಲಾಖಾ ಬೇಡಿಕೆಗಳನ್ನು ನಾನು ವಿರೋಧ ಮಾಡುತ್ತಾ ಕೆಲವು ಸೂಚನೆಗಳನ್ನು ಕೊಡಲು ಬಯಸುತ್ತೇನೆ. ಮಾನ್ಯ ಸೂರ್ಯನಾರಾಯಣರಾಯರು ಹೇಳಿದ ಹಾಗೆ ಇವತ್ತು 5 ಬೇಡಿಕೆಗಳನ್ನು ಒಟ್ಟಿಗೆ ತಂದಿದ್ದಾರೆ. ಅದರಲ್ಲೂ ಸಾರಿಗೆ ಇಲಾಖೆ ಬಹಳ ಮಹತ್ತರ ವಾದುದು. ಕಂಡಕ್ಟರ್ ಬಸ್ಸಿನಲ್ಲಿ ಹೆಚ್ಚು ಜನರನ್ನು ತುಂಬಿದ್ದರೆ ಏನಯ್ಯಾ ದನ ತುಂಬಿದ ಹಾಗೆ ತುಂಬಿದ್ದೀಯಾ ಎಂದು ಹೇಳುತ್ತೇವೆ. ಆ ತರಹ ಎಲ್ಲಾ ಬೇಡಿಕೆಗಳನ್ನೂ ಇಲ್ಲಿ ತುಂಬಿದ್ದಾರೆ. ಆದರ ಜೊತೆಗೆ ದನದ ಖಾತೆ ಯನ್ನೂ ಇದರಲ್ಲಿ ಸೇರಿಸಿದ್ದಾರೆ. ಸಾರಿಗೆ, ಕಾರ್ಮಿಕ, ವಕ್ಫ್, ತೋಟಗಾರಿಕೆ ಹೀಗೆ ಎಲ್ಲ ಬೇಡಿಕೆಗಳನ್ನೂ ದನ ತುಂಬಿದ ಹಾಗೆ ಒಂದೇ ದಿವಸ ತುಂಬಿದ್ದಾರೆ. ಮೂರು ಜನ ಈ ಇಲಾಖೆಯ ಮಂತ್ರಿಗಳು ಸಾಲಾಗಿ ಕುಳಿತಿದ್ದಾರೆ. ಅದು ನಮ್ಮ ಪುಣ್ಯ ಎಂದು ಹೇಳಬಹುದು. ಸಾರಿಗೆ ಮಂತ್ರಿಗಳಾದ ಮಾನ್ಯ ಪ್ರಕಾಶ್ ಅವರು ಪ್ರಕಾಶಮಾನವಾಗಿ ಕಾಣುತ್ತಾರೆ. ಆದರೆ ರಸ್ತೆಯಲ್ಲಿ ಓಡುವಂತಹ ಬಸ್ಸು ಒಂದೂ ಪ್ರಕಾಶಮಾನವಾಗಿ ಕಾಣುವುದಿಲ್ಲ. ಇದು ಶೋಚನೀಯವಾದ ವಿಚಾರ. ತಾವು ಅಧಿಕಾರಕ್ಕೆ ಬಂದು 8 ತಿಂಗಳಾಯಿತು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಕೆಂಪು ಬಣ್ಣದ ಬದಲು ಬಸ್ಸಿಗೆ ಬಿಳಿ ಬಣ್ಣ ಹೊಡೆದರೆ ಪ್ರಕಾಶ ಮಾನವಾಗಿ ಕಾಣುತ್ತದೆ.

ಶ್ರೀ ಜೆ. ಡಿ. ಸೋಮಪ್ಪ.—ಅಧಿಕಾರಕ್ಕೆ ಬಂದು 8 ನೇ ತಿಂಗಳು ತುಂಬಿ 9 ನೇ ತಿಂಗಳಿಗೆ ಬೀಳುತ್ತಿದೆ. 9ನೇ ತಿಂಗಳಲ್ಲಿ ಏನಾಗುತ್ತದೋ ಗೊತ್ತಿಲ್ಲ.

ಶ್ರೀ ಹೆಚ್. ಗಂಗಾಧರನ್.—ಹೆರಿಗೆಯಾಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ಅಬಾರ್ಷನ್ ಆದರೂ ಆಗಬಹುದು.

ಶ್ರೀ ಜೆ. ಡಿ. ಸೋಮಪ್ಪ.—ಅದನ್ನು ಕಾದು ನೋಡಬೇಕು. ಒಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅವರು ಕೊಟ್ಟಿರತಕ್ಕ ಅಂಕಿಅಂಶದ ಪ್ರಕಾರ ಬಸ್ಸುಗಳು ಜಾಸ್ತಿಯಾಗಿವೆ; ರೂಟುಗಳು ಜಾಸ್ತಿಯಾಗಿವೆ; ಅದೇ ರೀತಿ ಲುಕ್ಸಾನೂ ಜಾಸ್ತಿಯಾಗಿದೆ. ಪ್ರಯಾಣಿಕರ ಸಂಖ್ಯೆ ಮೂರೂವರೆ ಲಕ್ಷ ಜಾಸ್ತಿ ಯಾಗಿದೆ. ಒಂದು ದಿವಸಕ್ಕೆ ಇಪ್ಪತ್ತಾರೂವರೆ ಲಕ್ಷ ಜನ ಮೊದಲು ಪ್ರಯಾಣ ಮಾಡುತ್ತಿದ್ದರೆ ಇವತ್ತು

4876 ಬಸ್ಸುಗಳಲ್ಲಿ 30 ಲಕ್ಷ ಜನ ಪ್ರಯಾಣ ಮಾಡುತ್ತಿದ್ದಾರೆ. ಇಷ್ಟು ಜನ ಪ್ರಯಾಣ ಮಾಡಿದರೂ ಕೂಡ ನಷ್ಟ ಮಿತಿಮೀರಿ ಹೋಗಿದೆ. ನಮ್ಮ ಜಿಲ್ಲೆ ರಾಷ್ಟ್ರೀಕೃತವಾದ ಜಿಲ್ಲೆ. ಅಲ್ಲಿ ಸಾರಿಗೆ ಬಸ್ಸನ್ನು ಸಾಧ್ಯವಾದ ಮಟ್ಟಿಗೆ ಹಾಕಿದ್ದಾರೆ. ಅದರ ಬಗ್ಗೆ ನಾನು ಅಂಕಿಸಂಖ್ಯೆಯನ್ನು ಇಟ್ಟುಕೊಂಡಿದ್ದರೂ ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮಳೆಗಾಲದಲ್ಲಿ ಕಲೆಕ್ಷನ್ ಇಲ್ಲ ಎಂದು ಬಸ್ಸುಗಳನ್ನು ನಿಲ್ಲಿಸುತ್ತಾರೆ. ಈಗ 17 ಕೋಟಿ ನಷ್ಟವಾಗಿರುವಾಗ ಇನ್ನು 17 ಲಕ್ಷ ರೂಪಾಯಿ ನಷ್ಟ ಆದರೂ ಚಿಂತೆಯಿಲ್ಲ, ಮಳೆಗಾಲದಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಓಡಾಡತಕ್ಕ ಬಸ್ಸುಗಳನ್ನು ನಿಲ್ಲಿಸಬಾರದು. ಗ್ರಾಮಾಂತರ ಪ್ರದೇಶದ ಜನರಿಗೆ ಸೌಕರ್ಯ ಮಾಡಿಕೊಡಬೇಕು. ಮಂತ್ರಿಗಳು ಬೆಂಜ್ ಕಾರು ಮತ್ತು ಹೆಲಿಕ್ಯಾಪ್ಟರ್‌ನಲ್ಲಿ ತಿರುಗಾಡುವಾಗ ಹಳ್ಳಿ ಜನರು ಮುರುಕಲು ಬಸ್ಸಿನಲ್ಲಿ ತಿರುಗಾಡಿದರೆ ಏನಾಗುತ್ತದೆ? ಲುಕ್ಸಾನಾದರೂ ಚಿಂತೆಯಿಲ್ಲ, ಒಂದೊಂದು ಬಸ್ಸುಗಳು ಇರತಕ್ಕ ಗ್ರಾಮಾಂತರ ಪ್ರದೇಶಗಳಲ್ಲಿ ಯಾವುದೇ ಕಾರಣದಿಂದಲೂ ಬಸ್ಸುಗಳನ್ನು ನಿಲ್ಲಿಸಕೂಡದು ಎಂದು ಹೇಳುತ್ತೇನೆ. ಮಂಗಳೂರು ಮುಂತಾದ ಕಡೆಗಳಿಗೆ ಏಳೆಂಟು ಜನರಿದ್ದರೂ ಬಸ್ಸುಗಳನ್ನು ಓಡಿಸುತ್ತಾರೆ. ಆದರೆ ಮಳೆಗಾಲದಲ್ಲಿ ಹಳ್ಳಿ ಜನ ತಿರುಗಾಡತಕ್ಕ ಬಸ್ಸುಗಳನ್ನು ನಿಲ್ಲಿಸುತ್ತಾರೆ. ಮಂಗಳೂರಿಗೆ ಏಳೆಂಟು ಜನರನ್ನು ಕರೆದುಕೊಂಡು ಹೋದರೆ ಲುಕ್ಸಾನಾಗುವುದಿಲ್ಲವೆ? ಜನರು ಓಡಾಡುವವರಿದ್ದಾಗ ಏತಕ್ಕೆ ಬಸ್ಸುಗಳನ್ನು ಓಡಿಸಬಾರದು? ಮಾನ್ಯ ಲಿನ್ ಅವರು ಈ ಸಂಸ್ಥೆಯ ಅಧ್ಯಕ್ಷರಾಗಿದ್ದಾಗ ಈ ಸಂಸ್ಥೆ ಸ್ವಲ್ಪ ಉತ್ತಮ ಸ್ಥಿತಿಗೆ ಬಂದಿತ್ತು ಎಂದು ನಾನು ಕೇಳಿದ್ದೇನೆ. ಮಾನ್ಯ ಧನಂಜಯಕುಮಾರ್ ಅವರು ಮಾತನಾಡುವಾಗ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳು ಅಲ್ಲಿರಕೂಡದು ಎಂದು ಹೇಳಿದರು. ಅವರು ಆ ರೀತಿ ಏತಕ್ಕೆ ಹೇಳಿದರೋ ಗೊತ್ತಿಲ್ಲ. ಉತ್ತಮ ಅಧಿಕಾರಿಗಳನ್ನು ಸಂಸ್ಥೆಯಲ್ಲಿ ಮುಂದುವರೆಸಿಕೊಂಡು ಸಂಸ್ಥೆಯನ್ನು ಚೆನ್ನಾಗಿ ನಡೆಸುವುದು ಒಳ್ಳೆಯದು. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಇವತ್ತು ಬೆಳಗ್ಗೆ ಬಸ್ಸಿನಲ್ಲಿ ಕುಳಿತರೆ ಮಧ್ಯಾಹ್ನ ಅಥವಾ ಸಾಯಂಕಾಲ ಊರಿಗೆ ಹೋಗುತ್ತಿದ್ದೆವು. ಈ ಸರ್ಕಾರ ಬಂದಮೇಲೆ ಇವತ್ತು ಬೆಳಗ್ಗೆ ಬಿಟ್ಟ ಬಸ್ಸು ನಾಳೆ, ನಾಳೆ ಬಿಟ್ಟದ್ದು ನಾಡಿದ್ದು ಹೀಗೆ ಹೋಗುತ್ತಿದೆ. ಜುಲೈ 12ನೇ ತಾರೀಖು ನನ್ನ ಮಗಳನ್ನು ಇಂಜಿನಿಯರಿಂಗ್ ಕಾಲೇಜಿಗೆ ಸೇರಿಸಬೇಕಾಗಿತ್ತು. ತುಮಕೂರಿಗೆ ಹೋದೆ. 5–45ಕ್ಕೆ ಚನ್ನಕೇಶವ ಎಕ್ಸ್‌ಪ್ರೆಸ್ ಎಂದು ಸರ್ಕಾರಿ ಬಸ್ಸು ಹಾಕಿದ್ದಾರೆ. ನಾನು 5–15ಕ್ಕೇ ಸ್ಟ್ಯಾಂಡಿಗೆ ಹೋದೆ. ಸ್ಟ್ಯಾಂಡ್‌ನಲ್ಲಿರುವವರು 5–30ಕ್ಕೆ ಬಸ್ಸು ಬರುತ್ತದೆ ಎಂದು ಹೇಳಿದರು. ನಾವು 7 ಗಂಟೆಯಾದರೂ ಬಸ್ಸು ಬರದಿದ್ದಾಗ ಟಿ.ಸಿ.ಯನ್ನು ಹೋಗಿ ಕೇಳಿದೆವು. ಇಲ್ಲ ಸ್ವಾಮಿ ಬಸ್ಸು ಹೊರಟುಹೋಗಿರಬೇಕು ಎಂದು ಹೇಳಿದ.

ಶ್ರೀ ಜೆ. ಎಚ್. ಪಟೇಲ್.—5–30ಕ್ಕೆ ಬರುತ್ತದೆ ಎಂದು ಹೇಳಿದ್ದ ಅವನು. ಆದರೆ ಯಾವ ದಿನ ಎಂದು ಹೇಳಿದರೇ?

ಶ್ರೀ ಜೆ. ಡಿ. ಸೋಮಪ್ಪ.—ನಾನು 5–15ಕ್ಕೇ ಬಂದಿದ್ದೆ, ಬಸ್ಸು ಬರಲಿಲ್ಲ ಎಂದು ಹೇಳಿದೆ. ಹಾಗಾದರೆ ಬರಬಹುದು ಇರಿ ಎಂದು ಹೇಳಿದ. 8 ಗಂಟೆಯಾದರೂ ಬರಲಿಲ್ಲ. ಜನ ಕಾಯುತ್ತಿದ್ದರು. ಬೆಂಗಳೂರಿಗೆ ಬರೋಣ ಎಂದುಕೊಂಡು ಬೆಂಗಳೂರು ಸ್ಟ್ಯಾಂಡಿಗೆ ಬಂದೆ. ಅಲ್ಲಿ ಬಂದರೆ ಶೃಂಗೇರಿಯಿಂದ ಬರುವ ಬಸ್ಸು ಗುಬ್ಬಿ ಹತ್ತಿರ ಕೆಟ್ಟುಹೋಗಿದೆ ಎಂದು ಹೇಳಿದರು. ಆಮೇಲೆ ಭಟ್ಕಲ್ ಬಸ್ಸು ಬಂತು. ಅದರಲ್ಲಿ 8 ಗಂಟೆಗೆ ಕುಳಿತು 11 ಗಂಟೆಗೆ ಬೆಂಗಳೂರಿಗೆ ಬಂದೆ. ಕೆಲವು ಬಸ್ಸಿನಲ್ಲಿ ಫ್ರೀ ಪಾಸ್ ಇದೆ ಎಂದು ಹೇಳಿದರೆ ಯಾವ ಪಾಸು ಸ್ವಾಮಿ ತೋರಿಸಿ ಎಂದು ಹೇಳುತ್ತಾನೆ. ಸ್ಟಾಫ್ ಪಾಸಾ, ಎಂ.ಎಲ್.ಎ. ಪಾಸಾ ಎಂದು ಕೇಳುತ್ತಾನೆ. ನಾನು ಸ್ಟಾಫ್ ಆಗಿದ್ದರೆ ಯಾವುದಾದರೂ ಬಸ್ಸಿನಲ್ಲಿ ಕಂಡಕ್ಟರ್ ಕೆಲಸ ಮಾಡಿದ್ದರೂ ಒಳ್ಳೆ ಮಜಾಯಿಕ್ ಫ್ಲೋರ್ ಮನೆ ಕಟ್ಟಿಸಿಕೊಂಡಿರಬಹುದಾಗಿತ್ತು. ನಾನು ಎಂ.ಎಲ್.ಎ. ಎಂದು ಹೇಳಿದರೂ ಅವನಿಗೆ ಅನುಮಾನ. ನಾವು ನೋಡಬೇಕು ತೋರಿಸಿ ಎಂದು ಹೇಳುತ್ತಾನೆ. ಏನು ಮಾಡೋಣ? ನಾನು ಮಾನ್ಯ ಅಧ್ಯಕ್ಷರಿಗೆ ಕೇಳಿಕೊಳ್ಳುತ್ತೇನೆ, ಎಂ.ಎಲ್.ಎ.ಗಳಿಗೆ ಏನಾದರೂ ಸಿಂಬಲ್ ಕೊಡಿ. ಅಥವಾ ಬೇರೆ ಯಾವುದಾದರೂ ಏರ್ಪಾಟು ಮಾಡಿ.

ಶ್ರೀ ಎಂ. ಪಿ. ಪ್ರಕಾಶ್.—ಪಶುಸಂಗೋಪನಾ ಇಲಾಖೆಯಲ್ಲಿ ಸಾಲ ಕೊಟ್ಟು ಕೊಂಡ ದನಗಳಿಗೆ ಮುದ್ರೆ ಹಾಕುತ್ತಾರೆ. ಆ ತರಹ ಪದ್ಧತಿಯನ್ನು ಜಾರಿಗೆ ತಂದರೆ ಯಾವ ಶಾಸಕರೂ ಒಪ್ಪಿಕೊಳ್ಳುವಂತೆ ಕಾಣುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸೋಮಪ್ಪನವರು ಒಪ್ಪಿಕೊಂಡರೆ ಆಗಬಹುದು.

ಶ್ರೀ ಎ. ಎಸ್. ಆಚಾರ್ಯ.—ಅಂದರೆ ಜೀವಾವಧಿ ಪಾಸ್ ಕೊಡುವುದೇ?

ಶ್ರೀ ಜೆ. ಡಿ. ಸೋಮಪ್ಪ.—ಎಂದರೆ ಜೀವಾವಧಿ ಕೊಡುತ್ತೀರಾ? ಇನ್ನು ಆರ್.ಟಿ.ಒ. ಕಛೇರಿಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಇಲ್ಲಿ ಮಾಮೂಲು ಕೊಡುವುದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಅಲ್ಲಿ ಬ್ರೋಕರ್ಸ್ ಬೇರೆ ಇರುತ್ತಾರೆ. ಅವರಿಗೂ ಮಾಮೂಲು ಕೊಡಬೇಕು. ಆರ್.ಟಿ.ಒ.ಗೆ ಬೇರೆ ಮಾಮೂಲು ಕೊಡಬೇಕು. ಆರ್.ಟಿ.ಒ. ಗಳಂತೂ ಹೊಸಬರಾದರೆ ಸುಲಿಗೆ ಮಾಡುತ್ತಾರೆ. ಈಗ ಹೊಸ ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಒಂದು ಕ್ರಮವನ್ನು ಜಾರಿಗೆ

ತರಲಿ. ಪರ್ಮಿಟ್‌ಗೆ ಇಷ್ಟು ಕೊಡಬೇಕು, ಆರ್.ಟಿ.ಒ.ಗೆ ಇಷ್ಟು ಕೊಡಬೇಕು, ಬ್ರೇಕ್ ಇನ್ಸ್‌ಪೆಕ್ಟರ್‌ಗೆ ಇಷ್ಟು ಕೊಡಬೇಕು, ಪರ್ಮಿಟ್ ಕ್ಲರ್ಕ್‌ಗೆ ಇಷ್ಟು ಕೊಡಬೇಕು, ಡಿಸ್‌ಪ್ಯಾಚ್ ಕ್ಲರ್ಕ್‌ಗೆ ಇಷ್ಟು ಕೊಡಬೇಕೆಂದು ಪಟ್ಟಿ ಮಾಡಲಿ. ಆಗ ಯಾರೂ ಮಾತನಾಡುವುದಕ್ಕೆ ಆಗುವುದಿಲ್ಲ. ಆಗ ಅದರ ಪ್ರಕಾರ ಕೊಡುತ್ತಾರೆ.

ಮಾನ್ಯ ಸಭಾಪತಿ.—ಹಳೇ ಪದ್ಧತಿ ಹೇಗೆ ಇತ್ತು ?

ಶ್ರೀ ಜೆ. ಡಿ. ಸೋಮಪ್ಪ.—ಆಗ ಮುಗುಮ್ಮಾಗಿತ್ತು. ಈಗ ಓಪನ್ ಆಗಿದೆ, ಅಷ್ಟೇ. ಇವತ್ತು ಬ್ರೇಕ್ ಇನ್ಸ್‌ಪೆಕ್ಟರ್‌ರವರು ಕಂಡಲ್ಲಿ ಲಾರಿಗಳನ್ನು ನಿಲ್ಲಿಸಿ ಟ್ಯಾಕ್ಸ್ ಕಟ್ಟಿದ್ದೀಯಾ, ಅದು ತೆಗೆದುಕೊಂಡು ಬಾ, ಇದು ತೆಗೆದುಕೊಂಡು ಬಾ ಎಂದು ತೊಂದರೆ ಕೊಡುತ್ತಾರೆ. 10 ನೇ ತಾರೀಖು ಟ್ಯಾಕ್ಸ್ ಕಟ್ಟಲು ಕೊನೆಯ ದಿನ ಇದ್ದರೆ 11 ನೇ ತಾರೀಖು ಬೇಕಾದರೆ ನಿಲ್ಲಿಸಿ ಕೇಳಲಿ. ಅದು ಬಿಟ್ಟು ಮಧ್ಯೆ ಮಧ್ಯೆ ಏಕೆ ತೊಂದರೆ ಕೊಡಬೇಕು ? ಈ ಪದ್ಧತಿಯನ್ನು ಸಾಧ್ಯವಾದಷ್ಟು ನಿಲ್ಲಿಸದೇಹೋದರೆ ಜನರಿಗೆ ಕಿರುಕುಳ ಕೊಟ್ಟಹಾಗೆ ಆಗುತ್ತದೆ. ಉದಾಹರಣೆಗೆ ಹೇಳುವುದಾದರೆ ಇದು ಯಾವ ಮಟ್ಟಕ್ಕೆ ಹೋಗಿದೆ ಎಂದರೆ ನನ್ನ ಮಗನೇ ಒಬ್ಬ ಲೈಸೆನ್ಸ್ ತೆಗೆದುಕೊಳ್ಳಬೇಕಾಗಿತ್ತು. ಆತನಿಗೆ 21 ವರ್ಷವಾಗಿದ್ದು ಆ ಬಗ್ಗೆ ಆತನಿಗೆ 21 ವರ್ಷ ಆಗಿದೆ, ಆತ ಲೈಸೆನ್ಸ್ ಪಡೆಯಬೇಕೆಂದು ಅಪೇಕ್ಷೆ ಪಟ್ಟಿರುವುದರಿಂದ ಆತನಿಗೆ ಲೈಸೆನ್ಸ್ ಕೊಡುವ ಬಗ್ಗೆ ಮುಂದಿನ ಕ್ರಮ ಕೈಗೊಳ್ಳತಕ್ಕದ್ದು ಎಂದು ಶಿಫಾರಸ್ಸು ಪತ್ರ ಕೊಟ್ಟಿದ್ದೆ. ಆತ ಅದನ್ನು ತೆಗೆದುಕೊಂಡು ಹೋದಾಗ ಅಲ್ಲಿ ಆರ್.ಟಿ.ಒ. ಇರಲಿಲ್ಲವಂತೆ. ಬ್ರೇಕ್ ಇನ್ಸ್‌ಪೆಕ್ಟರ್ ಇಂಚಾರ್ಜ್ ಇದ್ದರಂತೆ. ಆತ ಲೆಟರ್ ತೆಗೆದುಕೊಂಡು ಹೋಗಿ ಕೊಟ್ಟಾಗ ಅವನು "ಏನು ಎಂ.ಎಲ್.ಎ. ಲೆಟರ್ ತಂದ್ರೆ ಪುಕ್ಕಟ್ಟೆ ಲೈಸೆನ್ಸ್ ಸಿಕ್ಬಿಡ್ತದೆ ಎಂದು ತಿಳಿದುಕೊಂಡ್ರಾ" ಎಂದು ಹೇಳಿದನಂತೆ. ಆಗ ನನ್ನ ಮಗ "ನಾನು ಎಂ.ಎಲ್.ಎ. ಮಗ. ನಾನು ವಯಸ್ಸಿನ ಬಗ್ಗೆ ಪತ್ರ ತಂದಿದ್ದೇನೆ" ಎಂದು ಹೇಳಿದಾಗ ಆತ ತಣ್ಣಗಾಗಿ, ಹಣ ತುಂಬಲೂ ಅವನೇ ಮುಂದಾದಾಗ ನನ್ನ ಮಗನೇ ಅದು ಬೇಡವೆಂದು ತಾನೇ ಹೋಗಿ ಹಣ ಕಟ್ಟಿ ಬಂದಿದ್ದಾನೆ. ನಾನು ಅವನಿಗೆ ಯಾವುದೇ ಶಿಫಾರಸ್ಸು ಅಲ್ಲಿ ಉಪಯೋಗಿಸಬೇಡವೆಂದು ಹೇಳಿದ್ದೆ. ಒಂದು ಇಲಾಖೆಯಲ್ಲಿ ಈ ರೀತಿ ಆದರೆ ಹೇಗೆ ಸ್ವಾಮಿ ? ಇವತ್ತು 15 ವರ್ಷದವರಿಗೆ ಲೈಸೆನ್ಸ್ ಕೊಟ್ಟಿರುವುದನ್ನು ನಾನು ತೋರಿಸಲೇ ಸ್ವಾಮಿ ? ಎಂದರೆ ಶಿಫಾರಸ್ಸು ಬೇಡ, ಎಂ.ಎಲ್.ಎ. ಲೆಟರ್ ಬೇಡ, ಹಣ ಒಂದು ಇದ್ದರೆ ಸಾಕು ಎಂದು ಹೇಳಿದರೆ, ಇಂತಹ ಒಂದು ಇಲಾಖೆ ಏಕೆ ಇರಬೇಕು ? ಆರ್.ಟಿ.ಒ. ಇಲಾಖೆಯಲ್ಲಿ ನೀವು ಬಂದಮೇಲೆ ಇದೆಲ್ಲಾ ಆಗುತ್ತಿದೆ ಎಂದು ಅಲ್ಲ. ನೀವು ಬಂದಮೇಲೆ ಸ್ವಲ್ಪ ಜಾಸ್ತಿಯಾಗಿದೆ ಎಂದು ಹೇಳಬಲ್ಲೆ. ಇದು ಮಾಮೂಲು ಕಡಿಮೆ ಆದರೆ ಪರವಾಯಿಲ್ಲ ಆದರೆ ಜಾಸ್ತಿ ಆಗುವುದು ಬೇಡ ಎಂದು ನಾನು ಹೇಳುತ್ತೇನೆ. ಮಾಮೂಲು ಏನು ಇದೆಯೋ ಅದನ್ನು ತೆಗೆದುಕೊಳ್ಳಲಿ.

ಶ್ರೀ ಎಂ. ರಘುಪತಿ.—ಅವರಿಗೆ ಅನುಭವ ಇದ್ದು ಮಾತನಾಡುತ್ತಿದ್ದಾರೆಯೋ ಅಥವಾ ಅನುಭವ ಇಲ್ಲದೆ ಮಾತನಾಡುತ್ತಿದ್ದಾರೆಯೋ ?

ಶ್ರೀ ಎಂ. ರಘುಪತಿ.—ಅವರ ಅಭಿಪ್ರಾಯದಲ್ಲಿ ಒಂದು ಲಿಸ್ಟ್ ಮಾಡಲಿ ಎಂದು ಅಭಿಪ್ರಾಯವೇ ?

ಶ್ರೀ ಜೆ. ಡಿ. ಸೋಮಪ್ಪ.—ಅದು ಅವರಿಗೆ ಗೊತ್ತು ಬಿಡಿ.

ಶ್ರೀ ಎಂ. ರಘುಪತಿ.—ನಿಮ್ಮ ಚರಿತ್ರೆ ನಮಗೆ ಗೊತ್ತು ಬಿಡಿ.

ಶ್ರೀ ಜೆ. ಡಿ. ಸೋಮಪ್ಪ.—ಇನ್ನು ನಿಮಗೆ ಹಳ್ಳಿಗಳ ಕಡೆ ಬಸ್‌ಗಳನ್ನು ಓಡಿಸುವುದಕ್ಕೆ ಆಗುವುದಿಲ್ಲ. ಇವತ್ತು ಫ್ಯಾಕ್ಟರಿಗಳವರಿಗೆ ಬಿ.ಟಿ.ಎಸ್. ಬಸ್‌ಗಳನ್ನು ಕೊಟ್ಟಿದ್ದೀರಿ. ದಯಮಾಡಿ ಅದನ್ನು ರದ್ದು ಮಾಡಿ ಹಳ್ಳಿಗಾಡಿನ ಜನರಿಗೆ ಹೆಚ್ಚಿನ ಒಂದು ಸೌಕರ್ಯವನ್ನು ಒದಗಿಸತಕ್ಕದ್ದು ತಾವು ಮಾಡಬೇಕೆಂದು ಹೇಳಿ ಇನ್ನು ಹಿಂದೆ ಏನು ಕಾಂಟ್ರಾಕ್ಟ್ ಕ್ಯಾರೇಜ್ ಬಸ್‌ಗಳನ್ನು ನ್ಯಾಷನಲೈಸ್ ಮಾಡಿದ್ದೀರಿ ಅವರ ಹಣವನ್ನು ಒಂದೇ ಸಾರಿಗೆ ಕೊಡಬೇಕೆಂದು ಈ ಸದನದಲ್ಲಿ ತೀರ್ಮಾನ ಆಗಿದೆ ಎಂದು ಕಾಣುತ್ತದೆ. ಆದರೆ ಇದರ ಬಗ್ಗೆ ಇನ್ನೂ ಆರ್ಡರ್ ಆಗಿಲ್ಲ. ಅವುಗಳನ್ನು ನ್ಯಾಷನಲೈಸ್ ಮಾಡಿ 7 ವರ್ಷಗಳು ಆಗಿದ್ದು ಕೆಲವು ಕೇಸ್‌ಗಳಲ್ಲಿ ಕೋರ್ಟ್‌ನಲ್ಲಿ ತೀರ್ಮಾನ ಕೂಡಾ ಆಗಿದ್ದು ಸರ್ಕಾರ ಇನ್ನೂ ಅಪೀಲ್ ಹಾಕಿಲ್ಲ. ಏನು ತೀರ್ಮಾನ ಆಗಿವೆ ಅವಕ್ಕೆ ಒಂದೇ ಗಂಟಿನಲ್ಲಿ ಹಣ ಕೊಡಬೇಕೆಂದು ಹೇಳಿದ್ದಾರೆ. ಮತ್ತೆ ಪಶು ಸಂಗೋಪನೆ ಇಲಾಖೆ ಬಗ್ಗೆ ಹೇಳಬೇಕೆಂದರೆ ನಮ್ಮ ಪಶು ಸಂಗೋಪನಾ ಮಂತ್ರಿಗಳು ಬಹಳ ಸಾಧುವಾಗಿ ಪಶುವಿನ ರೀತಿಯಲ್ಲಿ ಇದ್ದಾರೆ.

ಡಾ || ವಿ. ಎಸ್. ಆಚಾರ್ಯ.—ಡ್ಯಾಮೇಜಿಂಗ್ ಸ್ಟೇಟ್‌ಮೆಂಟ್.

ಶ್ರೀ ಜೆ. ಡಿ. ಸೋಮಪ್ಪ.—ನಾನು ಆ ರೀತಿ ಹೇಳಿದ್ದಲ್ಲ. ಹಾರ್ಟಿಕಲ್ಚರ್ ಎಂದರೆ, ಹಣ್ಣು ಹಂಪಲು. ಇವತ್ತು ಅವರು ಹಸುವಿನಂತೆ ಎಷ್ಟು ಸಾಧುವಾಗಿದ್ದಾರೆ ಎಂದು ಹೇಳಿದೆ ಅಷ್ಟೇ. ಮಾನ್ಯ ಕೃಷ್ಣನ್‌ರವರು ಮಾಂಸದ ಬಗ್ಗೆ ಮಾತನಾಡಿದರು. ಇವತ್ತು ಮಾಂಸದ ಬೆಲೆ ಕೇಜಿಗೆ 25 ರೂಪಾಯಿಗಳು ಆಗಿದೆ. ಟಮೇಟೋ ಬೆಲೆ 1 ರೂಪಾಯಿ ಕೇಜಿಗೆ ಇದ್ದದ್ದು 8 ರೂಪಾಯಿಗಳು ಆಗಿದೆ. ಇವತ್ತು ಒಂದು ಕೇಜಿ ಮಾಂಸ ಬೇಯಿಸಿದರೆ ಅಷ್ಟೇ ಮಾಂಸ ತಿನ್ನಲು ಸಿಗುತ್ತದೆ, ಆದರೆ ಒಂದು ಕೇಜಿ ಟಮೇಟೋ ಬೇಯಿಸಿದರೆ ಕಾಲು ಕೇಜಿ ಟಮೇಟೋ ತಿನ್ನಲು ಸಿಗುತ್ತದೆ. ಎಂದರೆ ಎಂಟ್ನಾಕ್ಲ ಮೂವತ್ತೆರಡು ರೂಪಾಯಿಗಳು ಆಯ್ತು.

ಎಂದರೆ ಒಂದು ಕೇಜಿ ಟಮೋಟೋಗೆ ಮೂವತ್ತೆರಡು ರೂಪಾಯಿ, ಮಾಂಸಕ್ಕೆ ಕೇಜಿಗೆ 24 ರೂಪಾಯಿಗಳು ಆದರೆ, ಯಾವುದಕ್ಕೆ ಹೆಚ್ಚು ಬೆಲೆ ಸ್ವಾಮಿ ? ಈ ಬೆಲೇಲಿ ಯಾರು ಟಮ್ಯಾಟೋ ತೆಗೆದುಕೊಂಡು ತಿನ್ನುತ್ತಾರೆ ಸ್ವಾಮಿ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ನಿಮಗೆ ಮಾಂಸದ ಬಗ್ಗೆ ಹೇಗೆ ಗೊತ್ತು ಸ್ವಾಮಿ ?

ಶ್ರೀ ಜೆ. ಡಿ. ಸೋಮಪ್ಪ.—ಇದು ಜನರಲ್ ನಾಲೆಡ್ಜ್ ಸ್ವಾಮಿ.

ಶ್ರೀ ಎಂ. ರಘುಪತಿ.—ಮಾನ್ಯ ಸೋಮಪ್ಪನವರಂತಹವರು ತಿನ್ನುತ್ತಿರುವುದರಿಂದಲೇ ಈಗ ಮಾಂಸದ ಬೆಲೆ ಇಷ್ಟು ಆಗಿ ನಮಗೆಲ್ಲ ತೊಂದರೆ ಆಗಿರುವುದು.

ಶ್ರೀ ಜೆ. ಡಿ. ಸೋಮಪ್ಪ.—ಬೀನ್ಸ್ ಬೆಲೆ 6 ರೂಪಾಯಿಗಳು ಆಗಿದೆ. ಈಗ ಸ್ವಲ್ಪ ಕಡಿಮೆ ಆಗಿರ ಬಹುದೆಂದು ಕಾಣುತ್ತದೆ. ಇದರ ಬಗ್ಗೆ ಗಮನಹರಿಸುತ್ತೀರಾ ? ಇವತ್ತು ಸರ್ವೇಸಾಮಾನ್ಯವಾಗಿ ಎಲ್ಲರೂ ತರಕಾರಿ ತಿನ್ನುತ್ತಾರೆ. ಕಾರ್ಮಿಕ ನಾಯಕರಾದ ಸೂರಿಯವರು ಹೊರಟು ಹೋಗಿದ್ದಾರೆ. ಈಗ ಕಾರ್ಮಿಕರು ಹೆಚ್ಚು ಗಟ್ಟಿಮುಟ್ಟಾಗಿಲ್ಲ. ಇವರು ಟಮ್ಯೊಟೋ ತಿನ್ನಲು ತಾಕತ್ತು ಇಲ್ಲದಮೇಲೆ ಆತ ಮಾಂಸವನ್ನು ಹೇಗೆ ತಿಂದಾನು ? ನಮ್ಮ ಕಡೆ ಜನ ತಮ್ಮ ಹೆಂಡತಿಯರ ಮಾಂಗಲ್ಯವನ್ನು ಅಡವಿಟ್ಟು ಆಲೂಗೆಡ್ಡೆ ಬೆಳೆದಿದ್ದಾರೆ. ಇವರು ಇಷ್ಟು ಕಷ್ಟಪಟ್ಟು ಆಲೂಗೆಡ್ಡೆ ಬೆಳೆದರೆ ಅವರು ಅದನ್ನು ಮಾರಾಟ ಮಾಡುವಷ್ಟು ಹೊತ್ತಿಗೆ 4–5 ರೂಪಾಯಿಗಳು ಕೇಜಿಗೆ ಇದ್ದುದು ಎರಡೂವರೆ ರೂಪಾಯಿಗೆ ಬಂದಿರುತ್ತದೆ.

ಶ್ರೀ ಮೈಖೇಲ್ ಬಿ. ಫೆರ್ನಾಂಡೀಸ್.—ದರ ಬಿದ್ದರೂ ದೂರುತ್ತಾರೆ, ದರ ಜಾಸ್ತಿ ಆದರೂ ಇವರು ದೂರುತ್ತಾರಲ್ಲಾ ಸ್ವಾಮಿ ?

ಶ್ರೀ ಜೆ. ಡಿ. ಸೋಮಪ್ಪ.—ತಾವು ಕೂತು ಕೇಳಿ ಸ್ವಾಮಿ. ತಾವು ಇದಕ್ಕೆ ಒಳ್ಳೆಯ ಮಾರುಕಟ್ಟೆ ಏರ್ಪಾಟು ಮಾಡಿ ಇದನ್ನು ಹೊರಗಡೆಗೆ ಕಳುಹಿಸುವ ವ್ಯವಸ್ಥೆ ಮಾಡಬೇಕು. ಇದು ಎಲ್ಲಾ ನೋಡುವುದಕ್ಕೆ ಮಂತ್ರಿಗಳು ಇರುವುದು. ಕಮ್ಮಿ ಆದರೂ ಅಷ್ಟೇ ಜಾಸ್ತಿ ಆದರೂ ಅಷ್ಟೇ. ಆ ಬಗ್ಗೆ ಮಂತ್ರಿಗಳು ಗಮನ ಹರಿಸಬೇಕು.

ಮಾನ್ಯ ಸಭಾಪತಿ.—ತಾವು ಬೇಗ ಮುಗಿಸಿ ಸ್ವಾಮಿ.

ಶ್ರೀ ಜೆ. ಡಿ. ಸೋಮಪ್ಪ.—ಈಗ ಎರಡನೇ ಇಲಾಖೆ ಬಗ್ಗೆ ಮಾತನಾಡುತ್ತಿದ್ದೇನೆ. ಕೆ.ಎಸ್.ಆರ್.ಟಿ.ಸಿ. ಬಗ್ಗೆ ಒಂದೊಂದು ಅಕ್ಷರಕ್ಕೆ ಐದೈದು ನಿಮಿಷ ಎಂದರೆ, 25 ನಿಮಿಷ ಬೇಕು. ನಾನು ಬೇಗ ಮುಗಿಸಿದ್ದೇನೆ.

ಮಾನ್ಯ ಸಭಾಪತಿ.—ತಾವು 15 ನಿಮಿಷ ತೆಗೆದುಕೊಂಡಿದ್ದೀರಿ.

ಶ್ರೀ ಜೆ. ಡಿ. ಸೋಮಪ್ಪ.—ಇನ್ನೂ ವಕ್ಫ್ ಬಗ್ಗೆ ಮಾತನಾಡಬೇಕಾಗಿದೆ.

ಶ್ರೀ ಮೈಖೇಲ್ ಬಿ. ಫೆರ್ನಾಂಡೀಸ್.—ಈ ಕಡೆ ಅವರು ಇದ್ದಾಗ ಮಾತನಾಡಲೂ ಅವಕಾಶ ಇರಲಿಲ್ಲ. ಆ ಕಡೆ ಅವರು ಮಾತನಾಡಲಿ ಬಿಡಿ.

ಶ್ರೀ ಜೆ. ಡಿ. ಸೋಮಪ್ಪ.—ನಾವು ಕೆಲವು ವಿಚಾರಗಳನ್ನು ಹೇಳಬೇಕಾಗುತ್ತದೆ. ಕೆಲವು ವಿಚಾರ ಗಳನ್ನು ಮಾತನಾಡುವುದಕ್ಕೆ ಈ ಸಂದರ್ಭ ಬಿಟ್ಟರೆ ಬೇರೆ ಸಂದರ್ಭ ಸಿಗುವುದಿಲ್ಲವಾದ್ದರಿಂದ ನಾನು ಮಾತನಾಡುತ್ತಿದ್ದೇನೆ. ನಾವು 51 ರೂಪಾಯಿಗಳನ್ನು ತೆಗೆದುಕೊಳ್ಳುತ್ತೇವೆ, ಇಲ್ಲೂ ಖಾಲಿ ಮೇಲೂ ಖಾಲಿ ಇದೆ. ಜನಾನೇ ಇಲ್ಲ. ದಿನಕ್ಕೆ 51 ರೂಪಾಯಿಗಳನ್ನು ತೆಗೆದುಕೊಂಡು ಊರಿನಲ್ಲೂ ಇಲ್ಲದೇ ಬೆಂಗಳೂರಿನಲ್ಲಿ ಹೋಗಿ ನೀವು ಏನು ಮಾಡುತ್ತೀರಿ ಎಂದು ನಮ್ಮ ಮನೆಯವರು ಕೇಳುತ್ತಾರೆ ಸ್ವಾಮಿ.

ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಪಶುಸಂಗೋಪನಾ ಇಲಾಖೆ ಬಹಳ ಪ್ರಾಮುಖ್ಯ ಸ್ಥಾನವನ್ನು ಪಡೆದಿದೆ. ಇವತ್ತು ರೈತರು 2·40 ಪೈಸೆ ಹಾಗೂ 2·50 ಪೈಸೆಗೆ ಹಾಲು ಕೊಡುತ್ತಿದ್ದಾರೆ. ಇತ್ತೀಚೆಗೆ ಪ್ರತಿಯೊಂದು ಪದಾರ್ಥಗಳ ಬೆಲೆ ಜಾಸ್ತಿಯಾಗಿರುವುದು ತಮಗೆಲ್ಲಾ ಗೊತ್ತಿದೆ. ಮಾನ್ಯ ಮಂತ್ರಿಯವರು ಹಾಲಿನ ಬೆಲೆಯನ್ನು ಕೂಡ ಏರಿಸುತ್ತಾರೆಂದು ನಾನು ಭಾವಿಸಿಕೊಂಡಿದ್ದವು. ಅವರ ದೊಡ್ಡ ಗುಣ ಏನೆಂದರೆ ಯಾವುದನ್ನೂ ಅವರು ಮಾಡಲಿಲ್ಲ. ಇವತ್ತು ಹಳ್ಳಿಗಾಡಿನಿಂದ ಏನು ಹಾಲು ಸರಬರಾಜು ಮಾಡುತ್ತಿದ್ದಾರೆ, ತಾವು ಒಂದು ಲೀಟರ್ ಹಾಲಿಗೆ 4 ರೂಪಾಯಿ ಮಾಡದೇ ಹೋದರೆ ಯಾರೂ ಕೂಡ ಹಾಲು ಸರಬರಾಜು ಮಾಡುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ವಿಶ್ವಬ್ಯಾಂಕ್‌ನಿಂದ ನೆರವು ಪಡೆದು ಡೈರಿ ಅಭಿವೃದ್ಧಿ ಪಡಿಸುತ್ತೇವೆ ಎನ್ನುವ ವಿಚಾರ ರೇಡಿಯೋದಲ್ಲಿ ಬರುತ್ತೆ ಹಾಗೂ ಪತ್ರಿಕೆಗಳಲ್ಲಿ ಬರುತ್ತೆ. ನನ್ನ ಕ್ಷೇತ್ರದಲ್ಲಿ ಕಳೆದ 8 ತಿಂಗಳಿಂದ ಒಂದೇ ಒಂದು ಹಾಲು ಉತ್ಪಾದಕರ ಸಹಕಾರ ಸಂಘವನ್ನು ಪ್ರಾರಂಭ ಮಾಡಿಲ್ಲ. ಇವತ್ತು ಪಶುಸಂಗೋಪನಾ ಅಭಿವೃದ್ಧಿಗೆ ಐ.ಆರ್.ಡಿ.ಪಿ. ಯಲ್ಲಿ ಸಾಲವನ್ನು ಕೊಡುತ್ತಿದ್ದಾರೆ. ಬ್ಯಾಂಕಿನವರು ಹಸುಗಳನ್ನು ತೆಗೆದುಕೊಳ್ಳುವುದಕ್ಕೆ ಸಾಲ ಕೊಡುತ್ತಿದ್ದಾರೆ. ಪಶುಗಳನ್ನು ಸಾಕಿದಂಥ ಜನ ಹಾಲನ್ನು ಎಲ್ಲಿಗೆ ತೆಗೆದುಕೊಂಡು ಹೋಗಬೇಕು ? ಸಂಬಂಧಪಟ್ಟ ಅಧಿಕಾರಿಗಳನ್ನು ಕನಿಷ್ಟ ಇಷ್ಟು ಹಾಲು ಬರಬೇಕು; ಇಲ್ಲದೇ ಇದ್ದರೆ ನಮಗೆ ಲಾರಿ ಬಾಡಿಗೆ ಕೂಡ ವಸೂಲು ಆಗುವುದಿಲ್ಲ ಎಂದು ಹೇಳುತ್ತಾರೆ ಹೀಗೆ ಹೇಳಿದರೆ ಬಡವರು ತೆಗೆದುಕೊಂಡಂತಹ ಸಾಲಗಳನ್ನು ತೀರಿಸುವುದು ಹೇಗೆ ? ಅವರು ಬದುಕುವುದಕ್ಕೆ ಆಗುತ್ತದೆಯೆ ? ಸರ್ಕಾರದವರು ಈ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಪಶುವೈದ್ಯ ಶಾಲೆಗಳನ್ನು ಹೆಚ್ಚು ಹೆಚ್ಚು ತೆಗೆಯುವುದಕ್ಕೆ ಪ್ರಯತ್ನ ಮಾಡಬೇಕು. ಇವತ್ತು ಜನಗಳಿಗೆ ಯಾವ ರೀತಿ ಹೆಚ್ಚಿನ ಪ್ರಮಾಣದಲ್ಲಿ ಖಾಯಿಲೆಗಳು ಬರುತ್ತವೆಯೋ ಅದೇ ರೀತಿ ಜಾನುವಾರುಗಳಿಗೂ ಖಾಯಿಲೆಗಳು ಬರುತ್ತಿವೆ. ಮಲೆನಾಡಿನಲ್ಲಿ ಮಾತ್ರ 10-15 ಸಾವಿರ ಜಾನುವಾರುಗಳಿರಬೇಕೆಂಬ ನಿರ್ಬಂಧ ವನ್ನು ಹಾಕಬಾರದು. ಆ ಭಾಗಕ್ಕೆ ಪ್ರತ್ಯೇಕವಾದ ಕಾನೂನು ಮಾಡಿ; ಪ್ರತಿ ಹತ್ತು ಕಿಲೋಮೀಟರ್ ಅಂತರದಲ್ಲಿ ಒಂದೊಂದು ಪಶುವೈದ್ಯಶಾಲೆಗಳನ್ನು ತೆಗೆಯುವಂತಹ ಏರ್ಪಾಡು ಮಾಡಬೇಕೆಂದು ಹೇಳು ತ್ತೇನೆ. ಗ್ರಾಮಾಂತರ ಪ್ರದೇಶಗಳ ಪಶುವೈದ್ಯಶಾಲೆಗಳಲ್ಲಿರತಕ್ಕ ವೈದ್ಯರ ಕೊರತೆಯನ್ನು ನೀಗಿಸುತ್ತೇವೆಂದು ತಾವು ಹೇಳಿದ್ದಿರಿ; ಅದು ಏನಾಯಿತು ಎಂಬುದು ಗೊತ್ತಾಗಲಿಲ್ಲ. ಪಶುವೈದ್ಯಶಾಲೆಗಳನ್ನು ತೆಗೆಯುವುದರಿಂದ ಏನೂ ಉಪಯೋಗ ಇಲ್ಲ. ಅದಕ್ಕೆ ತಕ್ಕಂತೆ ಸಿಬ್ಬಂದಿ ನೇಮಕ ಮಾಡಬೇಕು. ಹಾಗೂ ಹೆಚ್ಚಿನ ಪ್ರಮಾಣ ದಲ್ಲಿ ಔಷಧಿಗಳನ್ನು ಇಡುವಂತಹ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಸ್ವಾಮಿ, ಹಣ್ಣುಹಂಪಲು ಬೆಳೆಯತಕ್ಕ ಗಿಡಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಇದು ಎಷ್ಟರ ಮಟ್ಟಿಗೆ ಫಲಕಾರಿಯಾಗಿದೆ ಎನ್ನುವುದನ್ನು ತಾವು ನೋಡಬೇಕು. ನಮ್ಮ ತಾಲ್ಲೂಕಿನಲ್ಲಿ ತೋಟಗಾರಿಕೆ ಇಲಾಖೆ ಇದೆ. ಕಿತ್ತಲೆ ಗಿಡ ಹಾಗೂ ತೆಂಗಿನ ಗಿಡಗಳನ್ನು ಕೊಡುತ್ತಾರೆ. ಬೇರೆಬೇರೆ ಹಣ್ಣಿನ ಗಿಡಗಳನ್ನು ಕೇಳಿದರೆ ಯಾವುದೂ ಬಂದಿಲ್ಲ; ಎಂದು ಹೇಳುತ್ತಾರೆ. ಉಪವಿಭಾಗ ಮಟ್ಟದಲ್ಲಿ ಸಾಮಾನ್ಯ ಜನರು ಕೂಡ ಬೆಳೆಯುವಂಥ ಹಣ್ಣಿನ ಗಿಡಗಳನ್ನು ಬೆಳೆಸತಕ್ಕ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಜನತಾ ಮನೆಗಳ ಮುಂದೆ ಎರಡು ಪರಂಗಿ ಗಿಡಗಳನ್ನು ಕೂಡ ಹಾಕಿಕೊಳ್ಳುವಂಥ ವ್ಯವಸ್ಥೆ ಮಾಡಬೇಕು. ಇದರಿಂದ ಜನರಿಗೂ ಅನುಕೂಲವಾಗುತ್ತದೆ, ಇಲಾಖೆಯೂ ಕೂಡ ಒಳ್ಳೆಯ ಕೆಲಸ ಮಾಡಿದಂತಾಗುತ್ತದೆಂದು ಹೇಳುತ್ತೇನೆ.

ಇನ್ನು ವಕ್ಫ್ ಮತ್ತು ಕಾರ್ಮಿಕ ಇಲಾಖೆಯ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಸದನ ನಡೆಯತಕ್ಕ ಕಾಲದಲ್ಲಿ ಮಾನ್ಯ ಮಂತ್ರಿಯವರು ವಿದೇಶ ಪ್ರವಾಸ ಹೋಗಿದ್ದಾರೆ. ಸರ್ಕಾರದ ಕೆಲಸಕ್ಕೋ ಸ್ವಂತ ಕೆಲಸಕ್ಕೋ ಗೊತ್ತಿಲ್ಲ.

ಶ್ರೀ ಎಂ. ರಘುಪತಿ.—ದೇವರ ಕೆಲಸಕ್ಕೆ.

ಶ್ರೀ ಜೆ. ಡಿ. ಸೋಮಪ್ಪ.—ಇನ್‌ಚಾರ್ಜ್ ಮಂತ್ರಿಗಳು ಇದ್ದಾರೆ. ಕಾರ್ಮಿಕ ಇಲಾಖೆಯಲ್ಲಿ ಪಕ್ಷಪಾತ, ಭ್ರಷ್ಟಾಚಾರ ವಿಪರೀತವಾಗಿ ನಡೆಯುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಅಪಾದನೆ ಇರತಕ್ಕ ಅಧಿಕಾರಿಗಳನ್ನು, ಭ್ರಷ್ಟ ಅಧಿಕಾರಿಗಳನ್ನು ವರ್ಗ ಮಾಡಿದರೆ ಯಾರೂ ಕೂಡ ಆಕ್ಷೇಪ ಮಾಡುವುದಿಲ್ಲ. ರಾಘವನ್ ಎನ್ನುವ ಫ್ಯಾಕ್ಟರಿ ಇನ್ಸ್‌ಪೆಕ್ಟರನ್ನು ಕೇವಲ 9 ತಿಂಗಳಾಗಿದ್ದರೂ ಬಳ್ಳಾರಿಗೆ ವರ್ಗ ಮಾಡಿದ್ದಾರೆ. ಇದರಿಂದ ಅಧಿಕಾರಿಗಳು ಮಾನಸಿಕವಾಗಿ ತೊಂದರೆಗೆ ಗುರಿಯಾಗುತ್ತಾರೆ. ಅವರಿಂದ ಒಳ್ಳೆಯ ಕೆಲಸವನ್ನು ನಿರೀಕ್ಷೆ ಮಾಡುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ಕೊಡುತ್ತಾರೆಂದು ನಾನು ಭಾವಿಸುತ್ತೇನೆ. ನಾನು ಕಳೆದ ಸದನದಲ್ಲಿ ಮಾತನಾಡುವಾಗ ಆ ವಕ್ಫ್ ಆಸ್ತಿಗಳನ್ನು ಮನಸ್ಸಿಗೆ ಬಂದಹಾಗೆ ಕೊಟ್ಟಿದ್ದಾರೆಂದು ಹೇಳಿದ್ದೆ. ಈಗ ಸಂಬಂಧಪಟ್ಟ ಅಧಿಕಾರಿಯನ್ನು ವರ್ಗ ಮಾಡಿದ್ದಾರೆಂದು ಕೇಳಿದ್ದೇನೆ. ಈ ವಿಚಾರದಲ್ಲಿಯೂ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಪ್ಲಾಂಟೇಷನ್ ಏರಿಯಾದಲ್ಲಿರತಕ್ಕ ಕೂಲಿ ಕಾರ್ಮಿಕರಿಗೆ ಸರಿಯಾದಂಥ ವಸತಿಗಳನ್ನು ಕಲ್ಪಿಸಿ ಕೊಡುತ್ತಿಲ್ಲ. ಪ್ಲಾಂಟೇಷನ್ ಲೇಬರ್ ಹೌಸಿಂಗ್ ಸ್ಕೀಂ ಇದು. ಅನೇಕ ಜನ ಪ್ಲಾಂಟರುಗಳು ಇದರ ಉಪಯೋಗವನ್ನು ಪಡೆದರೂ ಕೂಡ ಸಬ್ಸಿಡಿಯನ್ನು ತೆಗೆದುಕೊಂಡರೂ ಕಾರ್ಮಿಕರಿಗೆ ಸರಿಯಾದ ಮನೆ ಗಳನ್ನು ಕಟ್ಟಿಸಿಕೊಟ್ಟಿಲ್ಲ.

ಛೇರ್ಮನ್.—ಈಗಾಗಲೇ ತಾವು ಮಾತನಾಡಲಿಕ್ಕೆ ಪ್ರಾರಂಭ ಮಾಡಿ 30 ನಿಮಿಷಗಳು ಆಯಿತು. ತಾವು 15 ನಿಮಿಷದಲ್ಲಿ ಮುಗಿಸಬೇಕಾಗಿತ್ತು. ಬೇಗ ಮುಗಿಸಬೇಕು.

ಶ್ರೀ ಜೆ. ಡಿ. ಸೋಮಪ್ಪ.—ಅಧ್ಯಕ್ಷರೇ, ತಾವು ಈ ಕಡೆ ಇದ್ದು ಮಾತನಾಡಿದವರು, ಆದ್ದರಿಂದ ನೀವು ನಮ್ಮ ರಕ್ಷಣೆಗೆ ಬರದೇ ಇದ್ದರೆ ಇನ್ನು ಯಾರು ಬರಲಿಕ್ಕೆ ಆಗುತ್ತದೆ? ಮಾನ್ಯ ರಘುಪತಿಯವರು ನಮ್ಮ ರಕ್ಷಣೆಗೆ ಬರಲಿಕ್ಕೆ ಆಗುತ್ತದೆಯೇ?

ಶ್ರೀ ಎಂ. ರಘುಪತಿ.—ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು, ಈಗ ಮಾನ್ಯ ಸದಸ್ಯರಾದ ತಿಪ್ಪಣ್ಣ ನವರು ಬಂದರು. ನಾನೂ ಸಹ ಪ್ಲಾಂಟೇಷನ್ ಲೇಬರ್ಸ್ ಬಗ್ಗೆ ಮಾತನಾಡಬೇಕಾಗಿದೆ ಎಂದು ಕೇಳುತ್ತಿದ್ದರು.

ಶ್ರೀ ಜೆ. ಡಿ. ಸೋಮಪ್ಪ.—ಅಧ್ಯಕ್ಷರೇ, ನಾನು ಆದಷ್ಟು ಬೇಗ ನನ್ನ ಭಾಷಣ ಮುಗಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ. ಪ್ಲಾಂಟೇಷನ್ ಏರಿಯಾಗಳಿಗೆ ಇನ್ಸ್‌ಪೆಕ್ಟರುಗಳನ್ನು ಹಾಕುತ್ತಾರೆ. ಇನ್ಸ್‌ಪೆಕ್ಟರುಗಳೂ ಸಹ ಬಹಳ ಕಷ್ಟಪಟ್ಟುಕೊಂಡು ಬರುತ್ತಾರೆ. ಅಲ್ಲಿ ಅವರುಗಳಿಗೆ ಕಾರು ಕೊಡುತ್ತಾರೆ. ಎಲ್ಲಾ ಸೌಕರ್ಯ ಗಳನ್ನೂ ಕೊಡುತ್ತಾರೆ. ಅವರಿಗೆ ಅಲ್ಲಿ ಒಳ್ಳೆಯ ಅನುಕೂಲ ಆಗುತ್ತದೆ. ಅವರು ಅಲ್ಲಿಗೆ ಬಂದನಂತರ ಲೇಬರ್ ಇನ್ಸ್‌ಪೆಕ್ಟರ್ ಎನ್ನುವುದು ಮರೆತು, ಪ್ಲಾಂಟರ್ಸ್ ಇನ್ಸ್‌ಪೆಕ್ಟರ್ ಆಗುತ್ತಾರೆ. ಮಾನ್ಯ ಸೂರ್ಯ ನಾರಾಯಣರಾವ್ ಅವರು ಎಲ್ಲಿಗೋ ಎದ್ದು ಹೋಗಿದ್ದಾರೆ. ನಾನು ಏತಕ್ಕೆ ಕೇಳುತ್ತಿದ್ದೇನೆಂದರೆ, ನಾನು ಅದೇ

ಪ್ರಾಂತ್ಯದಿಂದ ಪ್ರತಿನಿಧಿಸತಕ್ಕವನು. ನಾನೂ ಸಹ ಪ್ಲಾಂಟರ್ಸ್ ಲೇಬರ್ಸ್, ಅಗ್ರಿಕಲ್ಚರ್ ಲೇಬರ್ಸ್ ಅವರನ್ನು ಪ್ರತಿನಿಧಿಸತಕ್ಕ ವ್ಯಕ್ತಿ, ಆದ್ದರಿಂದ, ಅವರ ಬಗ್ಗೆ ನಾನು ನಾಲ್ಕು ಮಾತುಗಳನ್ನು ಹೇಳಬೇಕಾಗಿದೆ. ಮಾನ್ಯ ರಘುಪತಿಯವರು, ಬಡವರ ಬಗ್ಗೆ ಕಳಕಳಿ ಇರತಕ್ಕ ಸರ್ಕಾರ ಎಂದು ಹೇಳಿದರು, ಅನಂತರ ಅವರು ರೈತರ ಸರ್ಕಾರ ಎಂದು ಹೇಳುತ್ತಾರೆ, ಅನಂತರ ಕಾರ್ಮಿಕರ ಸರ್ಕಾರ ಎಂದು ಹೇಳುತ್ತಾರೆ, ಅನಂತರ ಶ್ರೀಮಂತರ ಸರ್ಕಾರ ಎಂದು ಕಾಣುತ್ತದೆ. ಇವೊತ್ತು ಕಾರ್ಮಿಕರಿಗೆ ಏನು ಅನುಕೂಲ ಆಗಿದೆ. ಒಪ್ಪಂದ ಆಗಿರತಕ್ಕ ಸಂಬಳ ಎಷ್ಟು? ಇದನ್ನು ಎಷ್ಟು ಜನ ಪ್ಲಾಂಟರ್ಸ್ ಜಾರಿಗೆ ಕೊಟ್ಟಿದ್ದಾರೆ. ಇದರ ಬಗ್ಗೆ ತಮ್ಮಲ್ಲಿ ಅಂಕಿ ಅಂಶಗಳಿವೆಯೇ ?

ಶ್ರೀ ಪಂಪಾಪತಿ.—ತಾವು ಕೊಡುತ್ತಾ ಇರಬೇಕಲ್ಲ ?

ಶ್ರೀ ಜೆ. ಡಿ. ಸೋಮಪ್ಪ.—ನಾವು ಎಂಟು ರೂಪಾಯಿ ಐದು ಪೈಸೆ ಕೊಡುತ್ತಿದ್ದೇವೆ. ಇವೊತ್ತು ಪ್ಲಾಂಟೇಷನ್ ಏರಿಯಾದಲ್ಲಿ ವಸತಿ ಸೌಕರ್ಯವನ್ನು ಸರಿಯಾದ ರೀತಿಯಲ್ಲಿ ಕಲ್ಪಿಸತಕ್ಕದ್ದು ಮಾಡಬೇಕಾಗಿದೆ ಎಷ್ಟೋ ತೋಟಗಳಲ್ಲಿ ಕುಡಿಯಲಿಕ್ಕೆ ನೀರು ಇಲ್ಲ. ಪಬ್ಲಿಕ್ ಎಮಿನಿಟೀಸ್ ಇಲ್ಲವೇ ಇಲ್ಲ. ಕುಡಿಯುವ ನೀರನ್ನು ಎಷ್ಟು ಫರ್ಲಾಂಗ್ ದೂರದಿಂದ ಹೊತ್ತುಕೊಂಡು ಬರಬೇಕಾಗಿದೆ. ಇನ್ನು ಕಾಫಿಬೀಜ ಪ್ರೋಸೆಸ್ ಮಾಡತಕ್ಕದ್ದು ಇದೆ. ಅದರ ಕೊಳೆ ಎಲ್ಲಾ ಹಳ್ಳಕ್ಕೆ ಹೋಗುತ್ತದೆ. ಆ ಹಳ್ಳದ ನೀರನ್ನು ಜನರು ಕುಡಿಯ ಬೇಕಾಗಿದೆ. ಅಂಥದ್ದನ್ನೆಲ್ಲಾ, ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆಯವರಿಗೆ, ಪೋಲೀಸ್ ಇಲಾಖೆಗೆ ಹೇಳಿ, ನನ್ನ ಕ್ಷೇತ್ರದಲ್ಲಿ ಕೆಲವು ಕಡೆ ನಿಲ್ಲಿಸಿದ್ದೇನೆ. ಅದನ್ನು ನಿಲ್ಲಿಸಿದಾಕ್ಷಣ, ಅಲ್ಲಿಯ ಕೆಲವರು ನನ್ನ ಮೇಲೆ ಖಾರವಾಗಿ ಹೇಳಿ, ಇವನು ಏನೋ ಬಂದು ಮಾಡಿದ್ದಾನೆ ಎಂದು ಹೇಳಿದರು. ಲೇಬರ್ ಇನ್ಸ್‌ಪೆಕ್ಟರ್ ಮಾಡ ಬೇಕಾದ ಕೆಲಸ ಇವೊತ್ತು ನಾನು ಮಾಡಬೇಕಾಗಿ ಬಂದಿದೆ. ಏಕೆಂದರೆ, ಲೇಬರ್ ಇನ್ಸ್‌ಪೆಕ್ಟರ್ ಮಾಮೂಲು ತೆಗೆದುಕೊಂಡು ಸುಮ್ಮನಾಗಿಬಿಡುತ್ತಾನೆ. ಅದನ್ನೆಲ್ಲಾ ಅವರು ಎಲ್ಲಿ ನೋಡಲಿಕ್ಕೆ ಹೋಗುತ್ತಾರೆ. ಅಧ್ಯಕ್ಷರು ಸೆಷನ್ ಕಳೆದಮೇಲೆ ಒಂದು ಸಾರಿ ನನ್ನ ಜೊತೆ ಬಂದರೆ ನಾನು ಪ್ರತ್ಯಕ್ಷವಾಗಿ ಅವರಿಗೆ ತೋರಿಸುತ್ತೇನೆ. ಅಧ್ಯಕ್ಷರೇ, ಇವೊತ್ತು ದುಡಿಯುತಕ್ಕವನು ಕಾರ್ಮಿಕರು, ಅವರಿಗೆ ಸರಿಯಾದ ವಸತಿ ಸೌಕರ್ಯ ಕೊಡಬೇಕಾಗು ತ್ತದೆ., ಪಬ್ಲಿಕ್ ಅಮಿನಿಟೀಸ್ ಕೊಡಬೇಕಾಗುತ್ತದೆ. ನೀರಿನ ಸೌಕರ್ಯ ಕೊಡಬೇಕಾಗುತ್ತದೆ, ಎಲೆಕ್ಟ್ರಿಸಿಟಿ ಸೌಕರ್ಯ ಇರುವ ಕಡೆ ದೀಪಗಳನ್ನು ಕೊಡಬೇಕಾಗುತ್ತದೆ. ಆ ಸೌಕರ್ಯಗಳನ್ನೆಲ್ಲಾ ಕೊಡದೆ ಕೇವಲ ಒಂದೇ ಒಂದು ರೂಮಿನಲ್ಲಿ ಗಂಡ, ಹೆಂಡತಿ, ಮಕ್ಕಳು ಎಲ್ಲಾ ಇರಬೇಕೆಂದರೆ ಹೇಗೆ ಇರಲಿಕ್ಕೆ ಸಾಧ್ಯವಾಗುತ್ತದೆ. ಅವರಿಗೆ ಒಂದು ಮಾಡಲ್ ರೀತಿಯಲ್ಲಿ ಮನೆಗಳನ್ನು ಕಟ್ಟಿಕೊಡಬೇಕೆಂದು ಇದೆ. ಆ ರೀತಿಯಲ್ಲಿ ಅವರಿಗೆ ಮನೆಗಳನ್ನು ಕಟ್ಟಿಕೊಡಬೇಕು. ಇವೊತ್ತು ಅವರು ಬಿದ್ದು ಹೋಗತಕ್ಕ ಲೈನುಗಳಲ್ಲಿ ಆ ಕಾರ್ಮಿಕರು ಇದ್ದಾರೆ. ಇನ್ನು ಕೃಷಿಕಾರ್ಮಿಕರಿಗೆ ಕನಿಷ್ಠವೇತನ ಜಾರಿಗೆ ಕೊಟ್ಟಿಲ್ಲ. ಕಡಿಮೆ ಕೂಲಿ ಕೊಡುತ್ತಿದಾರೆ. ಕನಿಷ್ಠ ಪಕ್ಷ 10 ರೂಪಾಯಿಯವರೆಗೆ ಕೃಷಿ ಕಾರ್ಮಿಕರಿಗೆ ವೇತನವನ್ನು ಏರಿಸಬೇಕೆನ್ನುವ ಮಾತನ್ನು ಹೇಳುತ್ತೇನೆ.

ಇನ್ನು ವಕ್ಫ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳಬೇಕೆಂದರೆ, ಮಸೀದಿಗಳನ್ನು ಕಟ್ಟತಕ್ಕದ್ದಕ್ಕೆ ಹಣ ಕೊಡು ತ್ತಿದ್ದಾರೆ. ಅದರಲ್ಲಿ ಬಹಳ ತಾರತಮ್ಯ ಮಾಡುತ್ತಿದ್ದಾರೆ. ಅವರಿಗೆ ಬೇಕಾದವರಿಗೆ ಕೆಲವು ಕಡೆ ಜಾಸ್ತಿ ಹಣ ಕೊಡುತ್ತಿದ್ದಾರೆ. ಅವರಿಗೆ ಬೇಡದ ಕಡೆಗೆ, ಕಡಿಮೆ ಹಣ ಕೊಡುತ್ತಿದ್ದಾರೆ. ಈ ಒಂದು ತಾರತಮ್ಯ ಮಾಡದೆ. ಎಲ್ಲರಿಗೂ ಒಂದೇ ಸಮನಾಗಿ ಕೊಡಬೇಕೆಂದು ಹೇಳುತ್ತೇನೆ. ಇನ್ನು ಲೇಬರ್ ಡಿಪಾರ್ಟ್‌ಮೆಂಟ್ ಬಗ್ಗೆ ಮಾನ್ಯ ಧನಂಜಯಕುಮಾರ್ ಮಾತನಾಡುತ್ತಾ, ಪ್ರಮೋಷನ್‌ನಲ್ಲಿ ಪಕ್ಷಪಾತ ನಡೆದಿದೆ, ಅಂಥದ್ದು ನಡೆಸಕೂಡದು. ಮಾನ್ಯ ಅಜೀಜ್ ಸೇಠ್ ಅವರು ರಾಜೀನಾಮೆ ಕೊಡಬೇಕೆಂದು ಹೇಳಿದರು. ಅವರನ್ನು ಕೂರಿಸುವುದು, ಇಳಿಸುವುದು ಅವರ ಕೈಯಲ್ಲೇ ಇದೆ, ಈಗ ಅವರೇ ಡೌನ್ ಆಗುತ್ತಿದ್ದಾರೆ. ನಾನು ರಾಜೀನಾಮೆ ಕೊಡಲಿ ಎಂದು ಹೇಳುವುದಿಲ್ಲ. ಯಾವುದೇ ಸರ್ಕಾರ ಇರಲಿ, ಯಾರೇ ಮಂತ್ರಿಗಳಾಗಿರಲಿ, ನಿಷ್ಪಕ್ಷಪಾತವಾಗಿ ಕೆಲಸ ಮಾಡತಕ್ಕದ್ದು ಅವರ ಕರ್ತವ್ಯ. ನಿಷ್ಪಕ್ಷಪಾತವಾಗಿ ಮಾಡಲಿಲ್ಲ ಎಂದರೆ, ಅದನ್ನು ವಿರೋಧಿಸತಕ್ಕದ್ದು ತಿದ್ದುಕೊಂಡು ಹೋಗಿ ಎಂದು ಹೇಳುವುದು ನಮ್ಮ ಕರ್ತವ್ಯ. ಇವೊತ್ತು ಅವರು ತಪ್ಪು ಮಾಡುತ್ತಿರುವುದನ್ನು ಜನತೆ ನೋಡುತ್ತಿದ್ದಾರೆ. ಜನತೆಯು ಕಣ್ಣುಮುಚ್ಚಲಿಕ್ಕೆ ಸಾಧ್ಯವಿಲ್ಲ. ಪ್ರತಿಯೊಬ್ಬರಿಗೂ ಕೂಡ ಅವರವರ ಜಾತಿ ಎನ್ನತಕ್ಕ ಅಭಿಮಾನ ಇರುತ್ತದೆ, ಅವರ ಜನ ಅಧಿಕಾರಕ್ಕೆ ಬರಲಿ ಎನ್ನತಕ್ಕದ್ದು ಇರುತ್ತದೆ. ಆದರೆ ಕಾನೂನು ದೃಷ್ಟಿಯಲ್ಲಿ ಎಲ್ಲರೂ ಒಂದೇ ಎಂದು ನೋಡಬೇಕು. ಇವೊತ್ತು ಪ್ರಮೋಷನ್‌ನಲ್ಲೂ ಕೂಡ ಪಕ್ಷಪಾತ ಮಾಡುತ್ತಿದ್ದಾರೆ. ನಾನು ಅವರ ಹೆಸರನ್ನು ಹೇಳಲಿಕ್ಕೆ ಹೋಗುವುದಿಲ್ಲ. ಮಾನ್ಯ ಮಂತ್ರಿಗಳು ಇಲ್ಲಿ ಇಲ್ಲದೇ ಇರುವಾಗ ಅವರ ಹೆಸರನ್ನು ಹೇಳಬಾರದು. ಮಾನ್ಯ ಅಧ್ಯಕ್ಷರೇ, ಈ ಒಂದು ಡಿಪಾರ್ಟ್‌ಮೆಂಟ್ ನಲ್ಲಿ ಬಹಳ ಸ್ವಜನ ಪಕ್ಷಪಾತ ನಡೆದಿದೆ.

ಛೇರ್ಮನ್.—ತಾವು ಹಿರಿಯ ಸದಸ್ಯರು, ಬೇಗ ಮುಗಿಸಬೇಕು. ಇಲ್ಲದೇ ಹೋದರೆ, ಇನ್ನು ಬೇರೆ ಇತರೆ ಸದಸ್ಯರಿಗೆ ಐದೈದು ನಿಮಿಷದಲ್ಲಿ ಮುಗಿಸಬೇಕು ಎಂದು ಹೇಳುವ ಪರಿಸ್ಥಿತಿ ಬರುತ್ತದೆ. ತಮ್ಮ ಹೆಸರು ಲಿಸ್ಟ್‌ನಲ್ಲಿ ಕೊನೆಯಲ್ಲಿದ್ದರೆ, ತಮಗೆ ಯಾವ ರೀತಿ ರಿಯಾಕ್ಷನ್ ಆಗುತ್ತಿತ್ತು ಎನ್ನುವುದನ್ನು ತಾವು ತಿಳಿದು ಕೊಳ್ಳಬೇಕು. ಹೊಸ ಸದಸ್ಯರಿಗೆ ಮಾತನಾಡಬೇಕು ಎಂದು ಅಪೇಕ್ಷೆ ಇದೆ, ತಾವು ಇತರೇ ಸದಸ್ಯರಿಗೂ ಮಾತನಾಡಲಿಕ್ಕೆ ಅವಕಾಶ ಕೊಡಬೇಕು.

(ಅಧ್ಯಕ್ಷರು, ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಜೆ. ಡಿ. ಸೋಮಪ್ಪ.—ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಮಹೇಶ್ವರಪ್ಪನವರು, ನನ್ನ ಭಾಷಣೆವನ್ನು ಬಹಳ ಹೊತ್ತಿನಿಂದ ಕುಳಿತು ಕೇಳುತ್ತಿದ್ದಾರೆ. ಆದ್ದರಿಂದ, ನನಗೆ ಇನ್ನೂ ಸ್ವಲ್ಪ ಅವಕಾಶ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು.—ತಾವು ಆಗಲೇ ಮುಗಿಸಿರಬೇಕೆಂದು ತಿಳಿದುಕೊಂಡಿದ್ದೆ.

ಶ್ರೀ ಜೆ. ಡಿ. ಸೋಮಪ್ಪ,.—ಈ ಸಂದರ್ಭದಲ್ಲಿ ಮಾತನಾಡಲಿಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೂ ಮಾನ್ಯ ಸದಸ್ಯರು ಕೂಡ ಒಳ್ಳೆಯ ಸಹಕಾರವನ್ನು ಕೊಟ್ಟು ಕೇಳಿದ್ದಕ್ಕೂ, ಮಾನ್ಯ ಮಂತ್ರಿಗಳು ನನ್ನ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಪರಿಶೀಲಿಸುತ್ತಾರೆಂದು ಹೇಳಿ ಎಲ್ಲರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್ (ಭಾರತೀನಗರ).—ಸನ್ಮಾನ್ಯ ಅಧ್ಯಕ್ಷರೇ, ಈಗ ತಾನೆ ಮಾತನಾಡಿದಂಥ ಮಾನ್ಯ ಸದಸ್ಯರಾದ ಸೋಮಪ್ಪನವರು ಪಶುಸಂಗೋಪನಾ ಇಲಾಖೆಯ ಸಚಿವರ ಬಗ್ಗೆ ಮಾತನಾಡುತ್ತಾ ಈ ಮಂತ್ರಿಗಳು ಪಶುವಿನಂತೆ ಸಾಧುವಾಗಿದ್ದಾರೆಂದು ಹೇಳಿದರು. ಆದರೆ ಮಾನ್ಯ ಸೋಮಪ್ಪನವರು ಇದುವರೆಗೂ ಮಾತನಾಡಿ ಪಶು ಹೋಗುವ ವೇಗದಲ್ಲೇ ಹೋಗಿ 50 ನಿಮಿಷ ಕಾಲ ತೆಗೆದುಕೊಂಡರು. ಇದೇ ರೀತಿಯಲ್ಲಿ ನಾವೂ ಕೆಲಸ ಮಾಡುತ್ತಾ ಹೋದರೆ ಬಹುಶಃ ಈ ಸದನವಾಗಲಿ, ಅಥವಾ ಸರ್ಕಾರವಾಗಲಿ ಜನರಿಗೆ ವೇಗವಾಗಿ ಕೆಲಸಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಜೆ. ಡಿ. ಸೋಮಪ್ಪ.—ನಿಮಗೆ ಮಾತ್ರ ಜವಾಬ್ದಾರಿ ಇದೆ, ನಮಗೆ ಬೇಜವಾಬ್ದಾರಿ ಇದೆ ಎನ್ನುವ ಅರ್ಥದಲ್ಲಿ ಹೇಳುತ್ತಿರೋ ?

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಆ ರೀತಿ ನಾನು ಹೇಳಲಿಲ್ಲ. ನಮ್ಮ ಮಂತ್ರಿಗಳನ್ನು ಪಶು ಸಮಾನವಾಗಿ ನಿಧಾನದಿಂದ ಹೋಗುತ್ತಿದ್ದಾರೆಂದು ಹೇಳಿದಿರೋ ಅದೇ ರೀತಿ ನೀವೂ ಕೂಡ ನಿಧಾನವಾಗಿ ಭಾಷಣ ಮಾಡುತ್ತಾ 50 ನಿಮಿಷಕಾಲ ತೆಗೆದುಕೊಂಡಿದ್ದೀರಿ. ಈಗ ನಮ್ಮ ಮುಂದಿರತಕ್ಕ ವರದಿ ಏನಿದೆ ಇದು ಹಿಂದಿನ ಸರ್ಕಾರ ಏನು ವಹಿವಾಟು ಮಾಡಿದೆ ಅದರ ಬಗ್ಗೆ ಇರತಕ್ಕದ್ದು. ಹಿಂದಿನ ಸರ್ಕಾರದವರು ಮಾಡಿರತಕ್ಕ ಮೋಸಗಳನ್ನು ನಾವು ಹೇಳುವುದಕ್ಕೆ ಹೋದರೆ ಅವರು ಒಪ್ಪಿಕೊಳ್ಳುತ್ತಿರಲಿಲ್ಲ. ಆದರೆ ನನಗೆ ಒಂದು ಸಮಾಧಾನ ಏನೆಂದರೆ ಈಗ ಅವರು ಆ ಕಡೆ ಕೂತುಕೊಂಡು ತಾವು ಮಾಡಿದ ಒಂದೊಂದೇ ತಪ್ಪುಗಳನ್ನು ಒಪ್ಪಿಕೊಳ್ಳುತ್ತಾ ಇದ್ದಾರೆ. ಇದು ಬಹಳ ಸಂತೋಷದ ವಿಷಯ. ಈಗ ಅವರು ಮಾಡಿದ ಮೋಸದ ಕೆಲಸಗಳನ್ನು ಒಪ್ಪಿಕೊಳ್ಳುವ ಕಾಲ ಬಂದಿದೆ...

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್. ನಾವು ಮಾಡಿರುವ ಮೋಸದ ಕೆಲಸಗಳು ಯಾವುವು ಎಂಬುದನ್ನು ಮಾನ್ಯ ಸದಸ್ಯರು ಹೇಳಬೇಕು.

ಅಧ್ಯಕ್ಷರು.—ತಾವು ತಾಳ್ಮೆಯಿಂದ ಕುಳಿತುಕೊಂಡರೆ ಅವರು ಆಮೇಲೆ ಹೇಳುತ್ತಾರೆ.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಅದನ್ನೆಲ್ಲಾ ಹೇಳಲಿಕ್ಕೆ ನನಗೆ ಒಂದು ಗಂಟೆ ಐವತ್ತು ನಿಮಿಷ ಬೇಕಾಗುತ್ತದೆ. ಇಲ್ಲದಿದ್ದರೆ ನಾಳೆ ನನ್ನ ಭಾಷಣವನ್ನು ಮುಂದುವರಿಸಬೇಕಾಗುತ್ತದೆ. ಈಗ ಹೊಸ ಸರ್ಕಾರ ಬಂದಿದೆ. ಸರ್ಕಾರದವರು ಮಂಡಿಸಿರುವ ಬೇಡಿಕೆಗಳನ್ನು ಅನುಮೋದಿಸುವ ಸಂದರ್ಭದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ.

ಮೊದಲನೆಯದಾಗಿ ಹೇಳುವುದಾದರೆ, ನಮ್ಮ ವಿಧಾನ ಸೌಧದ ಪಕ್ಕದಲ್ಲೇ ಸರ್ಕಾರಿ ಮುದ್ರಣಾಲಯ ಇದೆ. ಇದರ ಬಗ್ಗೆ ನಾನು ಮೊದಲಿನಿಂದಲೂ ಕೆಲವು ವಿಚಾರಗಳನ್ನು ಹೇಳುತ್ತಲೇ ಬಂದಿದ್ದರೂ ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಈ ಸರ್ಕಾರಕ್ಕೆ ಸಮಯ ಸಿಕ್ಕಿಲ್ಲ ಎಂದು ಕಾಣಿಸುತ್ತದೆ. ಈಗಲಾದರೂ ಈ ಅಧಿವೇಶನ ಮುಗಿಯುವುದರೊಳಗೆ ಕ್ರಮ ತೆಗೆದುಕೊಳ್ಳಬೇಕು. ಅಲ್ಲಿ ಕನ್ನಡ ಗೆಜೆಟ್‌ನ್ನು ತಯಾರು ಮಾಡತಕ್ಕ ವಿಭಾಗ ಇದೆ. ಅಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರಲ್ಲಿ ಅನೇಕ ಜನ ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರನ್ನು ಇದುವರೆಗೂ ಖಾಯಂ ಮಾಡಿಲ್ಲ. ಆ ಕಾರ್ಮಿಕರು ಖಾಯಂ ಕೆಲಸಗಾರರಿಗಿಂತ ಹೆಚ್ಚಿನ ಕೆಲಸ ಮಾಡಿದರೂ ಅವರಿಗೆ ಸಿಕ್ಕತಕ್ಕ ಸಂಬಳ ಖಾಯಂ ಕೆಲಸಗಾರರಿಗಿಂತ ಕಡಿಮೆ. ಈ ರೀತಿ ಸುಮಾರು 20 ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಅವರನ್ನು ಯಾವಾಗ ಖಾಯಂ ಮಾಡುತ್ತಾರೋ ಗೊತ್ತಿಲ್ಲ. ಕನ್ನಡದ ಬಗ್ಗೆ ತುಂಬಾ ಅಭಿಮಾನವನ್ನು ತೋರಿಸಿ, ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಿ ಕನ್ನಡ ಭಾಷೆ ವಿಶೇಷವಾಗಿ ಬೆಳೆಯಬೇಕೆಂದು ನಾವೆಲ್ಲರೂ ಹೇಳುತ್ತಿರುವ ಈ ಸಂದರ್ಭದಲ್ಲಿ ನಮ್ಮ ವಿಧಾನ ಸೌಧದ ಪಕ್ಕದಲ್ಲೇ ಇರತಕ್ಕ ಸರ್ಕಾರೀ ಮುದ್ರಣಾಲಯದಲ್ಲಿ ಕನ್ನಡ ಗೆಜೆಟ್ ಮುದ್ರಣ ವಿಭಾಗದಲ್ಲಿ ಕೆಲಸ ಮಾಡುತ್ತಿರುವವರಿಗೆ ಸರಿಯಾದ ಸೌಲಭ್ಯಗಳಿಲ್ಲ. ಅವರು ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದಾರೆ. ಇದು ಸರಿಯಲ್ಲ. ನಾನು ತಮಗೆ ಹೇಳುವುದೇನೆಂದರೆ ಸರ್ಕಾರೀ ಮುದ್ರಣ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಎಂದರೆ ಅದು ಲಾಟರಿ ವಿಭಾಗ ಇರಬಹುದು, ಮುದ್ರಣ ವಿಭಾಗ ಇರಬಹುದು, ಕ್ಯಾಂಟೀನ್ ವಿಭಾಗ ಇರಬಹುದು. ಅವರು ಎಲ್ಲೇ ಕೆಲಸ ಮಾಡುತ್ತಿರಲಿ ಆ ಎಲ್ಲಾ ಕಾರ್ಮಿಕರನ್ನೂ ಖಾಯಂ ಮಾಡಬೇಕೆಂದು ಮಾನ್ಯ ಕಾರ್ಮಿಕ ಖಾತೆ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಕೈಗಾರಿಕಾ ಕ್ಷೇತ್ರದಲ್ಲಿ ಇರತಕ್ಕ

ಕಾರ್ಮಿಕರಿಗೆ ಒಂದು ಹೊಸ ಕಷ್ಟ ಬಂದಿದೆ. ಅಲ್ಲಿ ಸ್ಮಾಲ್‌ಸ್ಕೇಲ್ ಯೂನಿಟ್ಸ್ ಮತ್ತು ಅನ್ಸಿಲರಿ ಯೂನಿಟ್ಸ್ ಎಂದು ಇವೆ. ಅವುಗಳನ್ನು ಸ್ಥಾಪನೆ ಮಾಡುವಾಗ ಒಂದು ಒಳ್ಳೆಯ ಉದ್ದೇಶ ಇತ್ತು. ಅದು ಏನೆಂದರೆ. ನಿರುದ್ಯೋಗಿ ಇಂಜಿನಿಯರ್‌ಗಳು, ಕೈಗಾರಿಕಾ ಉತ್ಪಾದನೆಯಲ್ಲಿ ಅನುಭವವುಳ್ಳವರು ಚಿಕ್ಕಪುಟ್ಟ ಬಿಡಿಭಾಗ ಗಳನ್ನು ತಯಾರಿಸಿ ದೊಡ್ಡ ದೊಡ್ಡ ಕಾರ್ಖಾನೆಗಳವರಿಗೆ ಒದಗಿಸುವುದು. ಇದರ ಉದ್ದೇಶ ಏನೆಂದರೆ, ಜನರು ನಿರುದ್ಯೋಗಿಗಳಾಗಿ ಕುಳಿತುಕೊಳ್ಳುವ ಬದಲು ಸಣ್ಣ ಪ್ರಮಾಣದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿ ಜನರಲ್ಲಿರುವ ನಿರುದ್ಯೋಗವನ್ನು ಹೋಗಲಾಡಿಸಬೇಕೆಂಬುದು ಆಗಿತ್ತು. ಆದರೆ ಇವತ್ತು ಏನಾಗಿದೆ ಎಂದರೆ, ಚಿಕ್ಕ ಪುಟ್ಟ ಉದ್ದಿಮೆಗಳಲ್ಲಿ ಕಾರ್ಮಿಕರ ಶೋಷಣೆ ವಿಪರೀತವಾಗಿ ನಡೆಯುತ್ತಿದೆ. ಅದು ಯಾವ ಮಟ್ಟದಲ್ಲಿ ಆಗುತ್ತಿದೆ ಎಂದರೆ ಈ ಕಾರ್ಮಿಕರಿಗೆ ಸಂಬಳವನ್ನು ಕೊಡುವಾಗ ನಿಜವಾದ ಸಂಬಳದ ಅಂಕಿಗಳನ್ನು ಪೆನ್ಸಿಲ್‌ನಲ್ಲಿ ಬರೆದು ಕಾರ್ಮಿಕರಿಂದ ಪೆನ್‌ನಲ್ಲಿ ರುಜು ಹಾಕಿಸಿಕೊಂಡು ಅನಂತರ ಪೆನ್ಸಿಲ್‌ನಲ್ಲಿ ಬರೆದಿರುವ ಅಂಕಿಗಳನ್ನು ಅಳಿಸಿ ಹಾಕಿ ಅದನ್ನು ಪೆನ್‌ನಲ್ಲಿ ಬರೆದು ತಾವು ಹೆಚ್ಚಿಗೆ ಸಂಬಳವನ್ನು ಕೊಟ್ಟಿರುವುದಾಗಿ ತೋರಿಸುತ್ತಾರೆ. ಪೀಣ್ಯ ದಲ್ಲಿ ಒಂದು ಅಂಗಡಿಯಲ್ಲಿ ರಿಪೋರ್ಟ್‌ನಲ್ಲಿ ಅವರು ಬರೆದಿದ್ದಾರೆ. ನಾನೇ ಖುದ್ದಾಗಿ ಹೋಗಿ ನೋಡಿಕೊಂಡು ಬಂದಿದ್ದೇನೆ. ನಾನು ತನಿಖೆ ಮಾಡಿದಾಗ ಎಲ್ಲಾ ಸರಿಯಾಗಿತ್ತು ಎಂದು ಹೇಳಿದ್ದಾರೆ. ಸ್ವಾಮಿ, ಅಲ್ಲಿ ನಾನೂ ಕೂಡ ಒಂದು ಯೂನಿಯನ್ನನ್ನು ನಡೆಸುತ್ತಿದ್ದೇನೆ. ಅದು ನನಗೆ ಗೊತ್ತಿದೆ. ಅಲ್ಲಿ ಕಾರ್ಮಿಕರಿಗೆ ತುಂಬಾ ಅನ್ಯಾಯವಾಗುತ್ತಿದೆ. ಮಾನ್ಯ ಮಂತ್ರಿಗಳು ನನ್ನ ಜೊತೆ ಬಂದರೆ ಕರೆದುಕೊಂಡು ಹೋಗಿ ಅದನ್ನು ತೋರಿಸುತ್ತೇನೆ. ಕಾರ್ಮಿಕ ಇಲಾಖೆಯವರು ಇನ್‌ಸ್ಪೆಕ್ಷನ್‌ಗೆ ಬರುತ್ತಾರೆಂದು ತಿಳಿದಕೂಡಲೇ ಒಂದೆರಡು ಪುಸ್ತಕಗಳನ್ನು ಸರಿಯಾಗಿ ಬರೆದು ಇಟ್ಟು ಅವರಿಗೆ ತೋರಿಸುತ್ತೇನೆ. ಕೆಲವು ಮಾಲೀಕರು ಏನು ಮಾಡುತ್ತಾ ರೆಂದರೆ, ಪೀಣ್ಯದಲ್ಲಿ ಒಂದು ಇಂಡಸ್ಟ್ರಿಯನ್ನು ಇಟ್ಟುಕೊಂಡಿರುತ್ತಾರೆ, ಕೋರಮಂಗಲದಲ್ಲಿ ಒಂದು ಇಂಡಸ್ಟ್ರಿ ಇಟ್ಟುಕೊಂಡಿರುತ್ತಾರೆ, ರಾಜಾಜಿನಗರದಲ್ಲಿ ಒಂದು ಇಂಡಸ್ಟ್ರಿಯನ್ನು ಇಟ್ಟುಕೊಂಡಿರುತ್ತಾರೆ, ಇವರು ಮಾಡತಕ್ಕ ಅನ್ಯಾಯವನ್ನು ಕಾರ್ಮಿಕರು ಪ್ರತಿಭಟನೆ ಮಾಡಿದರೆ, ಮುಷ್ಕರ ಹೂಡಿದರೆ ಕೂಡಲೇ ಆ ಇಂಡಸ್ಟ್ರಿಯನ್ನು ಮುಚ್ಚಿಬಿಡುತ್ತಾರೆ, ಇಲ್ಲವೇ ಆ ಕಾರ್ಮಿಕರನ್ನು ಅಲ್ಲಿಂದ ಹೊರಗೆ ಹಾಕುತ್ತಾರೆ. ಇದರ ಜೊತೆಗೆ ಆ ಇಂಡಸ್ಟ್ರಿಯ ಕೆಲಸವನ್ನು ಇನ್ನೊಂದು ಇಂಡಸ್ಟ್ರಿಗೆ ಕಳುಹಿಸಿಕೊಡುತ್ತಾರೆ. ಇದಕ್ಕೆಲ್ಲಾ ಕಾರಣ ಕೆಲವು ಮಧ್ಯವರ್ತಿಗಳು ಅಥವಾ ಕೆಲವು ಅಧಿಕಾರಿಗಳು ಈ ಕಾರ್ಮಿಕರಿಗೆ ಯಾವ ರೀತಿ ಅನ್ಯಾಯ ಮಾಡಬಹು ದೆಂಬುದನ್ನು ಹೇಳಿಕೊಟ್ಟು ಆ ಮಾಲೀಕರ ಕಡೆಯಿಂದ ಹೆಚ್ಚಿನ ಹಣವನ್ನು ದುರ್ಮಾರ್ಗದಲ್ಲಿ ತೆಗೆದುಕೊಳ್ಳು ತ್ತಾರೆ. ಇದರಿಂದಾಗಿ ಕಾರ್ಮಿಕವರ್ಗದವರು ತುಂಬಾ ಕಷ್ಟಕ್ಕೀಡಾಗಬೇಕಾಗುತ್ತದೆ. ಇದಕ್ಕೆಲ್ಲಾ ತಾವು ಅವಕಾಶವನ್ನು ಕೊಡಬಾರದು. ಒಂದೇ ಕುಟುಂಬದಲ್ಲಿರತಕ್ಕವರು ಎಂದು ಕಂಡುಬಂದರೆ ಅವರಲ್ಲಿ ಒಂದಕ್ಕಿಂತ ಹೆಚ್ಚು ಕಾರ್ಖಾನೆಗಳನ್ನು ರಿಜಿಸ್ಟರ್ ಮಾಡಿಸಿಕೊಳ್ಳಲು ಅವಕಾಶವನ್ನು ಕೊಡಬಾರದು. ಹಿಂದಿನ ಸರ್ಕಾರ ಹೊರಟುಹೋಗಿ ಈಗ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಇವರಾದರೂ ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಬೇಕು, ಇಲ್ಲದಿದ್ದರೆ ಕಾರ್ಮಿಕರು ಹೆಚ್ಚಿನ ಶೋಷಣೆಗೆ ಒಳಗಾಗಬೇಕಾಗುತ್ತದೆ.

ಇದೇ ಸಂದರ್ಭದಲ್ಲಿ ಇನ್ನೊಂದು ಉದಾಹರಣೆಯನ್ನು ಹೇಳುವುದಾದರೆ, ಲಾಲ್‌ಬಾಗ್ ರಸ್ತೆಯಲ್ಲಿ ಸಣ್ಣಪ್ಪ ಆಟೋಮೊಬೈಲ್ಸ್ ಎಂದು ಒಂದು ಯೂನಿಟ್ ಇದೆ. ಅಲ್ಲಿ ಸಂಘದ ಮುಖಂಡರ ಬದಲಾವಣೆ ಆಗಿದ್ದರಿಂದ ಆಂಧ್ರದಿಂದ ಬರತಕ್ಕ ಸಾರಿಗೆ ಸಂಸ್ಥೆಯ ಚಾಸ್ಸಿಗಳಿಗೆ ಬಾಡಿ ಕಟ್ಟಲು ಪೀಣ್ಯದಲ್ಲಿ ಒಂದು ಯೂನಿಟ್ಟನ್ನು ಸ್ಥಾಪನೆ ಮಾಡಿ ಅದಕ್ಕೆ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಕೊಡುತ್ತಿದ್ದಾರೆ. ಅಲ್ಲಿ ಕೆಲಸ ಮಾಡಲು ಹೈದರಾಬಾದ್‌ನಿಂದ ಹೆಚ್ಚು ಮಂದಿ ಕಾರ್ಮಿಕರನ್ನು ಕರೆಯಿಸಿದ್ದಾರೆ. ಅದರಲ್ಲಿ ನಮ್ಮವರು ಕೇವಲ ಕೆಲವೇ ಮಂದಿ ಇದ್ದಾರೆ. ಇವರಿಗೆ ಅಪಾಯಿಂಟ್‌ಮೆಂಟ್ ಇಲ್ಲ, ಸಂಬಳ ಇಂತಿಷ್ಟು ಎಂದು ಇಲ್ಲ. ಕಾಂಟ್ರಾಕ್ಟ್ ಬೇಸಿಸ್‌ಮೇಲೆ ಕೆಲಸ ಕೊಡುತ್ತಿದ್ದಾರೆ. ಅಲ್ಲಿನ ಕಾರ್ಮಿಕರು ತಮ್ಮ ಸಂಘಟನೆಯನ್ನು ಮಾಡಿಕೊಂಡು ತಮ್ಮ ಸವಲತ್ತುಗಳನ್ನು ಪಡೆದುಕೊಳ್ಳಲು ಹೋರಾಟ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾನಾದರೂ ಕೇಳು ತ್ತೇನೆ, ಇಂಥ ಕೆಲಸ ಮಾಡುವವರಿಗೆ ಸರ್ಕಾರದವರು ಏತಕ್ಕೆ ಪರವಾನಗಿಯನ್ನು ಕೊಡಬೇಕು ? ಅವರಿಗೆ ಏತಕ್ಕೆ ನೀರು, ವಿದ್ಯುಚ್ಛಕ್ತಿ ಮುಂತಾದ್ದನ್ನು ಕೊಡಬೇಕು ? ಅದನ್ನು ನಿಲ್ಲಿಸಿದರೆ ಅವರೇ ದಾರಿಗೆ ಬರುತ್ತಾರೆ. ನಾನು ಕಾರ್ಮಿಕ ಪ್ರತಿನಿಧಿಯಾಗಿರುವುದರಿಂದ ಇದರ ಬಗ್ಗೆ ಮಾತನಾಡುತ್ತಿದ್ದೇನೆ. ಇದರ ಜೊತೆಗೆ ಇನ್ನೊಂದು ಮಾತನ್ನು ಹೇಳುವುದಾದರೆ ಚಿಕ್ಕ ಪುಟ್ಟ ಕಾರ್ಖಾನೆಗಳಿಂದಾಗಿ ಮಾರ್ಕೆಟ್‌ನಲ್ಲಿ ಬಹಳವಾದ ಪೈಪೋಟಿ ಇದೆ. ತಾವು ಕೊಟೇಷನ್ ಕೊಡುವಾಗ ಯಾರು ಕಾರ್ಮಿಕರಿಗೆ ಹೆಚ್ಚಿನ ಸಂಬಳವನ್ನು ಕೊಡುತ್ತಿರು ತ್ತಾರೆ ಅಂಥ ಕಾರ್ಖಾನೆಯ ಮಾಲೀಕರಿಗೆ ಟೆಂಡರನ್ನು ಕೊಡುವ ವ್ಯವಸ್ಥೆ ಮಾಡಬೇಕು. ಇದಲ್ಲದೆ ಅಲ್ಲಿ ದೊಡ್ಡ ಪ್ರಮಾಣದಲ್ಲಿ ನೌಕರರ ರಿಟ್ರೆಂಚ್‌ಮೆಂಟ್ ಪ್ರಾರಂಭವಾಗಿದೆ. ಈ ಕಾರಣದಿಂದಾಗಿ ನೌಕರರಿಗೆ ಬಹಳ ತೊಂದರೆಯಾಗುತ್ತದೆ. ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಸರ್ಕಾರಕ್ಕೆ ನಾನು ಸಲಹೆಯನ್ನು ಕೊಡುವುದೇನೆಂದರೆ ಕೊಟೇಷನ್ ಕೊಡುವಾಗ ಅದರಲ್ಲಿ ಸಂಬಳ ಇಂತಿಷ್ಟು ಕೊಡುತ್ತೇವೆಂದು ಹಾಕಿರ ಬೇಕು. ಅಲ್ಲಿ ಸಂಬಳವೇನಾದರೂ ಕಡಿಮೆ ಕೊಟ್ಟಿದ್ದರೆ ನಿರ್ಬಂಧ ಮಾಡಬೇಕು; ತಾವು ಆರ್ಡರನ್ನು ಕೊಡ ಬಾರದು. ಮಾಲೀಕರು ಕಾರ್ಮಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಕೊಟೇಷನ್ ಕೊಟ್ಟಿದ್ದರೆ ಮಾತ್ರ, ಸರಿಯಾದ ಸಂಬಳವನ್ನು ಕೊಟ್ಟಿದ್ದರೆ, ಟೆಂಡರ್ ದರ ಜಾಸ್ತಿ ಇದ್ದರೆ ಮಾತ್ರ ಆರ್ಡರನ್ನು ಕೊಡಬೇಕು

ಏತಕ್ಕೆಂದರೆ ಸಂಬಳ ಜಾಸ್ತಿ ಇದ್ದರೆ ಕಾರ್ಮಿಕರ ಎಕನಾಮಿಕ್ ಕಂಡೀಷನ್ ಸುಧಾರಿಸಿಕೊಳ್ಳಲು ಸಾಧ್ಯವಾಗುತ್ತದೆ. ಕಾರ್ಮಿಕರ ಶೋಷಣೆ ಮಾಡುತ್ತಾ ಹೋದರೆ ನಿರಾಶೆ ಜಾಸ್ತಿಯಾಗುತ್ತದೆ. ಈ ಖಾಸಗಿ ಸಂಸ್ಥೆಗಳವರು ನಾನಾ ಕಾರಣಗಳನ್ನು ಒಡ್ಡಿ ಮೋಸ ಮಾಡುತ್ತಿರುತ್ತಾರೆ. ಆದ್ದರಿಂದ ಅವರ ಮೇಲೆ ಒಂದು ನಿರ್ಬಂಧವನ್ನು ಹಾಕುವುವಕ್ಕೆ ತಾವು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ತಾವು ಇನ್ನು ಎಷ್ಟು ಸಮಯ ತೆಗೆದುಕೊಳ್ಳುತ್ತೀರಿ ? ಏತಕ್ಕೆಂದರೆ ನಿನ್ನೆಯಿಂದ ಈ ಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಗುತ್ತಿದೆ. ಇವೊತ್ತು ಕನ್‌ಕ್ಲೂಡ್ ಮಾಡಬೇಕಾಗಿದೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ಈ ಡಿಸ್‌ಕಷನ್ 5 ಗಂಟೆಗೆ ಪ್ರಾರಂಭ ಮಾಡಿದಿರಿ, ಇವತ್ತು 4 ಗಂಟೆಗೆ ಪ್ರಾರಂಭ ಮಾಡಿದಿರಿ. ಇನ್ನೂ ಒಂದೂವರೆ ಗಂಟೆ ಕಾಲ ಮುಂದುವರಿಯಬಹುದೆಂದು ಕಾಣುತ್ತದೆ. ಅನೇಕ ಜನ ಸದಸ್ಯರು ಇವತ್ತು 5 ಗಂಟೆಗೆ ಹೋಗಬೇಕೆಂದು ಹೇಳುತ್ತಿರುವರು. ಈಗಾಗಲೇ 5 ಗಂಟೆಯಾಗಿರುತ್ತದೆ, ಆರು ಗಂಟೆಯವರೆಗೆ ಮುಂದುವರಿಸಬೇಕೆಂದರೆ ತುಂಬಾ ಜಾಸ್ತಿಯಾಗುತ್ತದೆ. ಇನ್ನೂ ಹಲವಾರು ಜನ ಸದಸ್ಯರು ಮಾತನಾಡಬೇಕೆಂದು ಇದ್ದಾರೆ. ಆದ್ದರಿಂದ ನಾಳೆಯ ದಿವಸ ಈ ವಿಷಯವನ್ನು ತೆಗೆದುಕೊಂಡರೆ ಒಳ್ಳೆಯದೆಂದು ಹೇಳುತ್ತೇನೆ. ಇನ್ನೂ ವಕ್ಫ್ ಮೇಲೆ ಮಾತನಾಡಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿರುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈಗಾಗಲೇ ತಡವಾಗಿದೆ. ಕೊನೆಗೆ ವಿಷಯಗಳ ಮೇಲೆ ವಿಚಾರಗಳನ್ನು ವ್ಯಕ್ತಪಡಿಸಲು ಸಮಯವಿಲ್ಲದೆ ಹೋಗಿ ಗಿಲಟಿನ್‌ಗೆ ಹಾಕತಕ್ಕಂಥ ಸಂದರ್ಭ ಬರುತ್ತದೆ. ಅದಕ್ಕೆ ಅವಕಾಶವಾಗಬಾರದೆಂದು ಹೇಳುತ್ತೇನೆ.

ಅಧ್ಯಕ್ಷರು.—ತಮ್ಮ ಅಭಿಪ್ರಾಯವನ್ನು ಮಾನ್ಯ ವಿರೋಧಪಕ್ಷದ ನಾಯಕರು ಗಣನೆಗೆ ತೆಗೆದುಕೊಳ್ಳುತ್ತಾರೆಂದು ಭಾವಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಆದ್ದರಿಂದ ಇವತ್ತೇ ಚರ್ಚೆ ಮುಗಿಸಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಫ್ರೆಂಡ್ಲಿ ಅಪೋಜಿಷನ್‌ದಿಂದ ನಮಗೆ ಬಹಳ ಕಷ್ಟ ಬಂದಿದೆ. ಕಾರ್ಮಿಕ ಮಂತ್ರಿಗಳಿಗೆ ತಕ್ಷಣವೇ ಕೋಪ ಬರುತ್ತದೆ. ಅವರು ಬೆಳಿಗ್ಗೆ ವೆಜಿಟೇರಿಯನ್. ಸಂಜೆ ನಾನ್-ವೆಜಿಟೇರಿಯನ್. ಅದಕ್ಕೋಸ್ಕರವಾಗಿ ತೊಂದರೆಯಾಗಿದೆ. ನಮ್ಮ ಕಾಲವನ್ನು ನಮಗೆ ಕೊಟ್ಟುಬಿಡಿ. ಫ್ರೆಂಡ್ಲಿ ಅಪೋಜಿಷನ್ ಎಂದು ಅವರ ಜೊತೆಗೆ ಅವರು ಸೇರಿಬಿಟ್ಟು ನಮಗೆ ತೊಂದರೆಯಾಗುತ್ತಿದೆ. ನಮ್ಮ ಕಾಲವನ್ನು ಅವರಿಗೆ ಸೇರಿಸಿಬಿಟ್ಟರೆ ನಮ್ಮ ಸದಸ್ಯರಿಗೆ ಮಾತನಾಡಲು ಕಾಲಾವಕಾಶ ಇಲ್ಲದಂತಾಗುತ್ತದೆ. ಕಾಲಾವಕಾಶ ಕಡಿಮೆಯಾಗುತ್ತದೆ. ವಿಷಯಗಳನ್ನು ವ್ಯಕ್ತಪಡಿಸಲು ಸಾಧ್ಯವಾಗುವುದಿಲ್ಲ. ಇದನ್ನು ತಾವು ಅರ್ಥ ಮಾಡಿಕೊಂಡರೆ ಸಾಧ್ಯವಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ರಂಗನಾಥ್‌ರವರು ಹೇಳಿದ್ದನ್ನು ನಾನು ನಂಬಲೇಬೇಕು. ಆದ್ದರಿಂದ ಯಾರು ಯಾರಿಗೆ ಎಷ್ಟೆಷ್ಟು ವೇಳೆ ಎಂಬುವನ್ನು ನಿಗಧಿ ಮಾಡಿ ಖಂಡಿತವಾಗಿಯೂ ಅದಕ್ಕೆ ಮನ್ನಣೆ ಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರ ಅಭಿಪ್ರಾಯವನ್ನು ಒಪ್ಪುವುದಾದರೆ ನನಗೆ ಇನ್ನಷ್ಟು ಸುಲಭವಾಗುತ್ತದೆ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ಕಾರ್ಮಿಕ ಇಲಾಖೆಯ ಬಗ್ಗೆ ಮಾತನಾಡಬೇಕಾಗಿರುತ್ತದೆ. ದಯವಿಟ್ಟು ಅವಕಾಶವನ್ನು ಮಾಡಿಕೊಡಬೇಕು. ಏತಕ್ಕೆಂದರೆ ನಾವು ಆಗಾಗ್ಗೆ ಏಳುವುದಿಲ್ಲ. ಅವಕಾಶ ಸಿಕ್ಕಿದಾಗ ಮಾತ್ರ ಏಳುತ್ತೇವೆ. ಆದ್ದರಿಂದ ಕಾರ್ಮಿಕ ಇಲಾಖೆಯ ಬಗ್ಗೆ ಒಂದೆರಡು ವಿಚಾರಗಳನ್ನು ಮಾತ್ರ ಮಾತನಾಡಬೇಕಾಗಿದೆ. ದಯವಿಟ್ಟು ನಮಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ತಾವು ಹಗಲೆಲ್ಲ ಏಳುವುದಿಲ್ಲ. ಆದರೆ ಎದ್ದರೆ ಕುಳಿತುಕೊಳ್ಳುವುದಿಲ್ಲ. ಇದು ಬಹಳ ಕಷ್ಟ.

ಶ್ರೀ ಮೈಕೆಲ್ ಬಿ. ಫರ್ನಾಂಡಿಸ್.—ಮತ್ತೊಂದು ವಿಚಾರ ಹೇಳುವುದೇನೆಂದರೆ ನಮ್ಮ ಕೈಗಾರಿಕಾ ಕ್ಷೇತ್ರದಲ್ಲಿ ಇಂದು ಹೊಸ ಪದ್ಧತಿಯಿಂದ ಸಂಕಟ ಪರಿಸ್ಥಿತಿ ಉಂಟಾಗಿದೆ.

ಶ್ರೀ ಕೆ. ಹೆಚ್. ರಂಗನಾಥ್.—ಇಲ್ಲಿ ಒಂದು ಪ್ರಶ್ನೆಯನ್ನು ನಮ್ಮ ಮುಂದೆ ಇಟ್ಟಿರುತ್ತಾರೆ. ಅದು ಏನೆಂದರೆ ಸರ್ಕಾರದವರು ಸಣ್ಣ ಸಣ್ಣ ಘಟಕಗಳನ್ನು ಪ್ರಾರಂಭ ಮಾಡುವುವಕ್ಕೆ ಹೆಚ್ಚು ಪ್ರೋತ್ಸಾಹ ಕೊಡುತ್ತಿದ್ದಾರೆ. ಈ ರೀತಿ ಕೊಡುವಾಗ ಮಾನ್ಯ ಸದಸ್ಯರು ಒಂದು ನೀತಿಯ ಮಾತನ್ನು ಹೇಳಿದರು. ಕಾರ್ಮಿಕರ ಶೋಷಣೆ ನಡೆಯುತ್ತಿದೆ, ಆದ್ದರಿಂದ ಅದನ್ನು ನಿವಾರಣೆ ಮಾಡುವುದಕ್ಕೋಸ್ಕರವಾಗಿ ಎಷ್ಟು ಸಂಬಳವನ್ನು ಕೊಡುತ್ತಾರೆ ಎನ್ನುವುದನ್ನು ಕೊಟೇಷನ್ ಕೊಡುವಾಗ ಕೊಟ್ಟಿಲ್ಲವೆಂದು ಹೇಳಿದಿರಿ. ಯಾವ ರೀತಿ ಸಣ್ಣ ಉದ್ಯಮಿಗಳಿಗೆ ಪ್ರೋತ್ಸಾಹ ಕೊಡುವುದಕ್ಕೆ ಸಾಧ್ಯವಾಗುತ್ತದೆ? ಈ ನೀತಿ ಎಲ್ಲಾ ಕಾರ್ಪೋರೇಷನ್‌ಗಳಿಗೆ ದೊಡ್ಡ ದೊಡ್ಡ ಉದ್ದಿಮೆಗಳಿಗೆ ಪ್ರೋತ್ಸಾಹ ಕೊಡತಕ್ಕಂಥ ನೀತಿಯಾಗುತ್ತದೆಯೇ ?

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಎಂಟು ನೂರು ಒಂಬೈನೂರು ರೂಪಾಯಿಗಳು ಸಂಬಳ ಸಿಗುವಂಥದ್ದರಲ್ಲಿ ಇಲ್ಲಿ ನಾಲ್ಕು ನೂರು ರೂಪಾಯಿಗಳು ಸಿಗುವುದಾದರೂ ಪರವಾಗಿಲ್ಲ. ಆದರೆ ನೂರು ರೂಪಾಯಿಗಳಿಗೂ ಕಡಿಮೆ ಕೆಲವರು ಕೊಡುತ್ತಿರುತ್ತಾರೆ.

ಶ್ರೀ ಕೆ. ಹೆಚ್. ರಂಗನಾಥ್.—ನಮ್ಮ ಅಭಿಪ್ರಾಯವೂ ಅದೇ ಆಗಿರುತ್ತದೆ. ಕಾರ್ಮಿಕ ಇಲಾಖೆಯವರು ಅನಿರೀಕ್ಷಿತ ಭೇಟಿ ಕೊಡತಕ್ಕಂಥದ್ದೂ ತಪ್ಪಿಹೋಗಿದೆ. ಇದರಿಂದ ಮಕ್ಕಳಿಗೆ ಕಷ್ಟವಾಗುತ್ತದೆ. ಹೊಸ ಕೈಗಾರಿಕಾ ನೀತಿಯನ್ನು ತಮ್ಮ ಸರ್ಕಾರ ಮಾಡಿದೆ, ಸಣ್ಣ ಸಣ್ಣ ಯೂನಿಟ್‌ಗಳನ್ನು ಮಾಡಿಕೊಳ್ಳ ತಕ್ಕಂಥವರಿಗೆ ಸರ್ಕಾರದಿಂದ ಸಾಲವನ್ನು ಕೊಡುತ್ತಾರೆ, ಕೆ.ಎಫ್.ಸಿ.ಯಿಂದ ಸಾಲವನ್ನು ತೆಗೆದುಕೊಳ್ಳುತ್ತಾರೆ. ಅದು ಅವರಿಗೆ ವರ್ಕಿಂಗ್ ಕ್ಯಾಪಿಟಲ್ ಆಗುತ್ತದೆ. ಅದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಇಂಥ ಸಣ್ಣ ಘಟಕಗಳು ಬರಬೇಕೋ ಬರಬಾರದೋ ಅಥವಾ ದೊಡ್ಡವರ ಕೈಗೆ ಸೇರಬೇಕೋ ಅದನ್ನು ತಾವು ಸ್ಪಷ್ಟಪಡಿಸಬೇಕು. ತಾವು ಕಾರ್ಮಿಕರ ಬಗ್ಗೆ, ಸಂಬಂಧಪಟ್ಟ ಉದ್ಯಮಗಳ ಬಗ್ಗೆ ಆಸಕ್ತಿ ಉಳ್ಳವರು, ಈ ಉದ್ಯಮಗಳು ಬೆಳೆಯದೆ ಹೋದರೆ ಸಣ್ಣ ಸಣ್ಣ ಕಾರ್ಮಿಕರಿಗೆ ಎಲ್ಲಿ ಕೆಲಸ ಸಿಗುತ್ತದೆ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಬೆಂಗಳೂರು ಬಸವನಗುಡಿಯಲ್ಲಿರತಕ್ಕಂಥ ನಿಪ್ಪಾನ್ ಎಲೆಕ್ಟ್ರಿಕಲ್ ಕಂಪನಿಯಲ್ಲಿ 10–15 ವರ್ಷಗಳಿಂದ ಕೆಲಸ ಮಾಡುತ್ತಿದ್ದಂಥ ಇಂಜಿನಿಯರ್‌ಗಳು, ಸುಮಾರು 3–4 ಸಾವಿರ ರೂಪಾಯಿಗಳಷ್ಟು ಸಂಬಳವನ್ನು ತೆಗೆದುಕೊಳ್ಳುತ್ತಿದ್ದಂಥವರು ಆ ಉದ್ಯಮದಲ್ಲಿ ಟೆಕ್ನಿಕಲ್ ನೋಹೌ ತಿಳಿದುಕೊಂಡಿರತಕ್ಕಂಥವರು ಅಲ್ಲಿ ಕೆಲಸವನ್ನು ಬಿಟ್ಟು ತಾವೇ ಸ್ವಂತವಾಗಿ ಫ್ಯಾಕ್ಟರಿಯನ್ನು ತೆಗೆದು 150 ರೂಪಾಯಿಗಳ ಸಂಬಳವನ್ನು ಕೊಟ್ಟು ಹುಡುಗರನ್ನು ಇಟ್ಟುಕೊಂಡು ಬೆಂಗಳೂರಿನಲ್ಲಿರತಕ್ಕಂಥ ಸರ್ಕಾರಿ ಕೈಗಾರಿಕೆಗಳಿಗೆ ಪೈಪೋಟಿಯಿಂದ ಕೆಲಸ ಮಾಡುತ್ತಿದ್ದಾರೆ. ಒಂದು ವೇಳೆ ಈ ಸಣ್ಣ ಸಣ್ಣ ಉದ್ದಿಮೆಗಳವರಿಗೆ ಆರ್ಡರ್ಸ್ ಕೊಡದಿದ್ದರೆ ಅವರಲ್ಲಿರುವ ಕಾರ್ಮಿಕರನ್ನು ಮನೆಗೆ ಕಳುಹಿಸಬೇಕಾಗುತ್ತದೆ. ಇಲ್ಲವೇ ರಿಟ್ರೆಂಚ್ ಮಾಡಬೇಕಾಗುತ್ತದೆಂದು ಹೇಳುತ್ತಾರೆ. ಆಗ ಏನು ಮಾಡುತ್ತೀರಾ? ನಿರುದ್ಯೋಗ ಹೋಗಲಾಡಿಸುವ ಸಲುವಾಗಿ ಕೆಲವರು ಈ ರೀತಿ ಕಡಿಮೆ ಸಂಬಳ ಕೊಡುತ್ತಿದ್ದಾರೆ. ಇಲ್ಲಿ ವೇಜ್ ಎಲಿಮೆಂಟ್ಸ್ ಎಷ್ಟಿದೆ ಎಂಬುದನ್ನು ನೋಡುವುದು ಮುಖ್ಯ. ಕೆಲವರು ಕೊಟೇಷನ್‌ನಲ್ಲಿ 3 ರೂಪಾಯಿಗಳು ಎಂದು ಕೊಟ್ಟರೆ, ಮತ್ತೆ ಕೆಲವರು 2 ರೂಪಾಯಿಗಳು ಎಂದು ಕೊಡುತ್ತಾರೆ. ಇನ್ನೂ ಕೆಲವರು ಕೇವಲ 1 ರೂಪಾಯಿ ಎಂದು ಕೊಡುತ್ತಾರೆ. ಇಲ್ಲಿ ಒಂದು ರೂಪಾಯಿ ಎಂದರೆ ತಿಂಗಳಿಗೆ 150 ರೂಪಾಯಿಗಳ ಸಂಬಳ ಎಂದಾಯಿತು. ಇಂತಹವರು ಕೆಲಸದ ಆರ್ಡರ್ ಪಡೆದುಕೊಂಡು ವಿಶೇಷವಾದಂಥ ಲಾಭ ಮಾಡುತ್ತಾರೆ. ಕಾರ್ಮಿಕರು ಮಾತ್ರ ಅನ್ಯಾಯಕ್ಕೆ ಒಳಗಾಗಬೇಕಾಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ಹಾಗಿದ್ದರೆ ಕೊಟೇಷನ್ ಕೊಡುವಾಗ ಅವರು ತಮ್ಮ ಕಾರ್ಮಿಕರಿಗೆ ಏನು ಸಂಬಳ ಕೊಡುತ್ತಾರೆಂಬುದನ್ನು ನಮೂದು ಮಾಡಲಿ. ಅವರು ಸರಿಯಾದಂಥ ಕೊಟೇಷನ್ ಕೊಟ್ಟಿದ್ದರೆ ಒಪ್ಪಿಕೊಳ್ಳಲಿ, ಇಲ್ಲದಿದ್ದರೆ ಬೇಡ. ಇದನ್ನೆಲ್ಲಾ ನಾವು ವಿಚಾರ ಮಾಡಬೇಕಾಗುತ್ತದೆ. Because all of us are interested both in the labour and in the industries that will have to come up. ಈಗ ನಮ್ಮ ಮುಂದೆ ಎರಡು ಪ್ರಶ್ನೆಗಳಿವೆ. ಈ ಎರಡಕ್ಕೂ ನಾವು ಪರಿಹಾರ ಕಂಡುಹಿಡಿಯಬೇಕಾಗಿದೆ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಇದಕ್ಕೆ ನನ್ನ ಸಲಹೆಯಾದರೂ ಇಷ್ಟೆ : ಕೆಲವರು ಕೊಟೇಷನ್‌ನಲ್ಲಿ ಒಂದು ರೂಪಾಯಿ ಎಂದು ನಮೂದು ಮಾಡಿದರೆ, ಅಲ್ಲಿ ಕೇವಲ 150 ರೂಪಾಯಿಗಳ ಸಂಬಳ ಕೊಡುತ್ತಿದ್ದಾರೆಂದು ಅರ್ಥವಾಗುತ್ತದೆ. ಇದರಿಂದ ಕಾರ್ಮಿಕರು ಯಾವ ರೀತಿ ಜೀವನ ಮಾಡುವುದಕ್ಕಾಗುತ್ತದೆ? 2 ರೂಪಾಯಿಗಳು ಎಂದು ನಮೂದು ಮಾಡಿದ್ದರೆ 300 ರೂಪಾಯಿಗಳು ಸಿಗಬಹುದು, 3 ರೂಪಾಯಿಗಳು ಎಂದು ನಮೂದು ಮಾಡಿದ್ದರೆ 450 ರೂಪಾಯಿಗಳು ಸಿಗಬಹುದು. ಆದ್ದರಿಂದ ಇದರ ಮೇಲೂ ಸಹ ಸರ್ಕಾರದ ಕಡೆಯಿಂದ ಹತೋಟಿ ಇರಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಮಿನಿಮಮ್ ವೇಜಸ್ ಯಾವ ರೀತಿ ಜಾರಿಯಾಗುತ್ತಿದೆ ಎಂಬುದನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಆದರೆ ಇದನ್ನು ಮಾತ್ರ ಮಾಡಬೇಕು ಎಂದರೆ ಹೇಗಾಗುತ್ತದೆ?

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಈಗ ಇನ್ನೊಂದು ಕಷ್ಟವೆಂದರೆ ಈ ಮಿನಿಮಮ್ ವೇಜಸ್ಸನ್ನು ಸಹ ಯಾರೂ ಸರಿಯಾಗಿ ಕೊಡುವುದಿಲ್ಲ. ಯಾವ ಉದ್ದಿಮೆಗಳಿವೆ, ನೋಟಿಫೈಡ್ ಇಂಡಸ್ಟ್ರಿಗಳಿವೆ, ಇಲ್ಲಿಯೂ ಸಹ ಮಿನಿಮಮ್ ವೇಜಸ್‌ಗಿಂತ ಜಾಸ್ತಿ ಯಾರೂ ಕೊಡುವುದಿಲ್ಲ. ಕೆಲವು ಕಡೆ ಕಡಿಮೆ ಕೊಡುತ್ತಾರೆ. ಇದನ್ನೆಲ್ಲಾ ಸರ್ಕಾರ ಪರಿಶೀಲನೆ ಮಾಡಲಿ ಎಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಅಂಗವಿಕಲರನ್ನು ಉದ್ಧಾರ ಮಾಡುತ್ತೇವೆಂದು ಅನೇಕ ಸಂಸ್ಥೆಗಳು ಹೇಳಿಕೊಂಡಿವೆ. Gayathri Women Welfare Association ಬಗ್ಗೆ ಇಲ್ಲಿ ಮೊನ್ನೆ ಪ್ರಸ್ತಾಪವಾಯಿತು. ಇವೊತ್ತು ಈ ಸಂಸ್ಥೆಯ ಜೊತೆಯಲ್ಲಿ ಮಾನ್ಯ ಮಂತ್ರಿಗಳು ಮೀಟಿಂಗ್ ಮಾಡಬೇಕಾಗಿತ್ತು ಆದರೆ. ಇಲ್ಲಿ ಚರ್ಚೆ ನಡೆಯುತ್ತಿರುವ ಕಾರಣದಿಂದ ಇದನ್ನು ಮುಂದೂಡಲಾಗಿದೆ. ಆದರೆ ಈ ಮಧ್ಯೆ ಅಲ್ಲಿ ಕೆಲಸ ಮಾಡುತ್ತಿರುವ ಮಹಿಳೆ

ಯರಿಗೆಲ್ಲಾ ಒಂದೊಂದು ಪತ್ರ ಬಂದಿದೆ. ನಿಮ್ಮನ್ನು ಡಿಸ್‌ಮಿಸ್ ಮಾಡುವುದಾಗಿ ಹೇಳುತ್ತಿದ್ದಾರೆ. ಇದರಿಂದ ಅವರಿಗಲ್ಲಾ ಗಾಬರಿಯಾಗಿದೆ. ಇದು ಮಹಿಳೆಯರಿಂದಲೇ ನಡೆಯುತ್ತಿರುವ ಸಂಸ್ಥೆಯಾದರೂ ಸಹ ಇಲ್ಲಿ ಮಹಿಳೆಯರಿಗೇ ಕಾಟ ಕೊಡುತ್ತಿದ್ದಾರೆ. ಇದನ್ನು ಮಾನ್ಯ ಮಂತ್ರಿಗಳು ತಪ್ಪಿಸಬೇಕು. ನನ್ನ ಕ್ಷೇತ್ರದಲ್ಲಿ Association for the Physically Handicapped ಎಂಬ ಸಂಸ್ಥೆ ಇದೆ. ಇದು 1959 ರಲ್ಲಿ ಸ್ಥಾಪನೆಯಾಯಿತು. ಈಗ ಇದು ಬೆಳ್ಳಿ ಹಬ್ಬದ ವರ್ಷದಲ್ಲಿದೆ. ಇಲ್ಲಿ ಮೊದಲು 600 ಕಾರ್ಮಿಕರು ಇದ್ದರು. ಆದರೆ ಇವೊತ್ತು ಕೇವಲ 60 ಮಂದಿ ಮಾತ್ರ ಇದ್ದಾರೆ. ಇನ್ನುಳಿದವರನ್ನು ಹೊರಗೆ ಹಾಕಿದ್ದಾರೆ. ಕುರುಡರು, ಕಿವುಡರು ಹಾಗೂ ಅಂಗವಿಕಲರಾದಂಥ ಇವರುಗಳು ಇಂದು ಬೀದಿಗಳಲ್ಲಿ ನಿಜವಾಗಿಯೂ ಭಿಕ್ಷೆ ಬೇಡುತ್ತಿದ್ದಾರೆ. ಈ ಸಂಸ್ಥೆಗೆ 60 ಲಕ್ಷ ರೂಪಾಯಿಗಳಷ್ಟು ಡೊನೇಷನ್ ಬಂದಿದೆ. ಸ್ವಿಟ್ಜರ್‌ಲೆಂಡ್ ಒಂದರಿಂದಲೇ 38 ಲಕ್ಷ ರೂಪಾಯಿಗಳು ಬಂದಿದೆ. ಕೇಂದ್ರ ಸರ್ಕಾರದ ಹಾಗೂ ರಾಜ್ಯ ಸರ್ಕಾರದ ಸಹಾಯವೂ ಇದಕ್ಕೆ ಸಿಕ್ಕಿದೆ. ಇಷ್ಟೆಲ್ಲಾ ಸಹಾಯ ಪಡೆದುಕೊಂಡು ಈ ಸಂಸ್ಥೆ ಅಲ್ಲಿನ ಕಾರ್ಮಿಕರನ್ನು ಬಹಳ ಶೋಷಣೆ ಮಾಡುತ್ತಿದೆ. ಇದನ್ನು ತನಿಖೆ ಮಾಡುವವರು ಯಾರೂ ಇಲ್ಲವೇ ? ಇದನ್ನು ನಡೆಸುತ್ತಿರುವವರು ಇವೊತ್ತು ದೊಡ್ಡ ದೊಡ್ಡ ಹುದ್ದೆಗಳಿಲ್ಲಿದ್ದಾರೆ. ಇವರ ಹೆಂಡತಿಯರುಗಳೂ ಸಹ ದೊಡ್ಡ ದೊಡ್ಡ ಹುದ್ದೆಗಳಲ್ಲಿದ್ದಾರೆ. ಇಂತಹವರ ಬಗ್ಗೆ ನಾವು ಇಲ್ಲಿ ಆರೋಪ ಮಾಡಿದರೆ ನಮ್ಮನ್ನೇ ದುಷ್ಟರು ಎಂದು ಹೇಳುತ್ತಾರೆ. ನಿಜವಾಗಿಯೂ ಸಹ ಅಲ್ಲಿ ಏನಾಗಿದೆ ಎಂಬುದನ್ನು ಕಂಡುಹಿಡಿಯುವ ಪ್ರಯತ್ನ ನಡೆಯುತ್ತಿಲ್ಲ. ಈ ಒಂದು ಸಂಸ್ಥೆಗೆ ಸರ್ಕಾರದ ಆರ್ಡರ್‌ಗಳೂ ಸಹ ಹೋಗುತ್ತಿರುವುದರಿಂದ ಇಲ್ಲಿನ ಕಾರ್ಮಿಕರಿಗೆ ಕಡಿಮೆ ಸಂಬಳ ಏತಕ್ಕೆ ಕೊಡುತ್ತಿದ್ದಾರೆ ಮತ್ತು ಅಲ್ಲಿಗೆ ಬಂದಂಥ ಡೊನೇಷನ್ ಎಲ್ಲಿ ಹೋಯಿತು ಎಂದು ಸರ್ಕಾರವನ್ನು ನಾವು ಕೇಳಬೇಕಾಗುತ್ತದೆ.

ಇನ್ನು ಹಿಂದಿನಿಂದ ನಡೆದುಕೊಂಡು ಬಂದ ಪ್ರವೃತ್ತಿ ಎಂದರೆ ಕಾರ್ಮಿಕ ಸಂಘಗಳನ್ನು ರೆಕಗ್‌ನೈಜ್ ಮಾಡದಿರುವುದು. ಯಾವುದು ನಿಜವಾದಂಥ ಕಾರ್ಮಿಕ ಸಂಘ ಎಂದು ತೀರ್ಮಾನ ಮಾಡಬೇಕಾದರೆ ಸೀಕ್ರೆಟ್ ಬ್ಯಾಲೆಟ್ ಮೂಲಕ ಕಂಡುಕೊಳ್ಳಬೇಕಾಗುತ್ತದೆ. ಈ ಒಂದು ಪದ್ಧತಿಗೆ ಎಲ್ಲಾ ಯೂನಿಯನ್‌ಗಳು ಒಪ್ಪಿಕೊಂಡರೂ ಸಹ ಐ.ಎನ್.ಟಿ.ಯು.ಸಿ. ಮಾತ್ರ ಒಪ್ಪಿಕೊಳ್ಳುತ್ತಿಲ್ಲ. ಎಲ್ಲಿಯವರೆಗೆ ಈ ಪದ್ಧತಿ ಜಾರಿಯಲ್ಲಿ ಬರುವುದಿಲ್ಲವೋ ಅಲ್ಲಿಯವರೆಗೆ ಅಶಾಂತಿ ಎಂಬುದು ಇದ್ದೇ ಇರುತ್ತದೆ. ಈಗ ಐ.ಟಿ.ಐ.ನಲ್ಲಿ ಕಳೆದ 12 ವರ್ಷಗಳಿಂದ ಚೆಕೋ ಸಿಸ್ಟಮ್ ಇದೆ. ಈ ಪದ್ಧತಿಗೂ ಸಹ ಅನೇಕ ಜನರ ವಿರೋಧವಿದೆ. ಆದರೆ ನಾನು ಈ ಪದ್ಧತಿಯನ್ನು ಒಪ್ಪಿಕೊಳ್ಳುತ್ತೇನೆ. ಈ ಒಂದು ಪದ್ಧತಿಯಿಂದ ಅಲ್ಲಿನ ಕಾರ್ಮಿಕರು ಧೈರ್ಯ ಕಳೆದುಕೊಂಡಿಲ್ಲ. ಇಲ್ಲಿಯ ಯೂನಿಯನ್ ಬಹಳ ಚೆನ್ನಾಗಿ ಬೆಳೆದುಕೊಂಡು ಬಂದಿದೆ. ಇದರಲ್ಲಿ ಯಾವ ತೊಂದರೆಯೂ ಸಹ ಇಲ್ಲ. ಆದ್ದರಿಂದ ನಾನು ಇದನ್ನು ಸ್ವೀಕಾರಮಾಡುತ್ತೇನೆ. ಆದ್ದರಿಂದ ಈ ಒಂದು ಪದ್ಧತಿಯನ್ನಾಗಲೀ ಅಥವಾ ಸೀಕ್ರೆಟ್ ಬ್ಯಾಲೆಟ್ ಮೂಲಕವಾಗಲೀ ಯಾವುದು ರೆಕಗ್‌ನೈಜ್ಡ್ ಯೂನಿಯನ್ ಎಂದು ತೀರ್ಮಾನ ಮಾಡುವುದು ಒಳ್ಳೆಯದು. ಇದನ್ನು ಎಲ್ಲಿಯವರೆಗೆ ಜಾರಿಗೆ ತರುವುದಿಲ್ಲ, ಅಲ್ಲಿಯವರೆಗೆ ಅಶಾಂತಿ ಮುಂದುವರೆದುಕೊಂಡು ಹೋಗುತ್ತದೆ. ಈಗ ಮೈಕೋನಲ್ಲಿ, ಇಂಡಿಯನ್ ಟೊಬ್ಯಾಕೋ ಕಂಪನಿಯಲ್ಲಿ ಅಶಾಂತಿ ಇದ್ದೇ ಇದೆ. ಮ್ಯಾಕ್‌ಮಿಲನ್ ಕಂಪನಿಯಲ್ಲಿ ಸೀಕ್ರೆಟ್ ಬ್ಯಾಲೆಟ್ ಮೂಲಕ ಯಾವುದು ರೆಕಗ್‌ನೈಜ್ಡ್ ಯೂನಿಯನ್ ಎಂದು ತೀರ್ಮಾನವಾಗಲಿ ಎಂದು ಮಾನ್ಯ ಅಜೀಜ್ ಸೇಠ್‌ರವರು ಆರ್ಡರ್ ಮಾಡಿದರು. ಆದ್ದರಿಂದ ನಾನು ಈ ಬಗ್ಗೆ ಅವರನ್ನು ಪ್ರಶಂಸೆ ಮಾಡುತ್ತೇನೆ. ಇದು ಎಲ್ಲಾ ಕಡೆಯೂ ಜಾರಿಗೆ ಬರಬೇಕು. ಇಲ್ಲದಿದ್ದರೆ ಒಂದು ಚಿಕ್ಕ ಕೈಗಾರಿಕೆಯಲ್ಲಿ ಕೆಲಸ ಮಾಡುವ 8 ಜನರು ಈ ಪದ್ಧತಿ ಬೇಡ ಎಂದು ಹೇಳಿಬಿಟ್ಟರೆ ಅಲ್ಲಿನ ಇತರೇ 800 ಜನ ಕಾರ್ಮಿಕರಿಗೆ ಒಂದು ಸಂಘ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ. ಆದ್ದರಿಂದ ಇದರ ಬಗ್ಗೆ ಒಂದು ಸರಿಯಾದ ಕಾನೂನನ್ನು ಮಾಡಬೇಕು.

ಇನ್ನು ಕಾರ್ಮಿಕ ಇಲಾಖೆಯ ಬಗ್ಗೆ ಕೊಟ್ಟಿರುವ ವರದಿಯ ಮೇಲೆ ನಾವು ಪ್ರತಿ ವರ್ಷವೂ ಟೀಕೆ ಟಿಪ್ಪಣಿಗಳನ್ನು ಮಾಡುವುದು ಇದ್ದೇ ಇದೆ. ನಾನು ಈ ಹಿಂದೆ ಹೇಳದಿರುವಂತಹ ಕೆಲವು ವಿಚಾರಗಳನ್ನು ಹೇಳುತ್ತೇನೆ. ಈಗ Shops and Establishment Actನ್ನು ಯಾರಾದರೂ ಉಲ್ಲಂಘನೆ ಮಾಡಿದರೆ ಮತ್ತು ಕೋರ್ಟಿನಲ್ಲಿ ಕನ್‌ವಿಕ್ಷನ್ ಆದರೆ ಸರಾಸರಿ 60 ರೂಪಾಯಿಗಳ ಜುಲ್ಮಾನೆ ಬೀಳುತ್ತದೆ. ಅದೇ 200 ರೂಪಾಯಿಗಳ ಸಂಬಳ ಪಡೆಯುವ ಒಬ್ಬ ಕಾರ್ಮಿಕ ಇಲ್ಲವೇ ಕಾರ್ಮಿಕ ಮುಖಂಡ ಮುಷ್ಕರಕ್ಕೆ ಬೆಂಬಲ ಕೊಟ್ಟರೆ ಅಂತಹವರಿಗೆ ಈಗಿನ ಕಾನೂನಿನ ಪ್ರಕಾರ ಎರಡು ಸಾವಿರ ರೂಪಾಯಿಗಳಷ್ಟು ಜುಲ್ಮಾನೆ ವಿಧಿಸಲಾಗುತ್ತದೆ. Payment of Minimum Wages Actನ್ನು ಉಲ್ಲಂಘನೆ ಮಾಡಿದಾಗಲೂ ಸಹ ಸರಾಸರಿ ಜುಲ್ಮಾನೆ ಬೀಳುವುದು 60 ರೂಪಾಯಿಗಳು ಮಾತ್ರ. ಇದನ್ನು ನಾನು ತಾವು ಕೊಟ್ಟ ಅಂಕಿ-ಅಂಶಗಳ ಪ್ರಕಾರವೇ ಹೇಳುತ್ತಿದ್ದೇನೆ. ಅದೇ ರೀತಿ ಪ್ಲಾಂಟೇಷನ್ ಆಕ್ಟ್‌ನ್ನು ಉಲ್ಲಂಘನೆ ಮಾಡಿದ ಬಗ್ಗೆ ಇಲ್ಲಿಯವರೆಗೆ ಒಂದೂ ಸಹ ಕನ್‌ವಿಕ್ಷನ್ ಆಗಿಲ್ಲ. ಇಲ್ಲಿಯವರೆಗೆ ಒಂದು ಕೇಸ್ ಸಹ ಹಾಕದಿರುವುದು ಬಹಳ ಶೋಚನೀಯವಾದುದು. ಇವೊತ್ತಿನ ದಿವಸ ಅರಣ್ಯ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವ ಪ್ಲಾಂಟೇಷನ್ ಕಾರ್ಮಿಕರು ಬಹಳ ಶೋಷಣೆಗೆ ಒಳಗಾಗುತ್ತಿದ್ದಾರೆ. ಅನೇಕರು ಈ ಕಾನೂನನ್ನು ಉಲ್ಲಂಘನೆ ಮಾಡುತ್ತಿದ್ದರೂ ಸಹ ಇಲ್ಲಿಯವರೆಗೆ ಒಂದು ಕೇಸನ್ನೂ ಸಹ ಹಾಕಿಲ್ಲ. ಒಬ್ಬರಿಗೂ ಸಹ ಶಿಕ್ಷೆಯಾಗಿಲ್ಲವೆಂದರೆ ಇದನ್ನು ನಂಬುವುದಕ್ಕಾಗುತ್ತದೆಯೇ ? ಇದರ

ಬದಲು ಈ ಇಲಾಖೆಯನ್ನೇ ವಿತ್‌ಡ್ರಾ ಮಾಡೋಣ. ಅಲ್ಲಿ ನಮ್ಮ ಅಧಿಕಾರಿಗಳು ಇರುವುದೇ ಬೇಡ. ಈಗ ಅಲ್ಲಿರುವಂತಹ ಅಧಿಕಾರಿಗಳು ಅವರಿಂದ ಲಂಚ ಪಡೆದುಕೊಂಡು ಇಲ್ಲಿ ಈ ಸದನದ ಮುಂದೆ ಸುಳ್ಳು ವಿಚಾರಗಳನ್ನು ಏತಕ್ಕೆ ಹೇಳಬೇಕು ? ಇದನ್ನೂ ಸಹ ನಾವು ನೋಡಬೇಕಾಗುತ್ತದೆ. ಇನ್ನು Workmen's Compensation Act ಬಗ್ಗೆ ಬಂದರೆ number of claims pending during the year—20% ಜಾಸ್ತಿಯಾಗಿದೆ. ವರ್ಷದ ಮೊದಲು 360 ಇದ್ದರೆ ವರ್ಷದ ಕೊನೆಯಲ್ಲಿ ಇದು 430ರವರೆಗೆ ಹೋಗಿದೆ. ಕೈಬೆರಳುಗಳನ್ನು ಕಳೆದುಕೊಂಡವರಿಗೆ, ಕೈಕಾಲುಗಳನ್ನು ಕಳೆದುಕೊಂಡವರಿಗೆ ತಾವು ಕೂಡಲೇ ಪರಿಹಾರ ಕೊಡದಿದ್ದರೆ ಈ ಜನರು ಜೀವನ ಮಾಡುವುದಾದರೂ ಹೇಗೆ? ಈ ಕೇಸ್‌ಗಳನ್ನು ನೋಡಲು ನಿಮ್ಮ ಇಲಾಖೆಯಲ್ಲಿ ಅಧಿಕಾರಿಗಳು ಸಾಕಷ್ಟು ಇಲ್ಲದಿದ್ದರೆ ಅವರನ್ನು ಹೆಚ್ಚು ಮಾಡಿ. ಒಟ್ಟಿನಲ್ಲಿ ಇಂತಹ ಕಾರ್ಮಿಕರಿಗೆ ಕೂಡಲೇ ಪರಿಹಾರ ಸಿಗುವಂತಹ ವ್ಯವಸ್ಥೆ ಮಾಡಬೇಕು.

ಇನ್ನು ಮಿನಿಮಮ್ ವೇಜಸ್ ಬಗ್ಗೆ ಸರ್ಕಾರದ ನೋಟಿಫಿಕೇಷನ್ ಆದಮೇಲೆ ಹೊಟೇಲ್‌ನವರು ಕೋರ್ಟಿಗೆ ಹೋದರು. ಕೋರ್ಟಿನಲ್ಲಿ ಇದು ಅಂತಿಮವಾಗಿ ತೀರ್ಮಾನವಾಗುವವರೆಗೆ ಹೆಚ್ಚು ವರಿಯಾಗಿರುವ ವೇಜಸ್‌ನಲ್ಲಿ ಅರ್ಧ ಭಾಗ ಕೊಡಬೇಕೆಂದು ಅಲ್ಲಿನ ಜಡ್ಜ್ ಹೇಳಿದರು. ಇದಕ್ಕೂ ಮೊದಲು ಹೊಟೇಲ್‌ನಲ್ಲಿ ಕೆಲಸ ಮಾಡುವವರು ಅಲ್ಲಿಯೇ ಊಟ ಮಾಡಿದರೆ ಅವರ ಸಂಬಳದಲ್ಲಿ 60 ರೂಪಾಯಿಗಳನ್ನು ಕಳೆದುಕೊಳ್ಳುವುದಕ್ಕೆ ಅವಕಾಶ ಇತ್ತು. ಆದರೆ ಈಗ 90 ರೂಪಾಯಿಗಳನ್ನು ಕಳೆದುಕೊಳ್ಳುವುದಕ್ಕೆ ಹೇಳಿದ್ದಾರೆ. ಆದರೆ ವೇಜಸ್ ಜಾಸ್ತಿಯಾಗಿರುವುದು 100 ರಿಂದ 150 ರೂಪಾಯಿಗಳು ಮಾತ್ರ. ಆದರೆ ಊಟದ ಬಾಬ್ತು 30 ರೂಪಾಯಿಗಳನ್ನು ಹೆಚ್ಚಿಗೆ ಹಿಡಿಯುತ್ತಿದ್ದಾರೆ. ಇದು ಸರಿಯಲ್ಲ. 90 ರೂಪಾಯಿಗಳ ಬದಲು 75 ರೂಪಾಯಿಗಳನ್ನು ಮಾತ್ರ ಊಟದ ಬಾಬ್ತು ಹಿಡಿದು ಇನ್ನುಳಿದ 15 ರೂಪಾಯಿಗಳು ಅವರ ಕೈಗೆ ಸಿಗುವಂತಹ ಒಂದು ವ್ಯವಸ್ಥೆಯಾಗಬೇಕು. ಇದರ ಕಡೆಗೂ ಸರ್ಕಾರ ಸ್ವಲ್ಪ ಆಸಕ್ತಿ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಕೈಗಾರಿಕೆಗಳನ್ನು ನಡೆಸುವವರಿಗೆ ಸರ್ಕಾರದಿಂದ ಎಲ್ಲ ಅನುಕೂಲಗಳೂ ಸಿಗುತ್ತಿವೆ. ನೀರು, ವಿದ್ಯುತ್ ಮೊದಲಾದ ಅನೇಕ ಅನುಕೂಲಗಳು ಸಿಕ್ಕಿದರೂ ಸಹ ಇವರು ತಮ್ಮ ನೌಕರರಿಗೆ ಮಿನಿಮಮ್ ವೇಜಸ್ ಕೊಡದೆ ಕೇವಲ 200 ರೂಪಾಯಿಗಳನ್ನು ಮಾತ್ರ ಕೊಟ್ಟರೆ ಕಾರ್ಮಿಕರು ಜೀವನ ನಡೆಸುವುದಾದರೂ ಹೇಗೆ ? ಮಾಲೀಕರಿಗೆ ಲಾಭ ಸಿಗಬೇಕಾದರೆ, ಕಾರ್ಮಿಕರು ಚೆನ್ನಾಗಿ ದುಡಿಯಬೇಕು. ಕಡಿಮೆ ಸಂಬಳ ಕೊಟ್ಟರೆ ಕಾರ್ಮಿಕರು ದುಡಿಯಲಿಕ್ಕೆ ಸಾಧ್ಯವಾಗುತ್ತದೆಯೇ ? ಸರ್ಕಾರ ಕಾರ್ಮಿಕರಿಗೆ ಮಿನಿಮಮ್ ಫೆಸಿಲಿಟೀಸ್ ದೊರೆಯುವ ಹಾಗೆ ಮಾಡಿದರೆ ಮಾಲೀಕರು ಬಗ್ಗುತ್ತಾರೆಂದು ನನ್ನ ಅಭಿಪ್ರಾಯ. ಈಗ ಇನ್ಸೂರೆನ್ಸ್ ಸ್ಕೀಮ್ ತೆಗೆದುಕೊಂಡು ಬಂದಿದ್ದಾರೆ. ಹಳ್ಳಿಗಾಡು ಪ್ರದೇಶಗಳಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರಿಗೆ ಏನಾದರೂ ತೊಂದರೆಯಾದರೆ ಅವರಿಗೆ ಕಾಂಪೆನ್‌ಸೇಷನ್ ಕೊಡಲಿಕ್ಕೆ ಇನ್ಸೂರೆನ್ಸ್ ಸ್ಕೀಮ್ ಮಾಡಿದ್ದಾರೆ. ಆದರ ಪ್ರೀಮಿಯಮ್ ಎಷ್ಟು ? ಪ್ರೀಮಿಯಮ್ 1·28 ಪೈಸೆ, 28 ಪೈಸೆಗಳನ್ನು ಹೇಗೆ ಕಲೆಕ್ಟ್ ಮಾಡುತ್ತೀರಿ ? 1·28 ಪೈಸೆ ಇದು ಸಾಲದು, 1·50 ಪೈಸೆಯನ್ನಾದರೂ ಮಾಡಬೇಕು. ಇಲ್ಲವೇ 1·30 ಪೈಸೆ ಎಂದು ಮಾಡಿ ಅಥವಾ ಪ್ರೀಮಿಯಮ್ 2 ರೂಪಾಯಿಗಳು ಎಂದು ಮಾಡಿ. ಕಾಲು ಕೈ, ಕಣ್ಣು ಕಳೆದುಕೊಂಡಂತಹವರಿಗೆ 2 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಮಾಡಿದ್ದೀರಿ. ಇದು ಸಾಲದು. 2 ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಅವರು ಏನು ಮಾಡುವುದಕ್ಕೆ ಆಗುತ್ತದೆ ? ಕೊಡುವಂತಹ ಪರಿಹಾರದ ಹಣ ಜಾಸ್ತಿಯಾಗಬೇಕು. ಪ್ರೀಮಿಯಮ್ ದರ ಜಾಸ್ತಿಯಾಗಬೇಕು. ಪ್ರೀಮಿಯಮ್ ದರ 1·28 ಪೈಸೆ ಅದನ್ನು ಮೊದಲು ರೌಂಡ್ ಆಫ್ ಮಾಡಿ, ಡಿಪಾರ್ಟ್‌ಮೆಂಟ್‌ನವರು ಮೊದಲು ಇದನ್ನು ಕಲಿತುಕೊಳ್ಳಬೇಕು. ಈಗ ಇಂಡಸ್ಟ್ರಿಯಲ್ ಲೇಬರ್ ಕೋರ್ಟ್ ಆಗಿದೆ, ನನ್ನ ಕ್ಷೇತ್ರದಲ್ಲಿರುವ 400 ಜನ ಅಂಗವಿಕಲರನ್ನು ಕೆಲಸದಿಂದ ವಜಾ ಮಾಡಿದರು. ಕೇಸು ಕೋರ್ಟ್‌ನಲ್ಲಿದೆ, 10 ವರ್ಷಗಳಾಯಿತು. 1973ನೇ ಇಸವಿಯಿಂದ ಲೇಬರ್ ಕೋರ್ಟ್‌ನಲ್ಲಿ ಇವತ್ತಿನವರೆಗೂ ಕೇಸ್‌ಗಳಿವೆ. ಮಾನ್ಯ ಅಜೀಜ್ ಸೇಠ್‌ರವರು ಕಾರ್ಮಿಕ ಮಂತ್ರಿಗಳಾದ ಮೇಲೆ ಲೇಬರ್ ಕೋರ್ಟ್‌ನಿಂದ ಇಂಡಸ್ಟ್ರಿಯಲ್ ಟ್ರಿಬ್ಯೂನಲ್ ಕೋರ್ಟ್‌ಗೆ ವರ್ಗಾಯಿಸಿದ್ದಾರೆ. 10 ವರ್ಷಗಳ ಕಾಲ ಅಂಗವಿಕಲರು ಏನು ಮಾಡಬೇಕೆಂಬುದನ್ನು ಯೋಚನೆ ಮಾಡಬೇಕು. ಕೋರ್ಟ್‌ಗಳಲ್ಲಿ ಜಡ್ಜ್‌ಗಳು ಸಾಲದೇ ಇದ್ದರೆ ಅದನ್ನು ಅಸಡ್ಡೆಯೆಂದು ಹೇಳುವುದಕ್ಕಾಗುವುದಿಲ್ಲ. ಹೆಚ್ಚಿನ ಕೋರ್ಟ್‌ಗಳನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಫ್ಯಾಕ್ಟರೀಸ್ ಬಾಯ್ಲರ್ಸ್‌ಗಳ ಬಗ್ಗೆ ಹೇಳುವುದಾದರೆ, ಹಾಕಿದಂತಹ ಮೂರು ಕೇಸುಗಳನ್ನು ವಿತ್‌ಡ್ರಾ ಮಾಡಿದ್ದಾರೆ. ಚೀಫ್ ಇನ್ಸ್‌ಪೆಕ್ಟರ್ ಆಫ್ ಫ್ಯಾಕ್ಟರೀಸ್ ಅಂಡ್ ಬಾಯ್ಲರ್ ಪ್ರಾಸಿಕ್ಯೂಟ್ ಮಾಡಿದಂತಹ ಕೇಸುಗಳನ್ನು ವಿತ್‌ಡ್ರಾ ಮಾಡಿದ್ದಾರೆಂದು ನನ್ನ ಗಮನಕ್ಕೆ ಬಂದಿದೆ. ವೆಸ್ಟ್ ಪ್ರಾಫಿಟ್ ಕಂಪನಿ, ಸುಜಾತ, ಇನ್ನೊಂದು ಬೆಂಗಳೂರಿನದು ಎಂದು ಕಾಣುತ್ತದೆ. ಈ ಮೂರು ಕೇಸುಗಳನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಆಕ್ಸಿಡೆಂಟ್ ಆಗಿ ಸತ್ತಿದ್ದಾರೆ, ಅಂತಹವರ ಮೇಲೆ ಕೇಸ್ ಹಾಕಿದರೆ ಅದು ಪ್ರಾಸಿಕ್ಯೂಷನ್ ಅಲ್ಲವೆಂದರೆ ಇದು ಸರ್ಕಾರದ ತಪ್ಪು ಎಂದು ನಾನು ತಿಳಿದುಕೊಂಡಿದ್ದೇನೆ. ಅಂಕಿಸಂಖ್ಯೆಗಳ ಮುಖಾಂತರ ನೋಡಿದರೆ ಫ್ಯಾಕ್ಟರೀಸ್ ಇನ್ಸ್‌ಪೆಕ್ಷನ್ ಸರಿಯಾಗಿ ನಡೆಯುತ್ತಿಲ್ಲ. ನಿಮ್ಮ ಲೆಕ್ಕದ ಪ್ರಕಾರ ಅವರು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಇದಕ್ಕೆ ಸಿಬ್ಬಂದಿ ಸಾಲುವುದಿಲ್ಲ. ಅದನ್ನು ಸರಿಪಡಿಸುವುದು ಸರ್ಕಾರದ ಕರ್ತವ್ಯ.

ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಅಂಡ್ ಟ್ರೈನಿಂಗ್ ಬಗ್ಗೆ ಹೇಳುವುದಾದರೆ ಇವತ್ತು ಮೆಡಿಕಲ್ ಮತ್ತು ಇಂಜಿನಿಯರಿಂಗ್ ಸೀಟುಗಳು ಸಿಗಬೇಕಾದರೆ ಮೆರಿಟ್ ಆಧಾರದ ಮೇಲೆ ಸಿಗುತ್ತದೆಂದು ಹೇಳುತ್ತಾರೆ. ಇದರಿಂದ ಎಲ್ಲರಿಗೂ ಸಮಾಧಾನವಾಗುತ್ತದೆ. ಹುಡುಗನಿಗೆ ಸೀಟು ಸಿಗದಿದ್ದರೆ, ಮೆರಿಟ್ ಇಲ್ಲ ಅದಕ್ಕೋಸ್ಕರ ಸೀಟು ಸಿಗಲಿಲ್ಲವೆನ್ನುವ ಒಂದು ಸಮಾಧಾನವಿರುತ್ತದೆ. ಸೀಟು ಸಿಕ್ಕಿದರೆ ಮೆರಿಟ್ ಇದೆ ಆದ್ದರಿಂದ ನಮ್ಮ ಹುಡುಗನಿಗೆ ಸೀಟು ಸಿಕ್ಕಿದೆ ಎನ್ನುವುದು ಎಲ್ಲರಿಗೂ ಗೊತ್ತಾಗುತ್ತದೆ. ಈಗ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ಇಂಟರ್‌ವ್ಯೂ ಸಿಗಬೇಕಾದರೆ ಲಂಚ ಕೊಡಬೇಕು, ಲಂಚ ಕೊಡದಿದ್ದರೆ ಇಂಟರ್‌ವ್ಯೂ ಇಲ್ಲ. ಇದರ ಬಗ್ಗೆ ಮಾನ್ಯ ಕಾರ್ಮಿಕ ಸಚಿವರಿಗೆ ಸಲಹೆ ಕೊಡುವುದೇನೆಂದರೆ ಯಾವ ವರ್ಷದಲ್ಲಿ ಯಾವ ನಂಬರ್‌ವರೆಗೆ ಇಂಟರ್‌ವ್ಯೂ ಕಳುಹಿಸಿ ಕೊಟ್ಟಿದ್ದೀರಿ ಎಂದು ತಿಂಗಳಿಗೊಮ್ಮೆ ಪಬ್ಲಿಷ್ ಮಾಡಬೇಕು. ಆಗ ಎಲ್ಲರಿಗೂ ಸಮಾಧಾನವಾಗುತ್ತದೆ. ನಮ್ಮ ಹತ್ತಿರ ಬಂದು ಕೆಲವರು ನಾವು ರಿಜಿಸ್ಟರ್ ಮಾಡಿಸಿ 8 ವರ್ಷಗಳಾಯಿತು, ನಮಗಿಂತ ಜೂನಿಯರ್ಸ್‌ಗೆ ಇಂಟರ್‌ವ್ಯೂ ಕೊಟ್ಟಿದ್ದಾರೆಂದು ದೂರು ಹೇಳುತ್ತಾರೆ. ಆಗ ನಾವು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ಗೆ ಪತ್ರ ಬರೆದರೆ, ಅವರು ನಾವು ಸೀನಿಯಾರಿಟಿ ಪ್ರಕಾರ ಇಂಟರ್‌ವ್ಯೂ ಕಳುಹಿಸುತ್ತಿದ್ದೇವೆಂದು ಪತ್ರ ಬರೆಯುತ್ತಾರೆ. ನನಗಿಂತ ಕಡೆಯಲ್ಲಿ ರಿಜಿಸ್ಟರ್ ಮಾಡಿಸಿದವನಿಗೆ ಕೆಲಸ ಸಿಕ್ಕಿದೆ ಅಂದರೆ ನಾವು ಹೋಗಿ ತನಿಖೆ ಮಾಡುವುದಕ್ಕೇ ಆಗುವುದಿಲ್ಲ. ಆದ್ದರಿಂದ ವಾರಕ್ಕೊಮ್ಮೆ, ತಿಂಗಳಿಗೊಮ್ಮೆ, ಕನಿಷ್ಠಪಕ್ಷ 2 ತಿಂಗಳಿಗೊಮ್ಮೆ ಇಂತಿಷ್ಟು ನಂಬರ್‌ವರೆಗೆ ಇಂಟರ್‌ವ್ಯೂ ಕಳುಹಿಸಿದ್ದೇವೆಂದು ಪಬ್ಲಿಷ್ ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆ. ಆಗ ರಿಜಿಸ್ಟರ್ ಮಾಡಿಸಿರುವವರಿಗೂ ಕೂಡ ಸಮಾಧಾನವಾಗುತ್ತದೆ. ನಾಲ್ಕನೇ ದರ್ಜೆ ನೌಕರಿಗಳು ಸರ್ಕಾರೀ ಉಧ್ಯಮಗಳಲ್ಲಿ, ಫ್ಯಾಕ್ಟರಿಗಳಲ್ಲಿ, ಕಾರ್ಪೋರೇಷನ್‌ಗಳಲ್ಲಿ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಮೂಲಕ ಒಬ್ಬರಿಗೂ ನೌಕರಿ ಸಿಗುವುದಿಲ್ಲ. ಇದು ಬಹಳ ಕಾಲದಿಂದಲೂ ಹಾಗೆಯೇ ನಡೆದುಕೊಂಡುಬಂದಿದೆ. ಅವರಿಗೆ ಬೇಕಾದವರಿಗೆ ಲಂಚ ತೆಗೆದುಕೊಂಡು ಕೊಡುವುದು, ಶಿಫಾರಸ್ಸು ಮಾಡಿದವರಿಗೆ ಕೊಡುವುದು, ಈ ತರಹ ಒಂದು ಪದ್ಧತಿ ಅಲ್ಲಿ ನಡೆದುಕೊಂಡು ಬಂದುಬಿಟ್ಟಿದೆ. ಸರ್ಕಾರವೇ ಈ ತರಹ ಮಾಡಿ ಬೇರೆಯವರು ಭ್ರಷ್ಟಾಚಾರ ಮಾಡಲೇಬಾರದೆಂದು ಹೇಳಿದರೆ ಹೇಗೆ ? ಸರ್ಕಾರೀ ಉದ್ಯಮಗಳಲ್ಲಿ ಶೇಕಡ 3ರಷ್ಟು ಹುದ್ದೆಗಳನ್ನು ಅಂಗವಿಕಲರಿಗೆ ಮೀಸಲಾತಿ ಇಡಬೇಕೆಂದು ನನ್ನ ಸಲಹೆ ಇದೆ, ಇದನ್ನು ಮಾನ್ಯ ಕಾರ್ಮಿಕ ಮಂತ್ರಿಗಳು ಒಪ್ಪಿಕೊಳ್ಳುತ್ತಾರೆ. ಪಬ್ಲಿಕ್ ಸೆಕ್ಟಾರ್ ಕಾರ್ಮಿಕರು ಸ್ಟ್ರೈಕ್ ಮಾಡಿದಾಗ ಕೆಲವರನ್ನು ಡಿಸ್‌ಮಿಸ್ ಮಾಡಿದ್ದಾರೆ, ಕೆಲವರನ್ನು ಡಿಮೋಟ್ ಮಾಡಿದ್ದಾರೆ, ಕೆಲವರಿಗೆ ಇನ್‌ಕ್ರಿಮೆಂಟ್ ಕಟ್ ಮಾಡಿದ್ದಾರೆ. ಮಾನ್ಯ ಗುಂಡೂರಾಯರು ಕೂಡ ಮ್ಯಾನೇಜ್‌ಮೆಂಟ್‌ನವರ ಜೊತೆ ಮಾತನಾಡಿ ಅವರನ್ನು ರಕ್ಷಿಸುತ್ತೇನೆಂದು ಹೇಳಿ ಒಂದು ಭರವಸೆಯನ್ನು ಕೊಟ್ಟಿದ್ದರು. ಅವರು ಮಾಡಲಿಲ್ಲ. ಈಗಿನ ಕಾರ್ಮಿಕ ಮಂತ್ರಿಗಳು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Now I come to " long distance night buses ". I tell you they are torture chambers on wheels. ಸಿಟಿಗಳಲ್ಲಿ ಓಡಾಡತಕ್ಕ ಬಸ್ಸುಗಳನ್ನು ಲಾಂಗ್‌ರೂಟ್‌ಗಳಲ್ಲಿ ಓಡಾಡಿಸುತ್ತಿದ್ದಾರೆ. 50, 54 ಜನ ಕುಳಿತುಕೊಳ್ಳುವ ಸಿಟಿ ಬಸ್ಸುಗಳನ್ನು ಇಡೀ ರಾತ್ರಿ ಕಾರವಾರದಿಂದ ಬೆಂಗಳೂರಿಗೆ 14 ಗಂಟೆ ಪ್ರಯಾಣ ಮಾಡಬೇಕು, ಅಷ್ಟು ಚಿಕ್ಕ ಜಾಗದಲ್ಲಿ ಇಡೀ ರಾತ್ರಿ ಕುಳಿತುಕೊಂಡು ನಿದ್ದೆ ಮಾಡಲಿಕ್ಕೆ ಹೇಗೆ ಸಾಧ್ಯ ? ಮಂತ್ರಿಗಳಿಗೂ ಅನುಭವವಿರಬಹುದು. ಆ ಡಿಸೈನ್ ಮಾಡಿದವರು ಯಾರು ? ಅಷ್ಟು ಚಿಕ್ಕ ಜಾಗದಲ್ಲಿ ಕಾರವಾರದಿಂದ ಬೆಂಗಳೂರಿಗೆ ಬರಬೇಕಾದರೆ ಕಾಲು ಊದಿಕೊಂಡು ಹೋಗುತ್ತದೆ. ಡಿಸೈನ್ ಮಾಡುವ ಅಧಿಕಾರಿಗಳು ಪ್ರಯಾಣ ಮಾಡಿ ನೋಡಿದರೆ ಗೊತ್ತಾಗುತ್ತದೆ. ಅರ್ಧ ಗಂಟೆ 1 ಗಂಟೆ ಪ್ರಯಾಣ ಮಾಡುವುದು ಇದ್ದರೆ ಪರವಾಗಿಲ್ಲ. ರಾತ್ರಿ ಓಡತಕ್ಕ ಬಸ್ಸುಗಳು ಯಾವ ರೀತಿ ಇರಬೇಕೆಂಬುದನ್ನು ತಿಳಿದುಕೊಳ್ಳಬಾರದೆ ? ಸಿಟಿ ಬಸ್ ಯಾವ ರೀತಿ ಇರಬೇಕು, ಎಕ್ಸ್‌ಪ್ರೆಸ್ ಬಸ್ ಯಾವ ರೀತಿ ಇರಬೇಕು, ಎಕ್ಸ್‌ಪ್ರೆಸ್ ಬಸ್‌ಗಳ ತರಹ ಲಗ್ಷುರಿ ಬಸ್‌ಗಳನ್ನು ಮಾಡಿದರೆ ಹೇಗೆ ? Is this not a torture chamber on wheels ? I would like to know. ಲಗ್ಷುರಿ ಬಸ್ಸುಗಳಲ್ಲಿ 36 ಸೀಟುಗಳು ಇರಬೇಕು, ಅದಕ್ಕಿಂತ ಜಾಸ್ತಿಯಿರಬಾರದು. ಬಸ್ಸುಗಳಲ್ಲಿ ಕುಳಿತುಕೊಂಡು ಮುಂದೆ ಕಾಲು ಚಾಚುವುದಕ್ಕೆ ಆಗುವುದಿಲ್ಲ. ಡಿಸೈನ್ ಮಾಡುವವರಿಗೆ ತಲೆಯೊಳಗೆ ಸಗಣಿ ಇರಬೇಕು, ಅವರ ತಲೆಯೊಳಗೆ ಬುದ್ಧಿಯಿಲ್ಲ. 50 ರೂಪಾಯಿಗಳು 80 ರೂಪಾಯಿಗಳನ್ನು ಕೊಟ್ಟು ಪ್ರಯಾಣ ಮಾಡುವವರು ಕಾಲು ಚಾಚುವುದಕ್ಕೆ ಆಗುವುದಿಲ್ಲ ಎಂದರೆ ಹೇಗೆ, ಅವರು 14 ಗಂಟೆಗಳ ಕಾಲ ಪ್ರಯಾಣ ಹೇಗೆ ಮಾಡಬೇಕು ? ಸೀಟಿನ ಮುಂದುಗಡೆ ಸಾಕಷ್ಟು ಜಾಗವಿರಬೇಕು. ಬಸ್ ಡ್ರೈವರ್ ಹಿಂದುಗಡೆ ಕೆಲವು ಪ್ರತಿಮೆಗಳು ಬೇರೆ, ಹೆಂಗಸರ ಡ್ಯಾನ್ಸ್ ಮಾಡುವ ಪೋಸ್ಟರುಗಳನ್ನು ಹಾಕಿರುತ್ತಾರೆ. ಬಸ್ಸಿನಲ್ಲಿ ಕುಳಿತಿರುವವರು ಅದನ್ನೇ ರಾತ್ರಿಯೆಲ್ಲಾ ನೋಡಿಕೊಂಡು ಪ್ರಯಾಣ ಮಾಡುವುದಕ್ಕೆ ಆಗುತ್ತದೆಯೆ ? ಅವು ಕೇವಲ ಪ್ರತಿಮೆಗಳಲ್ಲ, ಅರೆಬೆತ್ತಲೆಯ ಹೆಂಗಸು.

ಶ್ರೀ ಕೆ. ಹೆಚ್. ರಂಗನಾಥ್.—ಮೊದಲು ಹಾಗೆಯೇ ಇದ್ದಿರಿ, ಈಗ ಮದುವೆ ಮಾಡಿಕೊಂಡ ಮೇಲೂ ಹೆಂಗಸರ ಮೇಲೆ ಕೋಪ ಮಾಡಿಕೊಂಡರೆ ಹೇಗೆ ? ಯಾವ್ಯಾವ ತರಹ ಪೋಸ್ಟರುಗಳು ಇರಬೇಕು ಹೇಳಿ,

ಅದನ್ನು ವ್ಯವಸ್ಥೆ ಮಾಡುತ್ತಾರೆ. ಒಂದೇ ತರಹ ಪೋಸ್‌ಗಳನ್ನು ನೋಡಲಿಕ್ಕೆ ಆಗುವುದಿಲ್ಲ, ಬೇರೆ ಬೇರೆ ತರಹ ಪೋಸ್‌ಗಳನ್ನು ಹಾಕಿ ಎಂದು ಹೇಳಿ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಬಸ್‌ಗಳನ್ನು ಡಿಸೈನ್ ಮಾಡತಕ್ಕವರು ಯಾರು ? ಅವರು ಮೊದಲು ಬಸ್ಸಿನಲ್ಲಿ ಪ್ರಯಾಣ ಮಾಡಬೇಕು, ಆಗ ಅವರಿಗೆ ಗೊತ್ತಾಗುತ್ತದೆ. Every designer must first sit in those buses and travel. If he is satisfied then let him certify it. ಮುಂದೆ ಇರತಕ್ಕದ್ದನ್ನು ಕಟ್‌ಔಟ್ ಮಾಡಲಿ, ರಾತ್ರಿ ಪ್ರಯಾಣ ಮಾಡತಕ್ಕ ಜನಗಳಿಗೆ ಸೌಕರ್ಯ ಒದಗಿಸುವಂತಹ ವ್ಯವಸ್ಥೆಯನ್ನು ಹೊಸ ಮಂತ್ರಿಗಳು ಮಾಡಬೇಕು. ಇದರ ಕಡೆಗೆ ಗಮನ ಹರಿಸು ತ್ತಾರೆಂದು ನಾನು ನಂಬಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಜಿ. ರಾಮಲಿಂಗಯ್ಯ (ಚಿಕ್ಕನಾಯಕನಹಳ್ಳಿ).—ಗೌರವಾನ್ವಿತ ಅಧ್ಯಕ್ಷರೇ ಈ ದಿವಸ ಸಾರಿಗೆ ಇಲಾಖೆ ಹಾಗೂ ತೋಟಗಾರಿಕೆ ಇಲಾಖೆಯ ಮೇಲೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಸಾರಿಗೆ ವ್ಯವಸ್ಥೆ ಸ್ವಾತಂತ್ರ್ಯ ಬಂದ ಲಾಗಾಯ್ತು ಸರ್ಕಾರದ ವತಿಯಿಂದಲೇ ನಡೆಯುತ್ತಿತ್ತು. ನಂತರ ಕಾರ್ಪೋರೇಷನ್ ಆಗಿ ಪರಿವರ್ತನೆಯಾಯಿತು. ನಾವು ನಮ್ಮ ರಾಜ್ಯದ ಸಾರಿಗೆ ವ್ಯವಸ್ಥೆಯ ಜೊತೆಗೆ ಪಕ್ಕದ ರಾಜ್ಯದ ಸಾರಿಗೆ ವ್ಯವಸ್ಥೆಯನ್ನು ಒಂದೊಂದು ಸಾರಿ ನೋಡುತ್ತೇವೆ. ನನಗೆ ತಮಿಳು ಓದುವುದಕ್ಕೆ ಬರು ವುದಿಲ್ಲ. ತಮಿಳುನಾಡು ಸರ್ಕಾರಿ ಬಸ್ಸುಗಳನ್ನು ನೋಡಿದ್ದೇನೆ. ಅಲ್ಲಿಯ ಬಸ್ಸುಗಳ ಮೇಲೆ ಚೋಳ, ಪಲ್ಲವ, ಚೇರಾ, ಪಾಂಡ್ಯನ್, ಈ ರೀತಿ ರಾಜರುಗಳ ಹೆಸರುಗಳನ್ನು ಬರೆದಿರುತ್ತಾರೆ. ನನಗೆ ಓದಲಿಕ್ಕೆ ಬರಲಿಲ್ಲ, ಯಾರೋ ಓದಿ ಹೇಳಿದರು. ಅದೇ ರೀತಿ ನಮ್ಮ ಕರ್ನಾಟಕ ರಾಜ್ಯದಲ್ಲೂ ಸಹ ಕರ್ನಾಟಕ ಕೀರ್ತಿ ಧ್ವಜವನ್ನು ಎತ್ತಿಹಿಡಿದಂತಹ ರಾಜರುಗಳು, ಸಾಮ್ರಾಟರುಗಳು ಇದ್ದಾರೆ. ರಾಷ್ಟ್ರಕೂಟರು, ಚಾಲುಕ್ಯರು, ಹೊಯ್ಸಳರು, ವಿಜಯನಗರ ದೊರೆಗಳಾದ ಸಂಗಮರು, ಇನ್ನಿತರ ದೊರೆಗಳು ಇದ್ದಾರೆ.

ವಿಜಯನಗರದ ದೊರೆಗಳು ಮತ್ತು ಸಂಗಮರು ಹಾಗೂ ಗಂಗ ವಂಶದವರು ಇತ್ಯಾದಿ ರಾಜಮನೆತನದ ಹೆಸರುಗಳು ನಮ್ಮಲ್ಲಿ ಕೂಡ ಇವೆ. ಇದಲ್ಲದೆ ಕೆಳದಿ, ಕಿತ್ತೂರು ಚೆನ್ನಮ್ಮ, ಇತ್ಯಾದಿ ವಂಶದ ರಾಜ ಮಹಾ ರಾಜರುಗಳ ಹೆಸರುಗಳು ಇವೆ. ಅವು ನಮ್ಮ ರಾಜ್ಯದ ಸಂಸ್ಕೃತಿಯನ್ನು ಎತ್ತಿ ತೋರಿಸುತ್ತವೆ. ಆದ್ದರಿಂದ ಅವರ ಹೆಸರುಗಳನ್ನು ನಮ್ಮ ರಾಜ್ಯದ ಸಾರಿಗೆ ಬಸ್ಸುಗಳಿಗೆ ಇಟ್ಟರೆ ಒಳ್ಳೆಯದೆಂದು ನನ್ನ ಸಲಹೆ. ಮತ್ತೆ ಈ ಸಾರಿಗೆ ಸಂಸ್ಥೆಯಲ್ಲಿ ಲಕ್ಷಾಂತರ ರೂಪಾಯಿಗಳು ನಷ್ಟವಾಗುತ್ತಿವೆ ಎಂದು ಇದುವರೆಗೂ ಮಾತನಾಡಿದಂಥ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಆದರೆ ಆ ವಿಷಯವನ್ನು ನಾನು ಮತ್ತೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅದು ಬಿಟ್ಟು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ಕ್ಷೇತ್ರದಲ್ಲಿ ಸುಮಾರು 5–6 ದಿವಸಗಳಲ್ಲಿ ಒಂದು ಮೀಟಿಂಗ್ ಕರೆದಿದ್ದಾರೆ. ತಿಪಟೂರು ಮತ್ತು ಅರಕಲಗೂಡು ಹಾಗೂ ಹುಳಿಯಾರದುರ್ಗ ಈ ಕಡೆಗಳಿಗೆ ಬಸ್ಸು ಲೈನ್ ಹಾಕಿಕೊಡಬೇಕೆಂದು ನಾನು ಕೇಳಿದ್ದೇನೆ. ಮತ್ತೆ ತೀರ್ಥಪುರದಿಂದ ಕೂಡ ಒಂದು ಬಸ್ಸು ಲೈಸು ಹಾಕಿಕೊಡಬೇಕೆಂದು ನಾನು ಕೇಳಿಕೊಳ್ಳು ತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಸಂಚಾರ ಮಾಡುತ್ತಿರುವ ಬಸ್ಸುಗಳನ್ನು ಕಾಲಕ್ಕೆ ಸರಿಯಾಗಿ ರಿಪೇರಿ ಮಾಡಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

ಇನ್ನು ಪಶುಸಂಗೋಪನ ಮತ್ತು ತೋಟಗಾರಿಕೆಯ ಬಗ್ಗೆ ಪ್ರಸ್ತಾಪ ಮಾಡುವುದಾದರೆ ಇದುವರೆಗೂ ನಮ್ಮ ಮಾನ್ಯ ತೋಟಗಾರಿಕೆ ಮಂತ್ರಿಗಳನ್ನು ಬಹಳ ಜನರು ಹೊಗಳಿದ್ದಾರೆ. ತೆಂಗು ಅಭಿವೃದ್ಧಿಯನ್ನು ಮಾಡುವುದಕ್ಕಾಗಿ ಬ್ಯಾಂಕ್‌ಗಳ ಮುಖಾಂತರ ಸಾಲವನ್ನು ಕೊಡಿಸಿ ಹೆಚ್ಚು ತೆಂಗು ಅಭಿವೃದ್ಧಿಯನ್ನು ಮಾಡಿಸುತ್ತಿದ್ದಾರೆ. ಆದರೆ ಬರಗಾಲ ಪ್ರದೇಶದಲ್ಲಿ ಈ ತೆಂಗಿನ ಸಸಿಗಳನ್ನು ಸರಿಯಾಗಿ ಕಾಪಾಡಿಕೊಳ್ಳಲು ಆಗದೆ ಕೋಟ್ಯಾಂತರ ರೂಪಾಯಿಗಳ ಅನ್ಯಾಯವಾಗಿದೆ. ಈ ರೀತಿ ಅನ್ಯಾಯವಾಗದಂಥ ರೀತಿಯಲ್ಲಿ ಮಾನ್ಯ ಮಂತ್ರಿಗಳು ವ್ಯವಸ್ಥೆ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ತೆಂಗಿನ ಸಸಿಗಳಿಗೆ ಔಷಧಿಯನ್ನು ಸಂಪಡಿಸಲು ರೈತನಲ್ಲಿ ಲಕ್ಷಾಂತರ ರೂಪಾಯಿಗಳು ಇಲ್ಲ. ಆ ತೆಂಗಿನ ಸಸಿಗಳಿಗೆ ಔಷಧಿಯನ್ನು ಸರ್ಕಾರದವರೇ ಒದಗಿಸಿಕೊಡಬೇಕೆಂದು ಕೂಡ ನಾನು ಸಲಹೆ ಮಾಡುತ್ತೇನೆ. ಈ ತೆಂಗು ಅಭಿವೃದ್ಧಿಯ ಬಗ್ಗೆ ವಿಚಾರ ವಿನಿಮಯವನ್ನು ಮಾಡಲು ಲೋಕೋಪಯೋಗಿ ಇಲಾಖೆಯವರು ಮತ್ತು ತೋಟಗಾರಿಕೆ ಇಲಾಖೆಯವರು ಜಾಯಿಂಟ್ ಇನ್ಸ್‌ಪೆಕ್ಷನ್ ಮಾಡುತ್ತಾರೆ. ಆದರೆ ಇದರಿಂದ ರೈತನಿಗೆ ಸರಿಯಾಗಿ ಅನುಕೂಲವಾಗುತ್ತಿಲ್ಲ. ಇದನ್ನು ತಾವು ಸ್ವತಃ ತೋಟಗಾರಿಕೆ ಇಲಾಖೆಯವರಿಂದ ಮಾಡಿಸಬೇಕೆಂದು ನಾನು ಸಲಹೆ ಮಾಡುತ್ತೇನೆ. ಈ ಬಗ್ಗೆ ನಾನು ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳಿಗೂ ಮತ್ತು ವ್ಯವಸಾಯ ಇಲಾಖೆಯ ಮಂತ್ರಿಗಳಿಗೂ ಹಾಗೂ ಮುಖ್ಯಮಂತ್ರಿಗಳಿಗೂ ಪತ್ರವನ್ನು ಬರೆದಿದ್ದೇನೆ. ಆದರೆ ಮಾನ್ಯ ಮುಖ್ಯಮಂತ್ರಿ ಗಳ ಕಛೇರಿಯಿಂದ ನನಗೆ ಒಂದು ಎಂಡಾರ್ಸ್‌ಮೆಂಟ್ ಬಂದಿದೆ. ಅದರಲ್ಲಿ ಅವರು ಸರಿಯಾಗಿ ಕರೆಕ್ಟ್ ಮಾಡದೆ ಕಳುಹಿಸಿಕೊಟ್ಟಿದ್ದಾರೆ. ಈ ರೀತಿಯಲ್ಲಿ ನಮ್ಮ ಕಛೇರಿಗಳಲ್ಲಿ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ನಾನು ಮುಖ್ಯವಾಗಿ ಹೇಳುವುದೇನೆಂದರೆ ತೋಟಗಾರಿಕೆ ಇಲಾಖೆಯವರು ತೆಂಗಿನ ಗಿಡಗಳ ರಕ್ಷಣೆಗೆ ಬರಬೇಕೆಂದು

ನಾನು ಸಲಹೆ ಮಾಡುತ್ತೇನೆ. ಮತ್ತೆ ಕೆ.ಡಿ.ಡಿ.ಸಿ. ಇಲಾಖೆಯಲ್ಲಿ ಸುಮಾರು ವರ್ಷಗಳಿಂದ ಹಂಗಾಮಿ ನೌಕರರಾಗಿ ಕೆಲಸ ಮಾಡುತ್ತಿದ್ದಾರೆ. ಅವರನ್ನು ಸರ್ಕಾರದವರು ಆದಷ್ಟು ಬೇಗ ಖಾಯಂ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತೆ ನಮ್ಮ ರಾಜ್ಯದ ಅಮೃತಮಹಲ್ ಕಾವಲು ಏನು ಇದೆ ಅದನ್ನು ಒತ್ತುವರಿ ಮಾಡಿಕೊಂಡು ಬಂದಿದ್ದಾರೆಂದು ನಾನು ಕೇಳಿದ್ದೇನೆ. ಆದರೆ ಅದನ್ನು ತೋಟಗಾರಿಕೆ ಇಲಾಖೆಯವರು ವಹಿಸಿಕೊಂಡು ಸರ್ವೆ ಮಾಡಿಸಿ ಅಲ್ಲಿ ತೋಟಗಾರಿಕೆ ಇಲಾಖೆಯುವರು ತೆಂಗಿನ ಗಿಡಗಳನ್ನು ಬೆಳೆಸಬೇಕೆಂದು ಸಲಹೆ ಮಾಡುತ್ತೇನೆ. ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಂಪಾಪತಿ : (ದಾವಣಗೆರೆ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ತೋಟಗಾರಿಕೆ ಇಲಾಖೆಯ ಮಂತ್ರಿಗಳು ಹಾಗೂ ಸಾರಿಗೆ ಸಂಸ್ಥೆಯ ಇಲಾಖೆಯ ಮಂತ್ರಿಗಳು ಹಾಗೂ ಕಾರ್ಮಿಕ ಇಲಾಖೆಯ ಮಂತ್ರಿಗಳು ಮಂಡಿಸಿರತಕ್ಕಂತ ಬೇಡಿಕೆಗಳಿಗೆ ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈಗಾಗಲೇ ಅನೇಕ ಜನ ಮಾನ್ಯ ಸದಸ್ಯರು ಮಾತನಾಡಿ ಅನೇಕ ವಿಷಯಗಳನ್ನು ತಿಳಿಸಿದ್ದಾರೆ. ಆದರೆ ಮುಖ್ಯವಾಗಿ ನಾನು ಒಂದೆರಡು ವಿಷಯಗಳನ್ನು ಹೇಳಬೇಕಾಗಿದೆ. ಮೊಟ್ಟಮೊದಲನೆಯದಾಗಿ, ನಮ್ಮ ಪಶುಸಂಗೋಪನಾ ಮಂತ್ರಿಗಳಿಗೆ ತಿಳಿಯಬಯಸುವುದೇನೆಂದರೆ ನಮ್ಮ ದಾವಣಗೆರೆಯಲ್ಲಿ ಹಾಲು ಉತ್ಪಾದನೆ ಬಹಳ ಹೆಚ್ಚಿದೆ. ಹಳ್ಳಿಗಳಲ್ಲಿ ಹಾಲು ಮಾರಾಟ ಮಾಡಬೇಕಾದರೂ ಕೂಡ ಬಹಳ ಕಷ್ಟವಾಗುತ್ತದೆ. ಅಲ್ಲಿ ಒಂದು ಡೈರಿ ಇದೆ. ಆದರೆ ಆ ಡೈರಿಗೆ ಹಾಲು ತೆಗೆದುಕೊಂಡು ಹೋಗಲು ಬಹಳ ಕಷ್ಟವಾಗುತ್ತದೆ. ಆದ್ದರಿಂದ ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ನಮ್ಮಲ್ಲಿ ಹೆಚ್ಚು ಹೆಚ್ಚು ಡೈರಿಗಳನ್ನು ಕೊಟ್ಟು ಅಲ್ಲಿ ಹೆಚ್ಚು ಹಾಲಿನ ಕ್ಷೀರವನ್ನು ಕೊಂಡುಕೊಳ್ಳುವಂಥ ಏರ್ಪಾಡು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತೆ ದಾವಣಗೆರೆಯಲ್ಲಿ ಒಂದು ತೋಟಗಾರಿಕೆ ಇಲಾಖೆ ಇದೆ. ಆದರೆ ಅಲ್ಲಿ ಸಮರ್ಪಕವಾದ ರೀತಿಯಲ್ಲಿ ಕೆಲಸ ನಡೆಯುತ್ತಿಲ್ಲ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಿಗೆ ಸೂಚನೆ ಮಾಡುವುದೇನೆಂದರೆ ಆ ತೋಟಗಾರಿಕೆ ಇಲಾಖೆ ರೈತರಿಗೆ ಮಾರ್ಗದರ್ಶಿಯಾಗುವಂತಹ ರೀತಿಯಲ್ಲಿ ಮಾರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಮತ್ತೆ ದಾವಣಗೆರೆಯ ರೆಗ್ಯುಲೇಟೆಡ್ ಮಾರ್ಕೆಟ್ ಪಕ್ಕದಲ್ಲಿ ಸುಮಾರು 30 ಎಕರೆ ಜಮೀನು ಇದೆ. ಆದರೆ ಆ ಜಮೀನಿನಲ್ಲಿ ಸರಿಯಾದಂಥ ರೀತಿಯಲ್ಲಿ ಗಿಡಗಳನ್ನು ಬೆಳೆಸಲು ನೀರಿನ ಸೌಕರ್ಯ ಇಲ್ಲ. ಇದರಿಂದ ಅವರು ಅಲ್ಲಿ ಗಿಡಗಳನ್ನು ಬೆಳೆಸುವುದಕ್ಕೆ ಕಷ್ಟವಾಗಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಅಲ್ಲಿ ನೀರಿನ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟು ತೋಟವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಅಲ್ಲಿ ರೈತರು ಹೋಗಿ ನೋಡಿದರೆ ಈ ತೋಟಗಾರಿಕೆ ಇಲಾಖೆಯವರ ಮಾರ್ಗದರ್ಶನ ನಮಗೆ ಬೇಡವೆಂದು ಹೇಳುತ್ತಾರೆ. ಆ ಪರಿಸ್ಥಿತಿಯಲ್ಲಿ ಅಲ್ಲಿ ತೋಟಗಾರಿಕೆ ಇಲಾಖೆ ಇದೆ. ಆದ್ದರಿಂದ ಅಲ್ಲಿ ಸರಿಯಾದಂಥ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ಕಾರ್ಮಿಕರ ಬಗ್ಗೆ ಇದುವರೆಗೂ ಅನೇಕ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಆದರೂ ಕೂಡ ನಾನು ಹೆಚ್ಚಾಗಿ ಮಾತನಾಡುವುದಕ್ಕೆ ಹೋಗದೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ. ಅದು ಏನೆಂದರೆ ಈ ಕಾರ್ಖಾನೆಗಳಲ್ಲಿ ಕಾಂಟ್ರ್ಯಾಕ್ಟ್ ಪದ್ಧತಿ ಮೇಲೆ ಕೆಲಸ ಮಾಡುತ್ತಿರುವ ನೌಕರರನ್ನು ಖಾಯಂಗೊಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇಲ್ಲದಿದ್ದರೆ ಆ ಒಂದು ಪದ್ಧತಿಯನ್ನು ಸರ್ಕಾರದವರು ರದ್ದುಗೊಳಿಸಬೇಕೆಂದೂ ಸಹ ಹೇಳುತ್ತೇನೆ. ಇವತ್ತು ಕಾರ್ಖಾನೆಗಳಲ್ಲಿ ಖಾಯಂ ಕೆಲಸ ಮಾಡತಕ್ಕಂಥವರು ಸುಮಾರು 700-800 ರೂಪಾಯಿಗಳ ಸಂಬಳವನ್ನು ಪಡೆಯುತ್ತಿದ್ದರೆ ಈ ಕಾಟ್ರಾಕ್ಟ್‌ಕ್ಯಾರೇಜದಾರರು ಸುಮಾರು 300 ರೂಪಾಯಿಗಳಿಗೆ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಅವರನ್ನು ಖಾಯಂಗೊಳಿಸಿ ನ್ಯಾಯ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ದಯವಿಟ್ಟು ಈ ಆ್ಯಕ್ಟನ್ನು ರದ್ದುಮಾಡುವುದಕ್ಕೆ ಬೇಕಾದಂತಹ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತೇನೆ. ಅಧ್ಯಕ್ಷರೇ, 1938 ರಲ್ಲಿ ಮಕ್ಕಳ ನೇಮಕಾತಿ ಕಾಯಿದೆಯನ್ನು ಮಾಡಿದ್ದರು. ಈಗ 1983 ರಲ್ಲಿ ನಾವು ಇದ್ದೇವೆ. ಈ ಮಕ್ಕಳು ಕೆಲಸ ಮಾಡುತ್ತಲೇ ಇದ್ದಾರೆ.

ಅಧ್ಯಕ್ಷರು.—38 ರಿಂದ 83 ಕ್ಕೆ ಸ್ವಲ್ಪ ತಿರುವು-ಮುರುವು ಆಗಿದೆ ಅಷ್ಟೆ.

ಶ್ರೀ ಪಂಪಾಪತಿ.—ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಬೇಕು. ಚಿಕ್ಕ ಮಕ್ಕಳು ಇವತ್ತು ಕೆಲಸ ಮಾಡುತ್ತಿದ್ದಾರೆ. ಯಾರೂ ಈ ವಿಷಯದ ಕಡೆಗೆ ಗಮನ ಹರಿಸುತ್ತಿಲ್ಲ. ಮುಂದೆ ಅವರು ದೊಡ್ಡವರಾಗತಕ್ಕಂಥ ಪರಿಸ್ಥಿತಿ ಇದೆ. ಆಗ ಅವರ ಪರಿಸ್ಥಿತಿ ಏನಾಗಬೇಕು ? ಇನ್ನುಮುಂದಾದರೂ ಕೂಡ ಇಂತಹ ಪರಿಸ್ಥಿತಿ ಉಂಟಾಗಬಾರದು ಎಂಬುದು ನನ್ನ ಕಳಕಳಿಯ ವಿನಂತಿ.

ಇನ್ನು ಹೆರಿಗೆ ಸೌಲಭ್ಯ ಯಾರಿಗೆ ಸಿಗುತ್ತದೆ ಎಂದು ವಿಚಾರ ಮಾಡುವುದಾದರೆ, ಇವತ್ತು ದಾವಣಗೆರೆ, ಗದಗ್, ರಾಣೆಬೆನ್ನೂರು, ಹುಬ್ಬಳ್ಳಿಯಲ್ಲಿ ಸ್ಪಿನ್ನಿಂಗ್ ಫ್ಯಾಕ್ಟರಿಗಳಲ್ಲಿ ಹೆಣ್ಣುಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಕಾರ್ಖಾನೆಗಳಲ್ಲಿ ಇರುವ ಹೆಣ್ಣುಮಕ್ಕಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಾರೆ. ಆದರೆ ಅವರಿಗೆ ಯಾವ ಸೌಲಭ್ಯಗಳೂ ಇಲ್ಲ. ಕನಿಷ್ಠ ಕೂಲಿ ಎಂದು ಹೇಳುತ್ತೇವೆ. ಏಳು ರೂಪಾಯಿಗಳು ನಲ್ವತ್ತು ಪೈಸೆ ಅವರಿಗೆ ಸಿಗಬೇಕು, ಸಿಗುತ್ತಿಲ್ಲ. ಅವರಿಗೆ ಕೇವಲ ಐದು ರೂಪಾಯಿಗಳು ಮಾತ್ರ ಸಿಗುತ್ತಿದೆ.

ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯದ ಕಡೆಗೆ ಗಮನವನ್ನೇ ಹರಿಸುವುದಿಲ್ಲ. ಆದ್ದರಿಂದ ಲೇಬರ್ ಇನ್ಸ್‌ಪೆಕ್ಟರ್, ಅಸಿಸ್ಟೆಂಟ್ ಲೇಬರ್ ಕಮೀಷನರ್ ಇವೆಲ್ಲವನ್ನೂ ನೋಡಬೇಕು. ಅವರು ಇದನ್ನೆಲ್ಲಾ ನೋಡಿದಾಗ ಮಾತ್ರ ಕಾಯಿದೆ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದಕ್ಕೆ ಸಾಧ್ಯವಾಗುತ್ತದೆ. ಸುಮ್ಮನೆ ಕಾಯದೆ ಮಾಡಿ, ಅಧಿಕಾರಿಗಳನ್ನು ನೇಮಿಸಿ, ಎಲ್ಲಾ ಸರಿಹೋಗುತ್ತದೆ ಎಂದು ತಿಳಿದುಕೊಂಡರೆ ತಪ್ಪಾದೀತು. ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಕಾರ್ಮಿಕರು ಸಂಘಟಿತರಾಗಿ ಹೋರಾಟ ಮಾಡುತ್ತಾರೆ, ಮುಷ್ಕರ ಮಾಡುತ್ತಾರೆ ಮತ್ತು ತಮಗೆ ಬೇಕಾದಂತಹ ಎಲ್ಲಾ ಅನುಕೂಲತೆಗಳನ್ನು ಪಡೆದುಕೊಳ್ಳುತ್ತಾರೆ. ಆದರೆ, ಸಣ್ಣ ಕೈಗಾರಿಕೆಗಳಲ್ಲಿ ಕಾರ್ಮಿಕರಿಗೆ ಯಾವ ಸವಲತ್ತುಗಳೂ ದೊರೆಯುತ್ತಿಲ್ಲವೆಂದು ಬಹಳ ವಿಷಾದದಿಂದ ನಾನು ಹೇಳುತ್ತೇನೆ. ಇದು ಆಗದಂತೆ ನೋಡಿಕೊಳ್ಳಬೇಕಾದರೆ ಅಧಿಕಾರಿಗಳು ಇದರ ಬಗ್ಗೆ ಗಮನ ಹರಿಸಿ ಕ್ರಮ ತೆಗೆದುಕೊಳ್ಳಬೇಕಾದದ್ದು ಅತ್ಯಗತ್ಯವಾಗಿದೆ. ದಯವಿಟ್ಟು ಇದರ ಬಗ್ಗೆ ಸರ್ಕಾರದವರು ನೋಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

(ಅಧ್ಯಕ್ಷರು ಗಂಟೆ ಬಾರಿಸಿದ ಸದ್ದು)

ಅಧ್ಯಕ್ಷರೇ, ತಾವು ಬೆಲ್ಲು ಹೊಡೆಯುತ್ತಿದ್ದೀರಿ. ನನಗೆ ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು.—ನೀವು ಕೇಳಿದ್ದಕ್ಕಿಂತ ಎರಡು ಪಟ್ಟು ಸಮಯ ಕೊಟ್ಟಿದ್ದೇನೆ.

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಇಲ್ಲಿ ಏಳನೇ ಪುಟದಲ್ಲಿ ಕನಿಷ್ಠ ವೇತನ ಕಾಯದೆ ರೀತ್ಯಾ ತನಿಖೆ ಮಾಡಿದ ಸಂಖ್ಯೆ 17,572 ಎಂದು ಇದೆ. ಕಾನೂನು ಪ್ರಕಾರ ಕ್ರಮ ತೆಗೆದುಕೊಂಡಿದ್ದು 115 ಎಂದು ಇದೆ. ಅಪರಾಧಗಳು ರುಜುವಾತು ಆಗಿದ್ದು 127 ಎಂದು ಇದೆ. ರುಜುವಾತು ಆದದ್ದು 127 ಆದರೆ ಕ್ರಮ ತೆಗೆದುಕೊಂಡಿದ್ದು 115 ಏಕೆ? ಏತಕ್ಕೋಸ್ಕರ ಇದು ಇಷ್ಟು ಕಡಿಮೆ ಆಯಿತು? 17 ಸಾವಿರ ತನಿಖೆ ಮಾಡಿ ಕೇವಲ 115 ಜನರಿಗೆ ಮಾತ್ರ ಇವತ್ತು ಕ್ರಮ ತೆಗೆದುಕೊಂಡಿದ್ದೀರಿ. ಇದರಿಂದ ಅಧಿಕಾರಿಗಳು ನಿರ್ಲಕ್ಷ್ಯ ಮಾಡುತ್ತಿದ್ದಾರೆ ಎಂದು ಧಾರಾಳವಾಗಿ ಹೇಳಬಹುದಾಗಿದೆ. ಆದ್ದರಿಂದ ಅಧಿಕಾರಿಗಳು ಸ್ವಲ್ಪ ಸರಿಯಾದಂತಹ, ವ್ಯವಸ್ಥಿತವಾಗಿ ಕೆಲಸ ಮಾಡಬೇಕೆಂದು ಅವರಿಗೆ ಹೇಳಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ನಮ್ಮ ಜನತಾ ಸರ್ಕಾರ ಬಂದ ಮೇಲೆ ಹತ್ತಿಗಿರಣಿ, ಕಾರ್ಖಾನೆಗಳ ಬಗ್ಗೆ ವ್ಯವಸ್ಥಿತವಾಗಿ ಕೆಲಸ ಮಾಡಬೇಕು ಎಂದು ಮಾತನಾಡಿದ್ದಾರೆ. ಎರಡೂವರೆ ವರ್ಷಗಳಿಂದ ನಡೆದ ಒಂದು ವಿವಾದದಲ್ಲಿ ಅಜೀಜ್ ಸೇಠ್‌ರವರು ಕಾರ್ಮಿಕ ಸಚಿವರಾಗಿ ಬಂದಮೇಲೆ ಮೂರು ದಿವಸ ಕಾಲ ಮಧ್ಯಾಹ್ನ 2 ಗಂಟೆಯಿಂದ ರಾತ್ರಿ ಹನ್ನೆರಡು ಗಂಟೆವರೆಗೆ ಕುಳಿತುಕೊಂಡು ವಿವಾದವನ್ನು ಇತ್ಯರ್ಥಪಡಿಸಿ ಹತ್ತಿಗಿರಣಿಯಲ್ಲಿ ಇರತಕ್ಕಂಥ ಇಲ್ಲಾ ಕೆಲಸಗಾರರಿಗೆ 26 ರೂಪಾಯಿಗಳು ಜಾಸ್ತಿ ಸಿಗುವುದಕ್ಕೆ ಪ್ರಯತ್ನಪಟ್ಟರು. ಆದರೆ ಕೋ-ಆಪರೇಟಿವ್ ಕೈಗಾರಿಕೆಗಳು, ಸಹಕಾರ ಸಂಸ್ಥೆಗಳ ಅಧೀನ ಇರತಕ್ಕ ಹತ್ತಿಗಿರಣಿಗಳು ಮತ್ತು ಎನ್.ಟಿ.ಸಿ. ಕೇಂದ್ರ ಸರ್ಕಾರದ ಒಡೆತನದಲ್ಲಿರುವಂಥ ಕೈಗಾರಿಕೆಗಳು ಮಾತ್ರ ಇದನ್ನು ಒಪ್ಪಲಿಲ್ಲ. ಅದನ್ನು ಒಪ್ಪುವುದಿಲ್ಲವೆಂದು ಅವರು ಪತ್ರ ಬರೆದುಕೊಟ್ಟಿದ್ದಾರೆ. ಮಾನ್ಯ ಕಾರ್ಮಿಕ ಮಂತ್ರಿಗಳು ಅವರ ಜೊತೆ ಮಾತನಾಡಿ ಒಂದು ಒಪ್ಪಂದಕ್ಕೆ ಬಂದು ಈ ಸೌಲಭ್ಯವನ್ನು ಕೊಡಿಸುತ್ತೇನೆ ಎಂದು ಹೇಳಿದ್ದಾರೆ. ಆ ರೀತಿ ಅವರು ಭರವಸೆಯನ್ನೂ ಕೂಡ ಕೊಟ್ಟಿದ್ದಾರೆ. ಆದ್ದರಿಂದ ಮಾನ್ಯ ಕಾರ್ಮಿಕ ಸಚಿವರು ಕೋ-ಆಪರೇಟಿವ್ ಹತ್ತಿಗಿರಣಿಗಳು, ಮತ್ತು ಎನ್.ಟಿ.ಸಿ. ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೂ ಕೂಡ 26 ರೂಪಾಯಿಗಳ ಹೆಚ್ಚಳ ವೇತನ ಕೊಡುವ ಪ್ರಯತ್ನವನ್ನು ಆದಷ್ಟು ಬೇಗನೆ ಮಾಡಬೇಕೆಂದು ಒತ್ತಾಯವನ್ನು ಮಾಡುತ್ತೇನೆ. ಇನ್ನೂ ಕೆಲವು ವಿಷಯಗಳನ್ನು ಹೇಳಬೇಕೆಂದು ನನ್ನ ಮನಸ್ಸಿನಲ್ಲಿ ಇತ್ತು.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಸದಸ್ಯರು ಹೆರಿಗೆ ಸೌಲಭ್ಯವನ್ನು ಎಲ್ಲರಿಗೂ ಕೊಡಬೇಕೆಂದು ಒಂದು ಮಾತನ್ನು ಹೇಳಿದರು. ಆದರೆ ಗರ್ಭಿಣಿ ಆದವರಿಗೆ ಮಾತ್ರ ಇದನ್ನು ಕೊಡುವುದಕ್ಕೆ ಸಾಧ್ಯ.

ಶ್ರೀ ಪಂಪಾಪತಿ.—ಎಲ್ಲರಿಗೂ ಕೊಡಿ ಎಂದರೆ ಯಾರು ಅದಕ್ಕೆ ಅರ್ಹರಾಗಿರುತ್ತಾರೋ ಅವರಿಗೆ ಕೊಡಿ ಎಂದು ಅರ್ಥ.

ಶ್ರೀ ಎಂ. ರಘುಪತಿ.—ಮಾನ್ಯ ಪಂಪಾಪತಿಗಳು ಹೇಳಿದ್ದು ಹೆರಿಗೆ ಆಗದವರಿಗೂ ಕೊಡುತ್ತಿದ್ದಾರೆ ಎಂಬ ಅರ್ಥದಲ್ಲಿ ಇರಬೇಕು.

ಅಧ್ಯಕ್ಷರು.—ಪಾರ್ಲಿಮೆಂಟರಿ ವ್ಯವಹಾರ ಸ್ವಲ್ಪ ಜೀವಂತವಾಗಿರಲಿ ಎನ್ನುವ ಅಭಿಪ್ರಾಯದಲ್ಲಿ ಅವರು ಹೇಳಿದ್ದು.

ಶ್ರೀ ಪಂಪಾಪತಿ.—ಈಗ ಏನಾಗಿದೆ ಎಂದರೆ, ಅಧ್ಯಕ್ಷರೇ, ನಮ್ಮ ಹಿಂದಿನ ಸರ್ಕಾರ 26 ಕೈಗಾರಿಕೆಗಳಿಗೆ ಕನಿಷ್ಠ ವೇತನ ಗೊತ್ತುಮಾಡಿತ್ತು. ಹೀಗೆಗೊತ್ತು ಮಾಡಿದ್ದರಲ್ಲಿ ಲೋಪದೋಷಗಳು ಇವೆ ಎಂದು ಹೇಳಿ ಈ 26 ಕಾರ್ಖಾನೆಗಳ ಮಾಲೀಕರೂ ಹೈಕೋರ್ಟಿಗೆ ಹೋದರು. ಅದು ಅಲ್ಲಿ ಹಾಗೆಯೇ ಉಳಿದಿದ್ದು ತೀರ್ಮಾನವಾಗುವವರೆಗೆ ಮಾಲೀಕರು ಅರ್ಧ ಭಾಗದಷ್ಟು ಕೊಡಬೇಕೆಂದು ಹೈಕೋರ್ಟಿನವರು ತೀರ್ಮಾನ ನೀಡಿದ್ದಾರೆ. ಇದರಿಂದ ಕಾರ್ಮಿಕರಿಗೆ ಅನ್ಯಾಯವಾಗಿದೆ. ಒಂಭತ್ತು ರೂಪಾಯಿ ನಲ್ವತ್ತು ಪೈಸೆ, ಇಪ್ಪತ್ತು ಪೈಸೆ ಬರುವ ಜಾಗದಲ್ಲಿ ಏಳು ರೂಪಾಯಿ ನಲ್ವತ್ತು ಪೈಸೆ ಬರುತ್ತಿದೆ. ಇದು ಅಂದು ತೀರ್ಮಾನವಾಗಿದ್ದಾದರೂ ಇವತ್ತಿನ

ಬೆಲೆಗಳಿಗೂ ಅಂದಿನ ಬೆಲೆಗಳಿಗೂ ವ್ಯತ್ಯಾಸ ಇದೆ. ಈ ದೃಷ್ಟಿಯಿಂದ ನೋಡುವುದಾದರೆ ಅವರಿಗೆ ಸಿಗುತ್ತಿರುವ ಕೂಲಿ ತುಂಬಾ ಕಡಿಮೆಯೆಂದೇ ಹೇಳಬೇಕು. ಕನಿಷ್ಠ ಕೂಲಿಯೆಂದು ನಿಗದಿ ಮಾಡುವುದಕ್ಕೆ ಮಾನ್ಯ ಕಾರ್ಮಿಕ ಸಚಿವರು ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಅದಷ್ಟು ಬೇಗನೆ ಆಜ್ಞೆಯನ್ನು ಹೊರಡಿಸಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಕಾರ್ಮಿಕ ಸಚಿವರನ್ನು ಕೇಳಿಕೊಳ್ಳುತ್ತೇನೆ. ಕನಿಷ್ಠ ವೇತನ ಹತ್ತು ರೂಪಾಯಿಗಳಿಗೆ ಕಡಿಮೆ ಇಲ್ಲದ ಹಾಗೆ ಆಜ್ಞೆಯನ್ನು ಹೊರಡಿಸಬೇಕು. ಇನ್ನೊಂದು ವಿಷಯವನ್ನು ನಾನು ರಸ್ತೆ ಸಾರಿಗೆ ಸಂಬಂಧಪಟ್ಟ ಹಾಗೆ ಮಾತನಾಡಬೇಕೆಂದರೆ ನಮ್ಮ ದಾವಣಗೆರೆ ನಗರ ಸುತ್ತಮುತ್ತ ಕೈಗಾರಿಕೆಗಳು ಬೆಳೆಯುತಕ್ಕಂಥ ನಗರ. ಕೈಗಾರಿಕಾ ಕೇಂದ್ರ ಆಗುತ್ತಾ ಇದೆ. ಆದ್ದರಿಂದ ಅಲ್ಲಿ ಸುಮಾರು ಹದಿನೈದು ಕಿಲೋಮೀಟರ್ ಸುತ್ತಳತೆಯಲ್ಲಿ ಬಸ್ಸುಗಳನ್ನು ನಡೆಸಬೇಕೆಂದು ತೆಗೆದುಕೊಂಡಿದ್ದಾರೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಹೆಚ್ಚಿನ ಗಮನ ಹರಿಸಿ ಕಾರ್ಮಿಕರಿಗೆ, ವಿದ್ಯಾರ್ಥಿಗಳಿಗೆ, ರೈತರಿಗೆ ಈ ವಿಷಯದಲ್ಲಿ ಆಗುತ್ತಿರುವ ತೊಂದರೆಗಳನ್ನು ತಪ್ಪಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸಂಬಂಧಪಟ್ಟ ಸಚಿವರನ್ನು ಕೇಳಿಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MR. SPEAKER.—Now, the House stands adjourned to meet at 11-00 A.M. tomorrow.

(The House adjourned at Fifty minutes past Five of the Clock to meet again at Eleven of the Clock on Wednesday, the 7th September, 1983.)